ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಪುಟಗಳು : 36

ರೂ. 28/–

ಕನ್ನಡ–ಇಂಗ್ಲೀಷ್ ಮಾಸಿಕ

# ಬಾಪು ಪ್ರಪಂಚ

BAAPU PRAPANCHA

ಸಂಪುಟ–07 • ಸಂಚಿಕೆ–01 • ಮೇ 2025



## ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ
ಬೆಂಗಳೂರು - 560001

https://gandhibhavan.in

# ಗಾಂಧಿ ಭವನ ಡಿಜಿಟಲ್ ಆರ್ಕೈವ್

#SERVANTSOFKNOWLEDGE
Scanning Is The New Spinning

https://archive.org/details/GandhiBhavan

**ಗಾಂಧೀಜಿಯವರ ವಿಚಾರಗಳನ್ನು ಪ್ರಸಾರಗೊಳಿಸಲು ಕೈಗೊಂಡಿರುವ ಡಿಜಿಟಲ್ ಮಾಧ್ಯಮ ಚಟುವಟಿಕೆ**



## ಗಾಂಧಿ ಸಂಚಯ

https://gandhi.sanchaya.net

## ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಎಲ್ಲ ಪ್ರಕಟಣೆಗಳು ಈ ಜಾಲತಾಣದಲ್ಲಿ ಉಚಿತವಾಗಿ ಲಭ್ಯ

## ಬಾಪೂ ಪ್ರಪಂಚ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಮಾಸಿಕ
'ಬಾಪೂ ಪ್ರಪಂಚ ' ಇ - ಪುಸ್ತಕ ಇಲ್ಲಿ ದೊರೆಯುತ್ತದೆ.

Google Play Books

iBooks

ರೂ. 28/- BAAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

# ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-07 • ಸಂಚಿಕೆ-01 • ಮೇ 2025

**05** ಕರ್ನಾಟಕದ ಕಸ್ತೂರ್ ಬಾ : ಯಶೋಧರಮ್ಮ ದಾಸಪ್ಪ
- ರೋಹಿತ್ ಅಗಸರಹಳ್ಳಿ

**10** ಗಾಂಧಿಯ ದೃಷ್ಟಿಕೋನದಲ್ಲಿ ಹಿಂಸೆ ಮತ್ತು ಭಯೋತ್ಪಾದನೆ
- ಪಾಸ್ಕಲ್ ಆಲಿನ್ ನಜರೆತ್

**14** ಮಹಾತ್ಮನ ಅಹಿಂಸಾ ತತ್ವದ ಘೋಷಣೆ
- ಡಾ.ಮಂಡಲಿ ಬುದ್ಧ ಪ್ರಸಾದ್

**17** ಜಗತ್ತನ್ನೆ ಯಾಮಾರಿಸಿದೆ ಮುದುಕ
- ವಿಜಯ್ ಹನಕೆರೆ

**18** ಮಹಾತ್ಮರ ಹಾದಿ
- ವಿವೇಕಾನಂದ ಹೆಚ್. ಕೆ.

**20** ಗಾಂಧಿ ಅಂತರ್ಯ : ಪುಸ್ತಕ ಪರಿಚಯ
- ಡಾ. ಹೆಚ್.ಎಸ್. ಸುರೇಶ್

**24** ಅಪ್ರತಿಮ ಹೋರಾಟಗಾರ : ಎಚ್. ಎಸ್. ದೊರೆಸ್ವಾಮಿ

**26** ಯುವ ಸಮುದಾಯಕ್ಕೆ ಗಾಂಧಿ
- ವಿಜಯ್ ಹನಕೆರೆ

**31** ಚಿತ್ರಾವಳಿ

**32** ಎಲ್ಲರ ಗಾಂಧೀಜಿ: ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು
-ನಟರಾಜ್ ಹುಳಿಯಾರ್

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

**ಬಾಪು ಪ್ರಪಂಚ**
ಕನ್ನಡ-ಇಂಗ್ಲೀಷ್ ಮಾಸಿಕ

**BAPU PRAPANCHA**
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
**ನಾಡೋಜ ಡಾ. ವೂಡೇ ಪಿ. ಕೃಷ್ಣ**

Chief Editor :
**Nadoja Dr Wooday P Krishna**

ಸಂಪಾದಕರು :
**ಎನ್. ಆರ್. ವಿಶುಕುಮಾರ್**

Editor :
**N R Vishukumar**

**ಪ್ರಕಾಶಕರು :**
**ಕಾರ್ಯದರ್ಶಿ,**
**ಕರ್ನಾಟಕ ಗಾಂಧಿ ಸ್ಮಾರಕ ನಿಧಿ**
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001

Published by :
**Secretary**
**Karnataka Gandhi Smaraka Nidhi**
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
**Printastic**
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು
ಬಾಪು ಪ್ರಪಂಚದಲ್ಲಿನ ಚಿತ್ರಗಳು ಸಾಂದರ್ಭಿಕವಾಗಿರುತ್ತದೆ

Design : **Ujwal Creations**, Bangalore

# ಪತ್ರಗಳು

**ಮಾನ್ಯರೆ ,**

**ಬಾಪು ಪ್ರಪಂಚ, ಏಪ್ರಿಲ್ 25**

ಪ್ರಬುದ್ಧ ಬರಹಗಳಿಂದ ಕೂಡಿದ ಮತ್ತೊಂದು ಸಂಚಿಕೆ.

ದಂಡಿ ಯಾತ್ರೆ ಕುರಿತ ಡಿ ಎಸ್ ನಾಗ ಭೂಷಣ ಅವರ ಪುಸ್ತಕದ ಒಂದು ಅಧ್ಯಾಯವನ್ನು ಇಲ್ಲಿ ಪ್ರಕಟಿಸಿರುವುದು ಸೂಕ್ತವೇ ಆಗಿದೆ. ಉಪ್ಪಿನ ಸತ್ಯಾಗ್ರಹದ ವಿವರಗಳನ್ನು ಮತ್ತು ಪರಿಣಾಮಗಳನ್ನು ಡಿ ಎಸ್ ಎನ್ ಸಮಗ್ರವಾಗಿ ನಿರೂಪಿಸಿದ್ದಾರೆ. ದಾಂಡಿ ಯಾತ್ರೆ ಕುರಿತಾದ ನೆಹರು ಅವರ ಮಾತು, "ನಿಮ್ಮ ಮಾಂತ್ರಿಕ ಸ್ಪರ್ಷದಿಂದ ನಮ್ಮಂತವರ ಗದ್ಯಮಯ ಬದುಕು ಮಹಾಕಾವ್ಯವೊಂದರ ಬೆಡಗನ್ನು ಪಡೆದುಕೊಂಡಿದೆ'," ಎಂತಹ ಮೌಲಿಕ ಮೆಚ್ಚುಗೆ!


ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಯಲ್ಲಿ ಸಮಾನತೆಯ ಅಂಶವನ್ನು ಕೆ. ವಿ. ನಾರಾಯಣ "ನೀರು ಮತ್ತು ಉಪ್ಪು" ಲೇಖನದಲ್ಲಿ ಸೊಗಸಾಗಿ ಗುರುತಿಸಿದ್ದಾರೆ.

ಎಲ್ಲರ ಗಾಂಧೀಜಿ ಮೂಲದಿಂದ, ಪ್ರತಿ ತಿಂಗಳು "ಬಾಪೂ ಚಿಂತನೆ" ಯ ಆಯ್ದ ತುಣುಕುಗಳನ್ನು ಪ್ರಕಟಿಸುವ ನಿಮ್ಮ ನಿರ್ಧಾರ ಸರಿಯಾದದ್ದು ಎನ್ನುವುದು ನನ್ನ ಅನ್ನಿಸಿಕೆ.

ಪ್ರತಿ ಸಂಚಿಕೆಯಲ್ಲೂ ಬಾಪು ಕುರಿತು ಉಪಯುಕ್ತ ಮಾಹಿತಿ, ಚಿಂತನೆಗಳನ್ನು ನಾನು ಕಂಡುಕೊಳ್ಳುತ್ತಿದ್ದೇನೆ.

ಧನ್ಯವಾದಗಳೊಂದಿಗೆ ಶುಭಾಶಯಗಳು.

**ಎಚ್ ಎಸ್ ಈಶ್ವರ, ಬೆಂಗಳೂರು**




ಪ್ರಿಯರೆ,

ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

**ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು**
**https://gandhibhavan.in**
**ಜಾಲತಾಣದಲ್ಲಿ ವೀಕ್ಷಿಸಿ.**

ಪತ್ರಿಕೆಯ ಬಗ್ಗೆ
ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
**ಸಂಪಾದಕರು, ಬಾಪು ಪ್ರಪಂಚ**
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com



## ಕರ್ನಾಟಕದ ಕಸ್ತೂರ್ ಬಾ ..

# ಯಶೋದರಮ್ಮ ದಾಸಪ್ಪ

▪ ರೋಹಿತ್ ಅಗಸರಹಳ್ಳಿ

"25 ವರ್ಷಗಳಿಂದ ಹೆಣ್ಣು ಮಕ್ಕಳ ಏಳಿಗೆಗಾಗಿ ದುಡಿದಿದ್ದೇನೆ. ಅವರ ಕಷ್ಟ ಸುಖ ಕಣ್ಣಾರೆ ಕಂಡಿದ್ದೇನೆ. ಕುಡಿತದ ಚಟದಿಂದ ಮುತ್ತಿನಂಥ ಸಂಸಾರಗಳು ಒಡೆದು ಹೋಗಿವೆ. ಪ್ರೇಮಪೂರಿತ ದಾಂಪತ್ಯಗಳು ಮುರಿದು ಬಿದ್ದಿವೆ. ಕುಡಿತದ ಚಟಕ್ಕೀಡಾದ ಮನುಷ್ಯ ಹಾಳಾಗಿ ತನ್ನ ಸಿರಿ ಸಂಪತ್ತನ್ನೆಲ್ಲಾ  ಖಾಲಿಮಾಡಿ ಸಂಸಾರದ ಶಾಂತಿ ಕಳೆದುಕೊಳ್ಳುವುದಕ್ಕೆ ಅವಕಾಶ ನೀಡುವ ಈ ಕಾಯ್ದೆ ಜಾರಿಯಾಗುವುದು ಏನೇನೂ ಸರಿಯಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಕುಡಿತದಿಂದ ಆರೋಗ್ಯ ಕೆಡುತ್ತದೆ. ಆಧ್ಯಾತ್ಮಿಕ ಉನ್ನತಿಯಾಗುವುದಿಲ್ಲ.

ಆರ್ಥಿಕ ಸ್ಥಿತಿ ಕೆಳಮಟ್ಟಕ್ಕೆ ಇಳಿಯುತ್ತದೆ. ಕುಡಿತದ ಚಟ ಅಂಟಿದರೆ ಬಿಡುವುದು ಸಾಧ್ಯವಿಲ್ಲ. ಹೀಗಾಗಿ ದಯವಿಟ್ಟು ಪಾನನಿಷೇಧವನ್ನು ಒಂದು ನೀತಿಯಾಗಿ ಉಳಿಸಿಕೊಳ್ಳಿ . ಇಲ್ಲವೇ ನನ್ನ ರಾಜೀನಾಮೆಯನ್ನು ಒಪ್ಪಿಕೊಳ್ಳಿ."

ಇವು ಸುಮಾರು ಅರುವತ್ತು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರದಲ್ಲಿ ಏಕೈಕ ಮಹಿಳಾ ಕ್ಯಾಬಿನೆಟ್ ಮಂತ್ರಿಗಳಾಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಸದನದಲ್ಲಿ ಆಡಿದ ಮಾತುಗಳು. ಅಂದು ಅವರು ನುಡಿದಂತೆಯೇ ರಾಜೀನಾಮೆ ನೀಡಿ ಹೊರಬಂದರು. ಸಣ್ಣ ಅಧಿಕಾರದ ಸ್ಥಾನಕ್ಕಾಗಿ  ಇಳಿಯಬಾರದ ಕಡೆ ಇಳಿಯುವ ಇಂದಿನ ಸ್ಥಿತಿಯಲ್ಲಿ ಯಶೋಧರಮ್ಮ ಅವರ ಅಧಿಕಾರ ತ್ಯಾಗ ಊಹೆಗೂ ನಿಲುಕದ್ದು.

ಕರ್ನಾಟಕದ ಸ್ವಾತಂತ್ರ್ಯ ಚಳವಳಿ ಮತ್ತು ಸ್ವಾತಂತ್ರ್ಯಾ ನಂತರದ ರಾಜಕೀಯದಲ್ಲಿ ಧ್ರುವತಾರೆಯಂತೆ ಕಂಗೊಳಿಸುವ ಹೆಸರು ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರದು. ಹೊಸಪೀಳಿಗೆಯ ಹಲವರಿಗೆ ಅವರ ಪರಿಚಯ ಅಷ್ಟಾಗಿ ಇದ್ದಿರಲಾರದು. ಕರ್ನಾಟಕ ಇಂಥ ಹಲವು ಧೀಮಂತ ಹೋರಾಟಗಾರರು ಮತ್ತು ರಾಜಕಾರಣಿಗಳನ್ನು ಪಡೆದಿತ್ತು ಎನ್ನುವುದು ಇಂದಿಗೂ ನಾವು ಹೆಮ್ಮೆ ಪಡಬೇಕಾದ ಸಂಗತಿ.

ಯಶೋಧರಾ ಹುಟ್ಟಿದ್ದು 1905 ರ ಮೇ 28 ರಂದು. ಶ್ರೀಮತಿ ರೇವಮ್ಮ ಮತ್ತು ಕೆ.ಎಚ್. ರಾಮಯ್ಯ ಅವರ ಮಗಳಾಗಿ. ಕೆ.ಎಚ್. ರಾಮಯ್ಯ ಅವರು ಮೈಸೂರು ಅರಸೊತ್ತಿಗೆಯ ಆತ್ಮೀಯ ವಲಯದಲ್ಲಿ ಇದ್ದವರು ಮತ್ತು ಆಧುನಿಕ



ಕರ್ನಾಟಕದ ಹಿಂದುಳಿದ ವರ್ಗಗಳ ಏಳಿಗೆಯ ಚರಿತ್ರೆಯಲ್ಲಿ ಭದ್ರ ಸ್ಥಾನ ಪಡೆದವರು. ಎಳವೆಯಿಂದಲೇ ತಮ್ಮ ಮಗಳನ್ನು ಛಲಗಾತಿಯಾಗಿ ಬೆಳೆಸಿದರು. ಯಶೋಧರಾ ಎಳೆಯ ಮಗುವಾಗಿದ್ದಾಗ ಒಮ್ಮೆ ರಾಮಯ್ಯ ಅವರು ಮಗುವನ್ನು ಚಿವುಟಿ ಅಳಿಸಿದರಂತೆ ! . ಅದಕ್ಕೆ ಅವರ ತಾಯಿ ಯಾಕೋ ಮಗುವನ್ನು ಅಳಿಸುತ್ತಿರುವೆ ಎಂದು ಕೇಳಿದರೆ, ಇವಳು ಬೆಳೆದು ದೊಡ್ಡವಳಾಗಿ ಹೋರಾಟದ ಸಭೆಗಳಲ್ಲಿ ಎಲ್ಲರಿಗೂ ಕೇಳುವಂತೆ ಗಟ್ಟಿ ದನಿಯಲ್ಲಿ ಮಾತನಾಡಬೇಕು ಅದಕ್ಕೆ! ಎಂದರಂತೆ.

ಅಪ್ಪನ ಈ ಆಸೆಯನ್ನು ಮಗಳು ಹುಸಿಗೊಳಿಸಲಿಲ್ಲ.

1920 ರ ದಶಕದಲ್ಲಿಯೇ ದೂರದ ಮದ್ರಾಸಿನ ಕ್ವೀನ್ಸ್‌ಮೇರಿ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಅನ್ನು ಪೂರೈಸಿದ ಯಶೋಧರಾ ಅವರ ಮದುವೆ 1926 ರಲ್ಲಿ ಶ್ರೀ ದಾಸಪ್ಪ ಅವರೊಂದಿಗೆ ಜರುಗಿತು. ಅಗ ಅವರಿಗೆ 21 ವರ್ಷ. ನಂತರದ ವರ್ಷಗಳಲ್ಲಿ ಮೈಸೂರಿನ ರಾಜಕಾರಣ ಮತ್ತು ಸ್ವಾತಂತ್ರ್ಯ ಚಳವಳಿ ಎರಡರಲ್ಲಿಯೂ ತಮ್ಮ ಛಾಪು ಮೂಡಿಸಿದರು ಯಶೋಧರಾ. 1933 ರಲ್ಲಿ ತಂದೆಯನ್ನು ಕಳೆದುಕೊಂಡ ಅವರು ಬಹಳ ಬೇಗ ಚೇತರಿಸಿಕೊಂಡು ರಾಜಕೀಯ ಚಳವಳಿಯಲ್ಲಿ ಸಕ್ರಿಯರಾದರು.

ಕರ್ನಾಟಕದ ಸ್ವಾತಂತ್ರ್ಯ ಚಳವಳಿಯ ಎರಡು ಮಹತ್ವದ ಮೈಲುಗಲ್ಲುಗಳೆಂದರೆ, ಶಿವಪುರದ ಧ್ವಜ ಸತ್ಯಾಗ್ರಹ ಮತ್ತು ವಿದುರಾಶ್ವಥ ದುರಂತ. ಇವೆರಡೂ ಹೋರಾಟಗಳಲ್ಲಿ ಯಶೋಧರಾ ಅವರ ಹೆಜ್ಜೆ ಗುರುತುಗಳಿವೆ. 1938 ರಲ್ಲಿ ಮೈಸೂರು ಅರಸೊತ್ತಿಗೆಯ ಆಜ್ಞೆಯನ್ನು ಉಲ್ಲಂಘಿಸಿ ಧ್ವಜ ಹಾರಿಸಿದವರಲ್ಲಿ ಯಶೋಧರಮ್ಮ ಕೂಡ ಒಬ್ಬರು. ಮುಂಚೂಣಿಯಲ್ಲಿದ್ದ ಕಾಂಗ್ರೆಸ್ ಮುಖಂಡರನ್ನು ಸರ್ಕಾರ ಬಂಧಿಸಿದಾಗ ಎದೆಗುಂದದ ಯಶೋಧರಾ ತಮ್ಮ ಚಿಕ್ಕ ಮಕ್ಕಳಿಬ್ಬರನ್ನು ಚಳವಳಿಗಾರರ ಮಡಿಲಿಗೆ ಹಾಕಿ ಮುಂಚೂಣಿಯಲ್ಲಿ ನಿಂತು ಧ್ವಜದ ರಕ್ಷಣೆ ಮಾಡಿದರಂತೆ.

ವಿದುರಾಶ್ವಥ ಹೋರಾಟವನ್ನು ಕರ್ನಾಟಕದ ಜಲಿಯನ್ ವಾಲಾಬಾಘ್ ಎಂದೇ ಗುರುತಿಸಲಾಗುತ್ತದೆ. ಶಿವಪುರದ ಸತ್ಯಾಗ್ರಹದಂತೆಯೇ ಶಾಂತಿಯುತವಾಗಿ ನಡೆಯುತ್ತಿದ್ದ ವಿದುರಾಶ್ವಥ ಹೋರಾಟವು ಅಧಿಕಪ್ರಸಂಗಿ ಪೊಲೀಸ್ ಅಧಿಕಾರಿಯೊಬ್ಬನಿಂದ ರಕ್ತಸಿಕ್ತವಾಯ್ತು. ಅಂದು ತಮ್ಮ ಪ್ರಾಣವನ್ನು ಸ್ವಾತಂತ್ರ್ಯ ಕ್ಕಾಗಿ ಅರ್ಪಿಸಿದವರು 38 ಜನ ದೇಶಭಕ್ತರು. ಈ ದುರಂತದ ಕಾವನ್ನು ತಣ್ಣಗಾಗಲು ಬಿಡದ ಹೋರಾಟಗಾರರು ಮುಂದಿನ ಅಧಿವೇಶನವನ್ನು ಆ ದುರಂತ ನಡೆದ ಸ್ಥಳದಲ್ಲಿಯೇ ನಡೆಸಿದರು. ಆಗ ದುರಂತದಲ್ಲಿ ಹುತಾತ್ಮಳಾದ ಹೆಣ್ಣುಮಗಳ ಹೆಸರೆತ್ತದ ಗಂಡಾಳ್ವಿಕೆಯ ಮನಃಸ್ಥಿತಿಯ ಹೋರಾಟಗಾರರನ್ನು ತರಾಟೆಗೆ ತೆಗೆದುಕೊಂಡವರು ಶ್ರೀಮತಿ ಯಶೋಧರಮ್ಮ. ಹೀಗೆ ತಾವು ಹೊಸಕಾಲದ ಹೆಣ್ಣು ಜೀವ ಎಂಬುದನ್ನು ಸಾಬೀತು ಪಡಿಸಿದರು.

ಮೈಸೂರಿನಲ್ಲಿ ಒಮ್ಮೆ ವಿದುರಾಶ್ವಥ ದುರಂತದಲ್ಲಿ ಹುತಾತ್ಮರಾದ ಹೋರಾಟಗಾರನ ಪತ್ನಿಗೆ ಯಶೋಧರಮ್ಮ ಆಶ್ರಯ ನೀಡಿದ್ದಾಗ ಅದು ಅರಮನೆಗೆ ತಿಳಿದು; ಅಲ್ಲಿಂದ ಸಂದೇಶ ಬಂತಂತೆ. ಆಕೆಯನ್ನು ವಾಪಾಸು ಕಳಿಸಿ ಇಲ್ಲವೇ ಅರಸೊತ್ತಿಗೆ ಕಡೆಯಿಂದ ಪಡೆದ ಕಟ್ಟಡವನ್ನು ಹಿಂದಿರುಗಿಸಿ ಎಂದು. ಬೇರೆ ಯಾರಾದರೂ ಆಗಿದ್ದರೆ ವಿಶಾಲ ಹಿತಾಸಕ್ತಿಯ ಹೆಸರಲ್ಲಿ ಹುತಾತ್ಮನ ಪತ್ನಿಯನ್ನು ತೊರೆದು ರಾಜಾಶ್ರಯವನ್ನು ಉಳಿಸಿಕೊಳ್ಳುತ್ತಿದ್ದರೋ ಏನೊ. ಆದರೆ ಯಶೋಧರಮ್ಮ ಅವರು ಅರಮನೆಯ ಸವಲತ್ತು ತಿರಸ್ಕರಿಸಿ ಆತ್ಮಾಭಿಮಾನವನ್ನು ಉಳಿಸಿಕೊಂಡರು.

ಹೋರಾಟದ ಜೊತೆಗೆ ಆಧುನಿಕ ಪ್ರಜಾಪ್ರಭುತ್ವದ ಮಾತೃಕೆಯಂತಿದ್ದ ಮೈಸೂರು ನ್ಯಾಯ ವಿಧಾಯಕಸಭೆಯ ಚುನಾವಣೆಯನ್ನು ಯಶೋಧರಮ್ಮ ಎದುರಿಸಿದ್ದು 1938 ರಲ್ಲಿ. ಅದರಲ್ಲಿ ಅವರ ಎದುರಾಳಿ ರಾವ್ ಸಾಹೇಬ್ ಮುನಿವೆಂಕಟಪ್ಪ.

ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿದ್ದ ಯಶೋಧರಮ್ಮ ಮತ್ತು ದಾಸಪ್ಪ ದಂಪತಿ ಜೋಡಿ ಮಹಾತ್ಮ ಗಾಂಧೀಜಿಯವರಿಗೆ ಅಪರಿಚಿತರಾಗಿ ಉಳಿಯಲಿಲ್ಲ. ಗಾಂಧೀಜಿಯವರ ಸರಳ ಬದುಕಿನ ಪ್ರಯೋಗವನ್ನು ವ್ಯಸನದಂತೆ ಅನುಸರಿಸಿದ ಈ ದಂಪತಿಗಳ ಬಗ್ಗೆ ಮಹಾತ್ಮರಿಗೆ ಕೂಡ ವಿಶೇಷ ಮಮತೆ. ಗಾಂಧೀಜಿಯವರ ಆಹ್ವಾನದ ಮೇರೆಗೆ ಸೇವಾಗ್ರಾಮಕ್ಕೆ ತೆರಳಿ ತಂಗಿದ್ದ ದಾಸಪ್ಪ ಅವರ ದೇಹತೂಕವನ್ನು ಇಳಿಸಲು ಗಾಂಧಿ ತಮ್ಮ ಆಹಾರ ಕ್ರಮದ ಪ್ರಯೋಗವನ್ನು ಬಳಸಿ ಅವರ ಆರೋಗ್ಯವೃದ್ಧಿಗೂ ಕಾರಣರಾಗಿದ್ದರು. ಆಗ ಕಸ್ತೂರ್ ಬಾ ಅವರು ದಾಸಪ್ಪ ಅವರನ್ನು ಮಗನಂತೆ ಸಲಹಿದ್ದರಂತೆ.





ಮೈಸೂರು ರಾಜ್ಯದ ಸ್ವಾತಂತ್ರ್ಯ ಚಳವಳಿಯ ಕಾವು ಏರುತ್ತಿದ್ದಂತೆಯೂ ಅರಸೊತ್ತಿಗೆಯ ದಮನದ ತೀವ್ರತೆಯೂ ಹೆಚ್ಚುತ್ತಿತ್ತು. ಹೋರಾಟದ ಮುಂಚೂಣಿಯಲ್ಲಿದ್ದ ದಾಸಪ್ಪ ಅವರ ವಕೀಲಿ ಸನ್ನದನ್ನು ಸರ್ಕಾರ ಕುಂಟುನೆಪ ಹೇಳಿ ರದ್ದುಮಾಡುತ್ತದೆ. ಆಗ ಸ್ವತಃ ಗಾಂಧಿ ಈ ಕ್ರಮವನ್ನು ಖಂಡಿಸಿ ಮತ್ತು ಅತ್ಯಂತ ಕಡಮೆ ಸಂಪಾದನೆಯಲ್ಲಿಯೇ ಬದುಕುವುದು ಹೇಗೆ ಎಂಬುದನ್ನು ಕುರಿತು ತಮ್ಮ ಹರಿಜನ್ ಪತ್ರಿಕೆಯಲ್ಲಿ ಸಂಪಾದಕೀಯ ಬರೆಯುತ್ತಾರೆ. ನಂತರದಲ್ಲಿ ಗಾಂಧಿಯವರಿಗೆ ತಾವು ಸಂಸಾರ ಸಮೇತ ಆಶ್ರಮಕ್ಕೆ ಬರುವುದಾಗಿ ಕೊಟ್ಟಿದ್ದ ಮಾತನ್ನು ದಾಸಪ್ಪ ಉಳಿಸಿಕೊಂಡುದು 1944 ರಲ್ಲಿ. ಆಗ ಗಾಂಧಿಯ ಸಾಂಗತ್ಯದ ಅನುಭೂತಿಯನ್ನು ಪಡೆದ ಯಶೋಧರಮ್ಮ ತಮ್ಮ ಬದುಕಿನ ಕಡೆಯ ಕ್ಷಣದವರೆಗೂ ಅದನ್ನು ಜತನ ಮಾಡಿದರು.



ಆಧುನಿಕ ಮನೋಸ್ಥಿತಿಯ ಯಶೋಧರಮ್ಮ ಸ್ವಾತಂತ್ರ್ಯ ಪೂರ್ವದಲ್ಲಿಯೇ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಮತ್ತು ದಲಿತರ ದೇವಾಲಯ ಪ್ರವೇಶದಂತ ಉಪಕ್ರಮಗಳನ್ನು ಅಂದಿನ ನ್ಯಾಯ ವಿಧಾಯಕಸಭೆಯಲ್ಲಿ ಒತ್ತಿಹೇಳಿದ್ದರು. ಅಷ್ಟೇ ಅಲ್ಲದೆ ಈ ವಿಚಾರದಲ್ಲಿ ಸಾರ್ವಜನಿಕ ಸಮ್ಮತಿ ಸುಲಭಕ್ಕೆ ದೊರೆಯದು. ಅದನ್ನುಕಾನೂನು ದಂಡ ಪ್ರಯೋಗಿಸಿ ದೇಶಕ್ಕೆ ಹಿತವಾದುದನ್ನು ಮಾಡಬೇಕಾಗುತ್ತದೆ ಎಂದು ಪ್ರತಿಪಾದಿಸಿದ್ದರು.

**" ದೀನ ದಲಿತರ, ಸ್ತ್ರೀಯರ , ಮಕ್ಕಳ , ನಿರ್ಗತಿಕ ಮಹಿಳೆಯರ ಹಾಗೂ ಸರ್ವರೂ ಕಡೆಗಣಿಸಿದವರ ಸೇವೆಯನ್ನು ದೇಶದಲ್ಲಿ ದೇವರೇ ಹುಟ್ಟಿಬಂದರೂ ಶ್ರೀಮತಿ ಯಶೋಧರಮ್ಮನವರಷ್ಟು ಕೆಲಸ ಮಾಡಲು ಸಾಧ್ಯವಿರಲಿಲ್ಲ. ಶ್ರೀಮತಿ ಯಶೋಧರಮ್ಮ ದಾಸಪ್ಪ ಕರ್ನಾಟಕದ ಕಸ್ತೂರ್ ಬಾ**

**– ಡಾ . ಗೊರೂರು ರಾಮಸ್ವಾಮಿ ಅಯ್ಯಂಗಾರ್.**

ಗೊರೂರರ ಮಾತುಗಳು ಉತ್ಪ್ರೇಕ್ಷೆಯೇನಲ್ಲ. ಇದನ್ನು ಅರಿಯಲು ಕೊಂಚ ಹಿಂದಿನ ಘಟನಾವಳಿಗಳನ್ನು ಅವಲೋಕಿಸಬೇಕು. ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ಪತಿಯೊಂದಿಗೆ ಜೈಲು ಸೇರಿದ ಕಸ್ತೂರ್ ಬಾ ಜೀವಂತವಾಗಿ ಬಿಡುಗಡೆ ಪಡೆಯಲೇ ಇಲ್ಲ. ಅವರ ಸ್ಮರಣಾರ್ಥ ಕಸ್ತೂರ್ ಬಾ ಹೆಸರಲ್ಲಿ ಕೊಟ್ಟ ದೇಣಿಗೆಯನ್ನು ಅವರದೇ ಹೆಸರಿನಲ್ಲಿ ಸ್ಮಾರಕ ಟ್ರಸ್ಟ್ ಸ್ಥಾಪಿಸಲಾಯ್ತು. ಈ ಟ್ರಸ್ಟಿನ ದೇಶದ 24 ಗಣ್ಯರ ಧರ್ಮದರ್ಶಿ ಮಂಡಳಿಯೂ ರಚನೆಯಾಯ್ತು. ಅದರಲ್ಲಿ ಕರ್ನಾಟಕದ ಏಕೈಕ ಸದಸ್ಯೆ ಯಶೋಧರಮ್ಮ ದಾಸಪ್ಪ. ಅಲ್ಲಿಂದ ಅವರು ಇಹಲೋಕ ತ್ಯಜಿಸುವವರೆಗೂ ಟ್ರಸ್ಟ್ ನ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕರ್ನಾಟಕದಲ್ಲಿ ಕಸ್ತೂರ್ ಬಾ ಟ್ರಸ್ಟಿನ ಹಲವು ಆಶ್ರಮಗಳಿದ್ದರೂ ಅರಸೀಕೆರೆ ಬಳಿ ಇರುವ (ಮೈಸೂರು– ಶಿವಮೊಗ್ಗ ಹೆದ್ದಾರಿ) ಕಸ್ತೂರ್ ಬಾ ಆಶ್ರಮ ಯಶೋಧರಮ್ಮ ಅವರ ಪ್ರಯತ್ನದ ಫಲ. ಇಂದಿಗೂ ಸಕ್ರಿಯವಾಗಿದೆ. ಈ ಆಶ್ರಮ ಕುರಿತ ನೀಲನಕ್ಷೆ ತಯಾರಿಸಿ ಗಾಂಧಿ ಅವರ ಬಳಿ ಹೋದಾಗ ಅವರು ಏಕಾಏಕಿ ಒಪ್ಪಲಿಲ್ಲವಂತೆ. "ನಿನ್ನ ಗಂಡ ಮಕ್ಕಳು ಮಾಡುತ್ತಾರೆ ಎಂದರೆ ಆಗದು. ನಿನಗಿರುವ ನಂಬಿಕೆ ಅವರಿಗಿರುವುದಿಲ್ಲ; ನೀನು ಅಲ್ಲಿಯೇ ಮಣ್ಣಾಗಬೇಕು" ಎಂದು ಮಾತು ತೆಗೆದುಕೊಂಡರಂತೆ.

ಯಶೋಧರಮ್ಮ ಅವರು ಮಹಾತ್ಮರಿಗೆ ಕೊಟ್ಟ ಮಾತಿನಂತೆ ಅಲ್ಲಿಯೇ ಮಣ್ಣಾದರು. ಗಾಂಧಿ ಅವರ ಚಿತಾಭಸ್ಮದ ಸಮಾಧಿಯ ಬಳಿ.

ಸ್ವಾತಂತ್ರ್ಯಾ ನಂತರದಲ್ಲಿ ದಾಸಪ್ಪನವರು ರಾಜಕೀಯದಲ್ಲಿ ಸಕ್ರಿಯರಾಗಿದ್ದರೂ ಸಹ ಯಶೋಧರಮ್ಮ ಅವರು ಕಸ್ತೂರ್ ಬಾ ಟ್ರಸ್ಟ್ ಕೆಲಸಗಳಲ್ಲಿ ತಮ್ಮನ್ನು ವ್ಯಸ್ತರಾಗಿಸಿಕೊಂಡಿದ್ದರು. ಹಾಗೆಂದು ರಾಜಕೀಯ ಚಟುವಟಿಕೆಗಳಿಂದ ದೂರವಿದ್ದವರಲ್ಲ, ಚುನಾವಣಾ ರಾಜಕೀಯದಿಂದ ಅಂತರ ಕಾಪಾಡಿಕೊಂಡಿದ್ದರು. 1962 ರಲ್ಲಿ ಅಭಿಮಾನಿಗಳ ಒತ್ತಾಯಕ್ಕೆ ಮಣಿದು ಹಾಸನದ ಗಂಡಸಿ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಿ ಜಯಶೀಲರಾದರು. ಕಂಠಿ ಅವರ ಕ್ಯಾಬಿನೆಟ್ ನಲ್ಲಿ ಮಂತ್ರಿಯಾಗಿ, ನಂತರ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿಯೂ ಮುಂದುವರಿದರು.

ಒಕ್ಕೂಟ ಸರ್ಕಾರದಲ್ಲಿ ದಾಸಪ್ಪ , ರಾಜ್ಯದಲ್ಲಿ ಯಶೋಧರಮ್ಮ ಇಬ್ಬರಿಗೂ ಸಚಿವಸ್ಥಾನ ಒಲಿದು ಬಂದಿತ್ತು. ಆಗ ಆ ಸತಿಪತಿಗಳು ಮಾಡಿದ ಕೆಲಸವೆಂದರೆ ; ತಮ್ಮೆಲ್ಲ ಬಂಧುಗಳನ್ನು ಕರೆದು ಊಟ ಹಾಕಿದ್ದು! . ಆ ಔತಣ ಸಾಮಾನ್ಯದ್ದಾಗಿರಲಿಲ್ಲ. ಎಲ್ಲ ಬಂಧುಗಳನ್ನೂ ಸೇರಿಸಿದ್ದೇ ಅವರಿಗೆ ಮನವಿ ಮಾಡಲೆಂದು. ತಾವಿಬ್ಬರೂ ಮಂತ್ರಿಗಳಾಗಿರುವುದು ಜನಸೇವೆಗೇ ಹೊರತು ಸ್ವಜನ ಪಕ್ಷಪಾತ ಮಾಡಲು ಅಲ್ಲ. ಹೀಗಾಗಿ ನೀವಾರೂ ನಿಮ್ಮ ವೈಯಕ್ತಿಕ ಕೆಲಸ ಕಾರ್ಯಗಳಿಗೆ ನಮ್ಮ ಬಳಿ ಸಚಿವ ಪದವಿ ಇರುವವರೆಗೂ ಬರಬೇಡಿ ಎಂದು ವಿನಂತಿಸಿದರಂತೆ.

ದಮನಿತ ಜನರ ಸೇವೆ ಮಾಡುವ ಹುಕಿಯಲ್ಲಿದ್ದ ಯಶೋಧರಮ್ಮ ಸಮಾಜ ಕಲ್ಯಾಣ ಖಾತೆಯನ್ನು ಕೇಳಿ ಪಡೆದಿದ್ದರಂತೆ. ದೀನ ದಲಿತರ, ಅಸಹಾಯಕರ, ಅಂಗವಿಕಲ, ಬುಡಕಟ್ಟು ಸಮುದಾಯಗಳು ಎಲ್ಲರ ಕೆಲಸ ಆ ಇಲಾಖೆಯ ವ್ಯಾಪ್ತಿಗೆ ಬರುತ್ತಿತ್ತು. ಅವರು ಸಚಿವರಾಗಿ ಇರುವಷ್ಟು ದಿನಗಳೂ ಹಗಲಿರುಳು ದುಡಿದು ತಮ್ಮ ಮೇಲಿದ್ದ ಸಮಾಜದ ಋಣ ಸಂದಾಯ ಮಾಡಿದರು. ರಾಜ್ಯಾದ್ಯಾಂತ ಹಿಂದುಳಿದ ವರ್ಗಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ, ಹಾಸ್ಟೆಲ್ ಗಳು, ಗ್ರಾಮೀಣ ಪ್ರದೇಶದ ಬಡವರಿಗೆ ಹೈನುಗಾರಿಗೆ, ಕುರಿಸಾಕಾಣಿಕೆ, ಗುಡಿಕೈಗಾರಿಕೆಗಳಿಗೆ ಸಹಾಯಧನ ಇತ್ಯಾದಿ ಸಕಲೆಂಟು ಸೇವಾ ಕೈಂಕರ್ಯವನ್ನು ಮಾಡಿದರು.

ಯಶೋಧರಮ್ಮ ಅವರ ಜನಸೇವೆಯ ದ್ಯೋತಕವಾಗಿ ಇಂದಿಗೂ ನಿಂತಿದೆ ಯಶೋಧರಪುರ ಎಂಬ ಊರು! ಹೌದು.



ಇದು ಮೈಸೂರಿನಿಂದ ಮಡಿಕೇರಿಗೆ ಹೋಗುವ ಹೆದ್ದಾರಿಯಲ್ಲಿರುವ ಪುಟ್ಟ ಕಂದಾಯ ಗ್ರಾಮ. ಯಶೋಧರಮ್ಮ ಮಂತ್ರಿಗಳಾಗಿದ್ದಾಗ ಈಗಿನ ಚಾಮರಾಜನಗರ  ಜಿಲ್ಲೆಯ ಕಾಡು ಪ್ರದೇಶದಿಂದ ಬುಡಕಟ್ಟು ಜನರಿಗೆ ಪುನರ್ವಸತಿ ಕಲ್ಪಿಸಬೇಕಿತ್ತಂತೆ. ಅವರೆಲ್ಲರನ್ನೂ ಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಈಗಿರುವ  ಊರನ್ನು ಕಂದಾಯ ಗ್ರಾಮವನ್ನಾಗಿಸಿ, ಎಲ್ಲ ಮೂಲಭೂತ ಸೌಕರ್ಯಗಳನ್ನೂ ಒದಗಿಸಿ ಕೊಟ್ಟರಂತೆ. ಆ ಕೆಲಸದ ಕೃತಜ್ಞತಾಪೂರ್ವಕವಾಗಿ ಅಲ್ಲಿನ ಜನ ಯಶೋಧರಮ್ಮನವರ ಹೆಸರನ್ನೇ ತಮ್ಮ ಊರಿಗೆ ಇರಿಸಿಕೊಂಡರಂತೆ. ಬಹುಶಃ ಈ ರೀತಿ ರಾಜಕಾರಣಿಯೊಬ್ಬರ ಹೆಸರು ಊರಿಗೆ ಇರುವುದು ಬಹುಶಃ ಅಪರೂಪದ್ದು ಎಂದು ಕಾಣುತ್ತದೆ.ಇಂಥ ಜನಾನುರಾಗಿಯಾಗಿದ್ದರು ಯಶೋಧರಮ್ಮ.

ಅಧಿಕಾರ ಯಾರಿಗೂ ಶಾಶ್ವತವಲ್ಲ, ಗಾಂಧೀಜಿಯವರ ಗರಡಿಯಲ್ಲಿ ಪಳಗಿದ್ದ ಯಶೋಧರಮ್ಮ ಅವರಿಗೆ ಕುರ್ಚಿಗೆ ಅಂಟಿ ಇರುವುದೂ ಬೇಕಿರಲಿಲ್ಲ ಎಂದು ಕಾಣುತ್ತದೆ. ಆರಂಭದಲ್ಲಿಯೇ ಉಲ್ಲೇಖಿಸಿದಂತೆ ಪಾನನಿಷೇಧ ವಿಷಯದಲ್ಲಿ ನಿಜಲಿಂಗಪ್ಪ ಅವರ ಸಂಪುಟದಿಂದ ಹೊರಬಂದರು. ಹಾಗೇ ರಾಜಕೀಯದಿಂದಲೂ ದೂರವಾದರು, ಆದರೆ ಜನಸೇವೆಯಿಂದಲ್ಲ. ನಂತರ ಹಲವು ಬಾರಿ ಒತ್ತಾಯಗಳು ಬಂದರೂ, ಸಕ್ರಿಯ ರಾಜಕಾರಣಕ್ಕೆ ಅವರು ಮರಳಲಿಲ್ಲ. ಅಷ್ಟೇ ಅಲ್ಲ ಅವರ ಮಗ ಸಂಸತ್ ಸದಸ್ಯರಾಗಿದ್ದವರು; ರಾಜಕೀಯದಲ್ಲಿ ಮೌಲ್ಯಗಳು ಕುಸಿಯುತ್ತಿವೆ ಎಂದು ಹೇಳಿ  ಅವರೂ ರಾಜಕಾರಣ ತೊರೆದರಂತೆ. ಇದು ಅವರು ತಮ್ಮ ಮಕ್ಕಳಿಗೆ ಕಲಿಸಿದ್ದ ನೈತಿಕ ಪಾಠವಾಗಿತ್ತು. ಹಾಗೇ ಯಶೋಧರಮ್ಮ ಎಳೆಯ ಮಗುವೊಂದನ್ನು ದತ್ತು ಪಡೆದಿದ್ದರು. ಅದು ಹುಟ್ಟಿನಿಂದ ತಳ ಸಮುದಾಯಕ್ಕೆ ಸೇರಿದ್ದಾಗಿತ್ತು. ಅವಳನ್ನು ಸ್ವಂತ ಮಗಳಾಗಿಸಿಕೊಂಡು

ಇತರ ಮಕ್ಕಳಂತೆ ತಾಯ್ತನದ ಪ್ರೀತಿ ಜೊತೆಗೆ  ಆಸ್ತಿಯನ್ನೂ ಹಂಚಿ ತಾನೆಂಥ ತಾಯಿ ಎಂಬುದನ್ನೂ ಕಳಂಕಕ್ಕೆ ಎಡೆ ಇಲ್ಲದಂತೆ ಸಾಬೀತುಪಡಿಸಿದರು.

ಇದು ಯಶೋಧರಮ್ಮ ಅವರ ಜನುಮದ ನೂರಿಪ್ಪತ್ತನೇ ವರ್ಷ. ಅವರು ತಮ್ಮ ಬದುಕಿನಲ್ಲಿ ನಿರ್ವಹಿಸಿದ ಸ್ವಾತಂತ್ರ್ಯ ಚಳವಳಿ, ರಾಜಕಾರಣ, ಚುನಾವಣೆ, ಮಂತ್ರಿಗಿರಿ, ಪಕ್ಷ ಅಧ್ಯಕ್ಷೆಯಾಗಿ, ಗಾಂಧೀಜಿಯ ಅನುಯಾಯಿಯಾಗಿ, ಮಹಿಳಾ ವಿಮೋಚಕಿಯಾಗಿ ಹೀಗೆ ಎಲ್ಲ ಪಾತ್ರಗಳಲ್ಲೂ ತಮ್ಮ ಛಾಪು ಮೂಡಿಸಿದವರೆ.

ಗಾಂಧಿಯವರ ಕಟ್ಟಾ ಅನುಯಾಯಿಯಾಗಿದ್ದ ಯಶೋಧರಮ್ಮ ಪಾನಿನಿಷೇಧದ ವಿಚಾರದಲ್ಲಿ ಅಧಿಕಾರ ತ್ಯಜಿಸಿದುದನ್ನು ಕಂಡ ಗಾಂಧಿಯವರ ಶಿಷ್ಯ ಆಚಾರ್ಯ ವಿನೋಬ ಭಾವೆ ಅವರು" ಯಶೋಧರಾ ತುಮ್ ಗಂಗಾ ಬನ್ ಗಯೀ". ( ಯಸೋಧರಾ ನೀನು ಮಹಾತಾಯಿ ಆಗಿಬಿಟ್ಟೆ) ಎಂದು ಉದ್ಘರಿಸಿದ್ದರಂತೆ. ಇಂಥ ಹೊಗಳಿಕೆಗಿಂತ ಇನ್ನೆಂಥ ಸಾರ್ಥಕತೆ ಬೇಕು ಬದುಕಿಗೆ.

■



## ಗಾಂಧಿಯ ದೃಷ್ಟಿಕೋನದಲ್ಲಿ

# ಹಿಂಸೆ ಮತ್ತು ಭಯೋತ್ಪಾದನೆ

– ಪಾಸ್ಕಲ್ ಆಲನ್ ನಜರೆತ್

**ಇ**ಪ್ಪತ್ತನೇ ಶತಮಾನವು ಹಿಂಸೆಯ ಶತಮಾನವಾಗಿತ್ತು. ಇಪ್ಪತ್ತೊಂದನೇ ಶತಮಾನವಾದರೂ ಅಹಿಂಸೆಯ ಶತಮಾನವಾಗಿರುವುದೇ? ಸಂಘರ್ಷದಲ್ಲಿರುವ ಎರಡೂ ಕಡೆಯವರ ಆಕಾಂಕ್ಷೆಗಳನ್ನು ನ್ಯಾಯಯುತವಾಗಿ ಪರಸ್ಪರ ಒಪ್ಪಂದಗಳ ಮೂಲಕ ಪರಿಹರಿಸಿದರೆ ಮಾತ್ರ ಶಾಂತಿ ಮತ್ತು ಸುರಕ್ಷತೆಯನ್ನು ಸಾಧಿಸಲು "ಸಾಧ್ಯ" ಎಂದು ಈ ಲೇಖನದಲ್ಲಿ ನಜರೆತ್ ಹೇಳುತ್ತಾರೆ.

ಇಪ್ಪತ್ತನೇ ಶತಮಾನವು ಮಾನವ ಇತಿಹಾಸದಲ್ಲಿ ಅತ್ಯಂತ ಹಿಂಸಾತ್ಮಕ ಮತ್ತು ವಿನಾಶಕಾರಿ ಶತಮಾನವಾಗಿತ್ತು. ಎರಡು ಮಹಾ ವಿಶ್ವಯುದ್ಧಗಳಲ್ಲಿ, ಸ್ಪೇನ್ ಮತ್ತು ಗ್ರೀಕ್ ಒಳಯುದ್ಧಗಳಲ್ಲಿ, ಹಿಟ್ಲರ್‌ನ ಗ್ಯಾಸ್ ಚೇಂಬರ್‌ಗಳಲ್ಲಿ, ಅರಬ್–ಇಸ್ರೇಲ್ ಮತ್ತು ಭಾರತ–ಪಾಕಿಸ್ತಾನ ಯುದ್ಧಗಳಲ್ಲಿ, ಹಾಗೂ ವಿಶ್ವದ ವಿವಿಧ ಭಾಗಗಳಲ್ಲಿ ನಡೆದ ಅಸಂಖ್ಯಾತ ಅಂತರ್ಯುದ್ಧಗಳಲ್ಲಿ ಒಂಭತ್ತು ಕೋಟಿಗೂ ಹೆಚ್ಚು ಜನರು ಬಲಿಯಾದರು. ಹೀಗಿದ್ದರೂ ಇಂದು ಸಹ ಯಾವುದೇ ಹಿಂದಿನ ಕಾಲಕ್ಕಿಂತಲೂ ಹೆಚ್ಚು, ಯಾವುದೇ ಕ್ಷಣದಲ್ಲಿ ಮೇಮೇಲೆ ಎರಗಬಹುದಾದ ಆಕ್ರಮಣದ ಭಯದಲ್ಲಿ ಜನರು ಜೀವಿಸುತ್ತಿದ್ದಾರೆ. ಸೆಪ್ಟೆಂಬರ್ 11, 2001 ರಂದು ವಿಶ್ವ ವಾಣಿಜ್ಯ ಕೇಂದ್ರದ ಗೋಪುರಗಳು ಉರಿಯುತ್ತಾ ಕುಸಿದ ಘಟನೆಯು ಜಗತ್ತಿನ ಮಾನವ ಜನಾಂಗದ ಮನಸ್ಸಿನಲ್ಲಿ ಸಾರ್ವತ್ರಿಕವಾಗಿ ಅತಂಕವನ್ನು ಮೂಡಿಸಿದೆ. ಆತ್ಮಾಹುತಿ ಬಾಂಬರ್ ಈ ಕಾಲದ ಭಯೋತ್ಪಾದನೆಯ ಹೊಸ ಸಂಕೇತವಾಗಿದೆ. ಅತ್ಯಾಧುನಿಕ ಕಣ್ಗಾವಲು ವ್ಯವಸ್ಥೆಯನ್ನು ಹೊಂದಿರುವ ಈ ಯುಗದಲ್ಲೂ ಸಹ ಹಾಡು ಹಗಲೇ ಎರಗುವ ಭಯೋತ್ಪಾದಕ ದಾಳಿಗಳನ್ನು ತಡೆಯಲು ಸಾಧ್ಯವಾಗುತ್ತಿಲ್ಲ.

ಈ ನಿರಾಶಾದಾಯಕ ಇತಿಹಾಸದ ಕರಿನೆರಳಿನಲ್ಲಿ ಕಾಣುವ ಆಶಾದಾಯಕ ಕಿರಣ ಎಂದರೆ: ಅದು ಭಾರತದ ರಾಜಕೀಯದಲ್ಲಿ ಮಹಾತ್ಮ ಗಾಂಧಿಯವರ ಅಹಿಂಸಾ ತತ್ವಗಳ

ಮಾರ್ಗದರ್ಶನ.ಗಾಂಧಿಯವರ ದೃಷ್ಟಿಯಲ್ಲಿ ಯಶಸ್ಸು ಎಂದರೆ ಮಾನವನನ್ನು ಗತಕಾಲದ ಹೊರೆಗಳಿಂದ ರಕ್ಷಿಸುವುದು ಮತ್ತು ಈ ಆಧುನಿಕ ಯುಗದಲ್ಲೂ ಅಹಿಂಸೆಯನ್ನು ಸಾಧಿಸುವುದು.

1915 ರಲ್ಲಿ ಗಾಂಧಿಯವರು ಭಾರತದ ರಾಜಕೀಯ ರಂಗಕ್ಕೆ ಪ್ರವೇಶಿಸಿದಾಗ ಆಗ ತಾನೆ ರಷ್ಯಾದ ಕ್ರಾಂತಿಯು ನಡೆದಿತ್ತು. ಇದು ಭಾರತೀಯ ರಾಷ್ಟ್ರವಾದಿಗಳಲ್ಲಿ ಕ್ರಾಂತಿಕಾರಿ ಉತ್ಸಾಹ ಮತ್ತು ಬ್ರಿಟಿಷರ ಆಡಳಿತದ ವಿರುದ್ಧದ ವ್ಯಾಪಕ ದ್ವೇಷವನ್ನು ಉಂಟುಮಾಡಿತ್ತು. ಇವರ ಆದರ್ಶವಾಗಿದ್ದವರು ಬಂಗಾಳದ ಕಾದಂಬರಿಕಾರ ಬಂಕಿಮ್ ಚಂದ್ರ ಚಟರ್ಜಿ. ಅವರ ಜನಪ್ರಿಯ ಕಾದಂಬರಿ "ಆನಂದಮಠ" ಗುಪ್ತವಾಗಿ ಕಾರ್ಯ ನಿರ್ವಹಿಸುತ್ತಿದ್ದ ಕ್ರಾಂತಿಕಾರಿಗಳಿಗೆ ಸ್ಫೂರ್ತಿಯಾಗಿತ್ತು, ಮತ್ತು ಅದರ ನಾಯಕರಾಗಿದ್ದ **"ಸತ್ಯಾನಂದ"** ಅವರು ಕ್ರಾಂತಿಕಾರಿಗಳಿಗೆ ಮಾದರಿಯಾಗಿದ್ದರು. ಅವರೆಲ್ಲರಿಗೆ "ವಂದೇ ಮಾತರಂ" ಶಕ್ತಿ ಮಂತ್ರವಾಗಿತ್ತು. ಶ್ರೀ ಅರವಿಂದ ಘೋಷ್ ಮತ್ತೊಬ್ಬ ಪ್ರಭಾವಿ ವ್ಯಕ್ತಿಯಾಗಿದ್ದವರು. ಇಂಗ್ಲೆಂಡ್‌ನಲ್ಲಿ ಶಿಕ್ಷಣ ಪಡೆದಿದ್ದ ಇವರು, ಭಾರತೀಯ ಸಿವಿಲ್ ಸರ್ವೀಸ್ ಗೆ ಆಯ್ಕೆ ಆಗಿದ್ದರೂ ಸಹ ಅದನ್ನು ತಿರಸ್ಕರಿಸಿ ಕ್ರಾಂತಿಯಲ್ಲಿ ನಿಂತಿದ್ದರು. ಜವಾಹರಲಾಲ್ ನೆಹರೂ ಸೇರಿದಂತೆ ವಿದೇಶದಲ್ಲಿ ಓದಿದ ಅನೇಕರಂತೆ, ಮಜ್ಜಿನಿ ಮತ್ತು ಗ್ಯಾರಿಬಾಲ್ಡಿಯವರ ಸಾಧನೆಗಳಿಂದ ಮತ್ತು 1905 ರಲ್ಲಿ ರಷ್ಯ ದೇಶವು ಜಪಾನ್ ದೇಶವನ್ನು ಸೋಲಿಸಿದ್ದರಿಂದ ಇವರು ಆಕರ್ಷಿತರಾಗಿದ್ದರು. ಜೊತೆಗೆ, 1904 ರಲ್ಲಿ ಬ್ರಿಟಿಷರಿಂದ ಬಂಗಾಳವನ್ನು ಧಾರ್ಮಿಕ ಆಧಾರದ ಮೇಲೆ ವಿಭಜಿಸಿದ್ದಕ್ಕೆ ಇತರ ಭಾರತೀಯರಂತೆ ಇವರು ಸಹ ಕೆರಳಿದ್ದರು. 1907 ರಲ್ಲಿ ಅನಾಮಧೇಯವಾಗಿ ಪ್ರಕಟವಾದ "ವರ್ತಮಾನ ರಣನೀತಿ–'ಒಂಜಚಿಡಿಟಿ ಂಡಿಣ ಂಜಿ ಘಚಿಡಿ' ಬಂಕಿಮ್ ಚಂದ್ರ ಚಟರ್ಜಿ ಅವರ ಚಿಂತನೆಗಳನ್ನು ಮತ್ತಷ್ಟು ಪ್ರಚಾರ ಮಾಡಿತ್ತು. ಅದರ ಪ್ರಕಾರ ಕ್ರಾಂತಿಕಾರಿ ಚಟುವಟಿಕೆಗಳಿಗೆ ಹಣವನ್ನು ಭಯೋತ್ಪಾದನೆ ಅಥವಾ ಯಾವುದೇ ಹಿಂಸಾತ್ಮಕ ಚಟುವಟಿಕೆಗಳ ಮೂಲಕ ಸಂಗ್ರಹಿಸಬಹುದು ಎನ್ನುವ ಕಲ್ಪನೆ ಇತ್ತು. 1905–1915 ರ ಅವಧಿಯಲ್ಲಿ, ಭಾರತದಲ್ಲಿ ಮಾತ್ರವಲ್ಲ, ಇಂಗ್ಲೆಂಡ್‌ನಲ್ಲಿಯೂ ಬ್ರಿಟಿಷ್ ಅಧಿಕಾರಿಗಳ ಹತ್ಯೆಯ ಸರಣಿಯೇ ನಡೆಯಿತು.

1919 ರ ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಯವರು ಸತ್ಯ ಮತ್ತು ಅಹಿಂಸೆಯ ಬಗ್ಗೆ ಮಾತನಾಡಿದಾಗ, ಕ್ರಾಂತಿಕಾರಿಗಳೊಂದಿಗೆ ಸಂಪರ್ಕ ಮತ್ತು ಸಹಾನುಭೂತಿಯನ್ನು ಹೊಂದಿದ್ದ ಹಿರಿಯ ರಾಷ್ಟ್ರವಾದಿ ನಾಯಕ ಬಾಲಗಂಗಾಧರ ತಿಲಕ್, "ಪ್ರಿಯ ಗೆಳೆಯ, ರಾಜಕೀಯದಲ್ಲಿ ಸತ್ಯಕ್ಕೆ ಸ್ಥಾನವಿಲ್ಲ" ಎಂದು ಗಾಂಧಿಯವರಿಗೆ ತಿರಸ್ಕಾರದಿಂದ ಉತ್ತರಿಸಿದ್ದರು. ಎರಡು ದಶಕಗಳ ನಂತರ, ಅಹಿಂಸಾ ವಿಧಾನವನ್ನು ಅಪ್ರಾಯೋಗಿಕ ಮತ್ತು ಅಪರಿಣಾಮಕಾರಿ ಎಂದು ಮೌಲ್ಯಮಾಪನ ಮಾಡಿದ ಮತ್ತೊಬ್ಬ ರಾಷ್ಟ್ರವಾದಿ ನಾಯಕ ಸುಭಾಷ್ ಚಂದ್ರ ಬೋಸ್, ರಹಸ್ಯವಾಗಿ ಭಾರತವನ್ನು ತೊರೆದು ಜರ್ಮನಿ ಮತ್ತು ಜಪಾನ್‌ಗೆ ತೆರಳಿದರು. ಜಪಾನಿಯರ ಸಹಯೋಗದೊಂದಿಗೆ, ದಕ್ಷಿಣ ಆಗ್ನೇಯ ಏಷ್ಯಾದಲ್ಲಿ ಜಪಾನಿಯರು ಯುದ್ಧಕೈದಿಗಳಾಗಿ ತೆಗೆದುಕೊಂಡ ಭಾರತೀಯ ಸೈನಿಕರೊಂದಿಗೆ "ಭಾರತೀಯ ರಾಷ್ಟ್ರೀಯ ಸೇನೆ"ಯನ್ನು ಸ್ಥಾಪಿಸಿದರು. ಈ ಎಲ್ಲಾ ಕಾರಣಗಳಿಂದ ಭಾರತೀಯ ರಾಷ್ಟ್ರೀಯ ಚಳವಳಿಯಲ್ಲಿ ಸತ್ಯ ಮತ್ತು ಅಹಿಂಸೆಯನ್ನು ಉತ್ತೇಜಿಸುವ ಗಾಂಧಿಯವರ ಕಾರ್ಯವು ಸುಲಭವಾಗಿರಲಿಲ್ಲ. ಅವರ ಅಪಾರ ನೈತಿಕ ಶಕ್ತಿ, ಬಡತನದಿಂದ ಕೂಡಿದ ಭಾರತೀಯ ಜನರೊಂದಿಗಿನ ಅವರ ಆಪ್ತ ಒಡನಾಟ, ಮತ್ತು 1920 ರಿಂದ ಬ್ರಿಟಿಷರ ವಿರುದ್ಧ ಎಲ್ಲಾ ಜನಸಾಮಾನ್ಯರು ಭಾಗವಹಿಸಿದ ಕಾರಣದಿಂದ ಅವರ ಅಹಿಂಸಾತ್ಮಕ ಚಳವಳಿಗಳು ಯಶಸ್ಸು ಕಂಡವು. ತಿಲಕ್ 1920 ರಲ್ಲಿ ನಿಧನರಾದರು ಮತ್ತು ಇದರಿಂದ ಗಾಂಧಿಯವರಿಗೆ ತೆರೆದ ವೇದಿಕೆಯೊಂದು ಸಿದ್ಧವಾಯಿತು.

ಗಾಂಧಿಯವರು ಸತ್ಯವು ದೇವರಂತೆಯೇ ನೈತಿಕವಾದ ಮತ್ತು ವಸ್ತುನಿಷ್ಠವಾದ ವಾಸ್ತವ ಶಕ್ತಿ ಎಂದು ದೃಢವಾಗಿ ನಂಬಿದ್ದರು. ಸತ್ಯವೇ ಅವರಿಗೆ "ಸರಿಯಾದ ಮಾರ್ಗ"ವನ್ನು ರೂಪಿಸಿತು. ಅವರಿಗೆ ನಿರಾಯುಧ, ಸತ್ಯದ ಮಾರ್ಗದಲ್ಲಿರುವ ಮತ್ತು ಸಾವಿಗೆ ಭಯಪಡದ ಮಾನವ ಆತ್ಮದ ಶಕ್ತಿಗಿಂತ ಮಿಗಿಲಾದ ಶಕ್ತಿಯೇ ಇಲ್ಲ ಎಂದು ನಂಬಿದ್ದರು. ಮಾನವರು "ದೇವರ ಪ್ರತಿರೂಪ" ಮತ್ತು ಅವರಲ್ಲಿ "ದೈವಿಕ ಅಂಶವೂ" ಇರುವುದರಿಂದ, ಅವರನ್ನು ಭಯ ಮತ್ತು ಹಿಂಸೆಯಿಂದಲ್ಲ, ಬದಲಿಗೆ ತರ್ಕ ಮತ್ತು ಪ್ರೀತಿಯಿಂದ ಪ್ರೇರೇಪಿಸಬೇಕು ಮತ್ತು ಮುನ್ನಡೆಸಬೇಕು ಎಂದುಕೊಂಡಿದ್ದರು. ಒಬ್ಬ ವ್ಯಕ್ತಿಯು ಸತ್ಯದಲ್ಲಿ ದೃಢವಾಗಿ ಬೇರೂರಿದಾಗ, ತರ್ಕವು ಯಾವಾಗಲೂ ಅವನನ್ನು ಪ್ರೀತಿ ಮತ್ತು ನೀತಿಯ ಮಾರ್ಗದಲ್ಲಿ ಮುನ್ನಡೆಸುತ್ತದೆ. ಸತ್ಯ, ಪ್ರೀತಿ ಮತ್ತು ನೀತಿಗಾಗಿ ಜೀವಿಸಬೇಕು ಮತ್ತು ಸಾಯಲು ಸಹ ಸಿದ್ಧರಾಗಿರಬೇಕು, ಆದರೆ ಎಂದಿಗೂ ಕೊಲ್ಲುವ ಕ್ರೌರ್ಯಕ್ಕೆ ನಿಲ್ಲಬಾರದು. "ನ್ಯಾಯಯುತ ಕಾರಣ, ಅಪರಿಮಿತ ತಾಳ್ಮೆ ಮತ್ತು ಹಿಂಸೆಯನ್ನು ತಡೆಯುವ ಸಾಮರ್ಥ್ಯ ಇದ್ದರೆ ಜಯ



ಸುನಿಶ್ಚಿತ." ಸತ್ಯ ಮಾರ್ಗದಲ್ಲೇ ಶಾಂತಿ, ಸತ್ಯ ಮಾರ್ಗದಲ್ಲೇ ನ್ಯಾಯ" ಮತ್ತು "ಅಹಿಂಸಾತ್ಮಕ ಹೋರಾಟದ ಅಂತ್ಯವು ಯಾವಾಗಲೂ ಪರಸ್ಪರ ಸ್ವೀಕಾರಾರ್ಹ ಒಪ್ಪಂದವಾಗಿರುತ್ತದೆ. ಎಂದಿಗೂ ಶತ್ರುವು ಅಂತಾ ಸೋಲಿನಿಂದ ಅವಮಾನಿತ ಆಗಿರುವುದಿಲ್ಲ" ಇವು ಗಾಂಧಿಯವರ ಸತ್ಯ ಮತ್ತು ಅಹಿಂಸೆ ತಂತ್ರದ ಮೂರು ಪ್ರಮುಖ ಸಿದ್ಧಾಂತಗಳಾಗಿವೆ.

ಗಾಂಧಿಯವರು ಸ್ವಾತಂತ್ರ್ಯಕ್ಕಾಗಿ ತಮ್ಮ ಅಹಿಂಸಾತ್ಮಕ ರಾಷ್ಟ್ರೀಯ ಹೋರಾಟವನ್ನು ಆರಂಭಿಸಿದ 30 ವರ್ಷಗಳ ಒಳಗೆ, ಬ್ರಿಟಿಷರು ಸ್ವಯಂಪ್ರೇರಿತವಾಗಿ ಭಾರತದಿಂದ ಹೊರ ನಡೆದರು ಮತ್ತು ಸ್ವತಂತ್ರ ಭಾರತದ ಮೊದಲ ಕಾರ್ಯಗಳಲ್ಲಿ ಒಂದಾದ ಕಾಮನ್‌ವೆಲ್ತ್ ಆಫ್ ನೇಷನ್ಸ್ ಎಂದು ಮರುನಾಮಕರಣಗೊಂಡ ಬ್ರಿಟಿಷ್ ಕಾಮನ್‌ವೆಲ್ತ್‌ನ ಸದಸ್ಯತ್ವವನ್ನು ಪಡೆದುಕೊಂಡಿತು. ಬ್ರಿಟನ್ ಮತ್ತು ಭಾರತವು ಬೇರ್ಪಡುವಾಗ ಸ್ನೇಹಿತರಾಗಿ ಉಳಿದೆವು. ಹಾಗಾಗಿ ಸ್ವಾತಂತ್ರ್ಯಕ್ಕಾಗಿ ಅಹಿಂಸಾತ್ಮಕ ಹೋರಾಟವು ಸಂಪೂರ್ಣವಾಗಿ ಸಮರ್ಥನೀಯವಾಗಿದೆ. ಗಾಂಧಿಯವರ ಸತ್ಯ ಮತ್ತು ಅಹಿಂಸೆ ತಂತ್ರವು ಭಾರತದ ಹೊರಗೂ ಗಮನಾರ್ಹ ಯಶಸ್ಸನ್ನು ಕಂಡಿದೆ. ಈ ತಂತ್ರವನ್ನು ಬಳಸಿಯೇ ಮಾರ್ಟಿನ್ ಲೂಥರ್ ಕಿಂಗ್ 1960 ರ ದಶಕದ ಒಂದೇ ದಶಕದಲ್ಲಿ ಅಮೆರಿಕದ ಕಪ್ಪು ಜನರಿಗೆ ಒಂದು ರಕ್ತರಂಜಿತ ಒಳಯುದ್ಧ ಮತ್ತು ನಂತರದ ನೂರು ವರ್ಷಗಳ ಸಾಂವಿಧಾನಿಕ ಮತ್ತು ಕಾನೂನು ಹೋರಾಟಕ್ಕಿಂತ ಹೆಚ್ಚಿನ ಪ್ರಯೋಜನಕಾರಿಯಾದ ಬದಲಾವಣೆಯನ್ನು ತಂದರು. ಈ ತತ್ವವು ಅವರಲ್ಲಿ ಮೂಲಭೂತ ರೂಪಾಂತರವನ್ನು ತಂದಿತು.

1960 ಮತ್ತು 70 ರ ದಶಕಗಳಲ್ಲಿ, ಏಷ್ಯಾ ಮತ್ತು ಆಫ್ರಿಕಾದ ನೂರಕ್ಕೂ ಹೆಚ್ಚು ಯುರೋಪಿಯನ್ ವಸಾಹತುಗಳು ಸ್ವಾತಂತ್ರ್ಯವನ್ನು ಸಾಧಿಸಿದವು. ಇದು ಭಾಗಶಃ ಅವರು ಒಂದೇ ರೀತಿಯ ಪರಿಣಾಮಕಾರಿ ಅಹಿಂಸಾತ್ಮಕ ಹೋರಾಟದ ಸಾಧನವನ್ನು ಬಳಸಿದ್ದರಿಂದ ಮತ್ತು ಭಾಗಶಃ ಗಾಂಧಿ ಮತ್ತು ಮಾರ್ಟಿನ್ ಲೂಥರ್ ಕಿಂಗ್ ನೇತೃತ್ವದ ರಾಷ್ಟ್ರೀಯ ಚಳವಳಿಗಳು ಸಾಮ್ರಾಜ್ಯಶಾಹಿ, ವಸಾಹತುಶಾಹಿ ಮತ್ತು ವರ್ಣಭೇದ ನೀತಿಯ ಸ್ವೀಕಾರಾರ್ಹತೆಯ ಬಗ್ಗೆ ಜಾಗತಿಕ ಮನೋಭಾವವನ್ನು ಪರಿಣಾಮಕಾರಿಯಾಗಿ ಬದಲಾಯಿಸಿದ್ದರಿಂದ ಸಂಭವಿಸಿತು. 80 ಮತ್ತು 90 ರ ದಶಕಗಳಲ್ಲಿ, ಪೋಲೆಂಡ್, ಚೆಕೊಸ್ಲೊವಾಕಿಯಾ, ರೊಮೇನಿಯಾ, ಫಿಲಿಪೈನ್ಸ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ದಬ್ಬಾಳಿಕೆಯ ಆಡಳಿತಗಳನ್ನು ಅಹಿಂಸಾತ್ಮಕ ಚಳವಳಿಗಳು ಯಶಸ್ವಿಯಾಗಿ ಕೆಡವಿದವು. ಇದೇ ತಂತ್ರವನ್ನು ಬಳಸಿ, ಒಬ್ಬ ದುರ್ಬಲ ಮಹಿಳೆ, ಆಂಗ್ ಸಾನ್ ಸೂ ಕೀ, ಬರ್ಮಾದಲ್ಲಿ ದಬ್ಬಾಳಿಕೆಯ ಮಿಲಿಟರಿ ಶಕ್ತಿಯ ವಿರುದ್ಧ ಧೈರ್ಯವಾಗಿ ನಿಂತು, ತನ್ನ ಪ್ರಜಾಪ್ರಭುತ್ವದ ಹೋರಾಟಕ್ಕೆ ವಿಶ್ವದ ಬೆಂಬಲವನ್ನು ಪರಿಣಾಮಕಾರಿಯಾಗಿ ಪಡೆದಳು. 1989 ರ ಡಿಸೆಂಬರ್‌ನಲ್ಲಿ ತನ್ನ ನೊಬೆಲ್ ಪ್ರಶಸ್ತಿಯನ್ನು ಸ್ವೀಕರಿಸುವಾಗ, ಆಕೆ ಹೇಳಿದ್ದು : "ನಾನು ಈ ಪ್ರಶಸ್ತಿಯನ್ನು ಸ್ವಾತಂತ್ರ್ಯಕ್ಕಾಗಿ ವಿಶ್ವದ ಯಾವುದೇ ಭಾಗದಲ್ಲಿ ಹೋರಾಡುವವರ ಪರವಾಗಿ ಮತ್ತು ವಿಶ್ವ ಶಾಂತಿಗಾಗಿ ಕೆಲಸ ಮಾಡುವವರ ಪರವಾಗಿ ಕೃತಜ್ಞತೆಯೊಂದಿಗೆ ಸ್ವೀಕರಿಸುತ್ತೇನೆ. ಜಗತ್ತಿನ ಬದಲಾವಣೆಗೆ ಮಹಾತ್ಮಾ ಗಾಂಧಿಯವರು ಸ್ಥಾಪಿಸಿದ ಆಧುನಿಕ ಅಹಿಂಸಾ ತತ್ವವು ತನ್ನ ಮೇಲೆ ಅಪಾರ ಪ್ರಭಾವ ಬೀರಿತು, ಆದ್ದರಿಂದ ಈ ಪ್ರಶಸ್ತಿಯನ್ನು ಮಹಾತ್ಮ ಗಾಂಧಿಯವರ ಪರವಾಗಿ ಗೌರವಯುತವಾಗಿ ಸ್ವೀಕರಿಸುತ್ತೇನೆ. ಮತ್ತು ಈ ಕ್ಷಣಕ್ಕೂ ಅಪಾರ ಯಾತನೆಯನ್ನು ಅನುಭವಿಸುತ್ತಿರುವ ನನ್ನ ಧೈರ್ಯಶಾಲಿ ಆರು ಮಿಲಿಯನ್ ಟಿಬೆಟಿಯನ್ನರ ಪರವಾಗಿ ಈ ಪ್ರಶಸ್ತಿಯನ್ನು ಸ್ವೀಕರಿಸುತ್ತೇನೆ."

ಗಾಂಧಿಯವರ ಅಹಿಂಸಾತ್ಮಕ ಪ್ರತಿರೋಧ ತಂತ್ರಗಳನ್ನು ಅಮೆರಿಕ, ಯುರೋಪ್ ಮತ್ತು ವಿಶ್ವದ ಇತರ ಭಾಗಗಳಲ್ಲಿ ನಾಗರಿಕ ಹಕ್ಕುಗಳು ಮತ್ತು ಶಾಂತಿ ಕಾರ್ಯಕರ್ತರು ಮತ್ತು ಜನರ ಚಳವಳಿಗಳಲ್ಲಿ ಮಾತ್ರವಲ್ಲ, 1956 ರ ಸೋವಿಯತ್ ಆಕ್ರಮಣದ ನಂತರ ಹಂಗೇರಿಯನ್ನರು ಸಹ ಬಳಸಿದರು. ಸೇನಾ ನಾಯಕರಲ್ಲಿಯೂ ಸಹ ಇವು ಗಮನಾರ್ಹ ಆಸಕ್ತಿಯನ್ನು ಉಂಟುಮಾಡಿದವು. ಪಾಲ್ ವೆಹರ್ ತಮ್ಮ 'ನಾನ್‌ವಾಯ್ಲೆನ್ಸ್ ಆಂಡ್ ನ್ಯಾಷನಲ್ ಡಿಫೆನ್ಸ್' ಲೇಖನದಲ್ಲಿ, "ಗಾಂಧಿ ಇನ್ ದಿ ಪೋಸ್ಟ್-ಮಾಡರ್ನ್ ಏಜ್" ಪುಸ್ತಕದಲ್ಲಿ ಬರೆಯುತ್ತಾರೆ: ಗಾಂಧಿಯವರ ಅಹಿಂಸಾತ್ಮಕ ರಾಷ್ಟ್ರೀಯ ರಕ್ಷಣೆಯ ಕಲ್ಪನೆಗಳು ಯುದ್ಧದ ತುದಿಯಲ್ಲಿರುವ ಪಾಶ್ಚಿಮಾತ್ಯ ಜಗತ್ತಿಗೆ ಮಾರ್ಗದರ್ಶನವಾದವು. ಅಲ್ಲಿನ ಶಾಂತಿವಾದಿಗಳು ಕಾರ್ಯ ಸಾಧಿಸಬಹುದಾದ ಪರ್ಯಾಯ ಮಾರ್ಗಕ್ಕಾಗಿ ತೀವ್ರವಾಗಿ ಹುಡುಕುತ್ತಿದ್ದರು." ಕೆನೆತ್ ಬೌಲ್ಡಿಂಗ್‌ರ "ಪಾತ್ ಆಫ್ ಗ್ಲೋರಿ: ಎ ನ್ಯೂ ವೇ ವಿತ್ ವಾರ್" ಲೇಖನವು ಅಹಿಂಸಾತ್ಮಕ ಪ್ರತಿರೋಧವನ್ನು ಯುದ್ಧಕ್ಕೆ ಪ್ರತಿಯಾಗಿ ಪ್ರಸ್ತಾಪಿಸಿತು. ತಂತ್ರಜ್ಞಾನ ಕ್ರಾಂತಿಯು ಯುದ್ಧವನ್ನು ನಿಷ್ಕ್ರಿಯಗೊಳಿಸುತ್ತಿರುವುದನ್ನು ಅವರು ಗಮನಿಸಿದ್ದರು.ಹಲವು ವರ್ಷಗಳ ಹಿಂದೆಯೇ ಅವರು ಪ್ರಸ್ತಾಪಿಸಿದ್ದ transarmamentಎಂಬ ಇದೇ ಮಾದರಿಯ ಪರಿಕಲ್ಪನೆಯು ಇಂದು ಸಮಕಾಲೀನ ಜಗತ್ತಿನ ಸಾಮಾಜಿಕ ರಕ್ಷಣೆಗೆ ಆಧಾರವನ್ನು ಒದಗಿಸಿತ್ತು. ಬೌಲ್ಡಿಂಗ್ ಅವರು ಗ್ರೇಟ್ ಬ್ರಿಟನ್‌ನಂತಹ ರಾಷ್ಟ್ರವು ಅಹಿಂಸಾತ್ಮಕ ರಕ್ಷಣಾ ನೀತಿಯನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸಿದವರಲ್ಲಿ ಮೊದಲಿಗರಾಗಿದ್ದಾರೆ. ಹಾಗೆಯೇ ಡೆನ್ಮಾರ್ಕ್‌ನ ಲಿಂಡ್‌ಬರ್ಗ್, ಹಾಲೆಂಡ್‌ನ ವ್ರಿಂಡ್, ಮತ್ತು ನಾರ್ವೆಯ ಜಾನ್ ಗಾಲ್ಟುಂಗ್ ಮತ್ತು ಆರ್ನೆನೇಸ್ ಇದೇ ಮಾರ್ಗವನ್ನು ಹಿಡಿದರು. ಅವರ ಈ ಮಾರ್ಗವು ನೇರವಾಗಿ ಮಹಾತ್ಮಾ ಗಾಂಧಿಯವರಿಂದ ಸ್ಫೂರ್ತಿ ಪಡೆದಿದ್ದುದಾಗಿತ್ತು. "1950ರ ದಶಕದ ಕೊನೆಯಲ್ಲಿ ಆರಂಭವಾದ ಅಣ್ವಸ್ತ್ರ ಆಯುಧಗಳ ಕರಿನೆರಳಿನಲ್ಲೂ ಈ ತತ್ವವು ರಾಷ್ಟ್ರೀಯ ರಕ್ಷಣೆಗೆ ಹೆಚ್ಚು ವಿಶ್ವಾಸಾರ್ಹ ಆಯ್ಕೆಯಾಗಿ ಕಾಣಿಸಿತು. 1962 ರ ಹೊತ್ತಿಗೆ, 'ಸಾಮಾಜಿಕ ರಕ್ಷಣೆ' ಪರಿಕಲ್ಪನೆಯು ಪಾಶ್ಚಿಮಾತ್ಯ ಯುರೋಪ್‌ನಲ್ಲಿ ಬೇರೂರಿತು. 1964 ರ ಆಕ್ಸ್‌ಫರ್ಡ್ ಸಮ್ಮೇಳನವು ಶಾಂತಿ ಸಂಶೋಧಕರು, ಸೇನಾ ತಂತ್ರಜ್ಞರು ಮತ್ತು ಅಹಿಂಸಾತ್ಮಕ ಪ್ರತಿರೋಧದ ನೇರ ಅನುಭವವಿರುವ ಜನರನ್ನು ಒಟ್ಟುಗೂಡಿಸಿತು. 1980 ರ ಹೊತ್ತಿಗೆ, 'ಸಾಮಾಜಿಕ ರಕ್ಷಣೆ' ಅಥವಾ 'ನಾನ್-ಮಿಲಿಟರಿ ರೆಸಿಸ್ಟೆನ್ಸ್' ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮತ್ತು ಫಿನ್‌ಲ್ಯಾಂಡ್‌ನ ಒಟ್ಟಾರೆ ರಕ್ಷಣಾ

ನೀತಿಯ ಅವಿಭಾಜ್ಯ ಭಾಗವಾಗಿತ್ತು.

ಪರಮಾಣು ಬಾಂಬ್‌ನ ಬಗ್ಗೆ, ಗಾಂಧಿಯವರ ಅಭಿಪ್ರಾಯಗಳು ಆಗಸ್ಟ್ 1945 ರಲ್ಲಿ ಹಿರೋಷಿಮಾ ಮತ್ತು ನಾಗಸಾಕಿಯ ಪರಮಾಣು ಬಾಂಬ್ ದಾಳಿಯ ದುರಂತದ ನಂತರ ಸ್ಪಷ್ಟವಾಗಿ ವ್ಯಕ್ತವಾದವು: "ಬಾಂಬ್‌ನ ಈ ಪರಮ ದುರಂತದಿಂದ ಕಾನೂನುಬದ್ಧವಾಗಿ ತೆಗೆದುಕೊಳ್ಳಬೇಕಾದ ನೈತಿಕತೆಯೆಂದರೆ, ಅದನ್ನು ಪ್ರತಿಬಾಂಬ್‌ಗಳಿಂದ ನಾಶಪಡಿಸಲಾಗದು. ಜಗತ್ತು ಅಹಿಂಸೆಯನ್ನು ಅಳವಡಿಸಿಕೊಳ್ಳದಿದ್ದರೆ, ಅದು ಮಾನವಕುಲಕ್ಕೆ ಸ್ವಯಂನಾಶವನ್ನು ತರುವುದು ಖಚಿತ".

ಆಲ್ಬರ್ಟ್ ಐನ್‌ಸ್ಟೀನ್ ಸಹ ಇದೇ ಭಾವನೆಯನ್ನು ವ್ಯಕ್ತ ಪಡಿಸಿದ್ದರು : "ಅಣ್ವಸ್ತ್ರ ಶಕ್ತಿಯು ಎಲ್ಲವನ್ನೂ ಬದಲಾಯಿಸಿದೆ, ಆದರೆ ನಮ್ಮ ಮನಸ್ಸನ್ನು ಮಾತ್ರ ಬದಲಾಯಿಸಲು ಸಾಧ್ಯವಾಗಿಲ್ಲ. ಆದ್ದರಿಂದ ನಾವು ಊಹಿಸಿಕೊಳ್ಳಲೂ ಕೂಡಾ ಸಾಧ್ಯವಾಗದ ವಿಪತ್ತಿನ ಕಡೆಗೆ ಸಾಗುತ್ತಿದ್ದೇವೆ. ಮಾನವಕುಲವು ಬದುಕಬೇಕಾದರೆ ನಮಗೆ ಹೊಸ ರೀತಿಯ ಚಿಂತನೆಯ ಅಗತ್ಯವಿದೆ."

ಗಮನಾರ್ಹ ಸಂಗತಿಯೆಂದರೆ ರಾಜಕೀಯ ಸಾಧನವಾಗಿ ಪರಮಾಣು ಶಸ್ತ್ರಾಸ್ತ್ರಗಳ ದೊಡ್ಡ ಪ್ರತಿಪಾದಕನಾಗಿದ್ದ ಹೆನ್ರಿ ಕಿಸಿಂಜರ್ ಕೂಡಾ, ಜುಲೈ 31, 1979 ರಂದು ಯುಎಸ್ ಸೆನೆಟ್ ಫಾರಿನ್ ರಿಲೇಷನ್ಸ್ ಕಮಿಟಿಯಲ್ಲಿ ಖಂಖಖಿ ಖಖು ಕುರಿತು ತಮ್ಮ ಸಾಕ್ಷ್ಯವನ್ನು ಈ ಮಾತುಗಳೊಂದಿಗೆ ಆರಂಭಿಸಿದರು: "ತನ್ನ 'ಪರ್ಪೆಚುವಲ್ ಪೀಸ್' ಲೇಖನದಲ್ಲಿ, ತತ್ವಜ್ಞಾನಿ ಇಮ್ಯಾನ್ಯುಯೆಲ್ ಕಾಂಟ್, ಎರಡು ವಿಧಗಳಲ್ಲಿ ನಾವು ವಿಶ್ವ ಶಾಂತಿಯನ್ನು ಪ್ರತಿಸ್ಥಾಪಿಸಬಹುದು ಎಂದು ಹೇಳುತ್ತಾರೆ: ಒಂದು, ಸತತವಾಗಿ ನಡೆಯುತ್ತಿರುವ ಹಿಂಸೆಯ ಯುದ್ಧಗಳ ನಂತರ ಶಾಂತಿ ಸ್ಥಾಪನೆ ಆಗಬಹುದು, ಅಥವಾ ಎರಡು, ರಾಷ್ಟ್ರಗಳು ಸ್ವಯಂವಿನಾಶಕ್ಕೆ ಕಾರಣವಾಗುವ ಈ ಕೆಟ್ಟ ಸ್ಪರ್ಧೆಯನ್ನು ತ್ಯಜಿಸಿ, ನೈತಿಕ ಒಳನೋಟದ ಮಾರ್ಗವನ್ನು ಅನುಸರಿಸುವುದರಿಂದ"

ಗಾಂಧಿಯವರ ಸಾಮಾಜಿಕ, ರಾಷ್ಟ್ರೀಯ ಮತ್ತು ಜಾಗತಿಕ ಶಾಂತಿಯ ವಿಧಾನವಾದರೂ ಏನಿತ್ತು? ಒಬ್ಬ ವ್ಯಕ್ತಿಯು ಶಾಂತಿಯನ್ನು ನಿಜವಾಗಿಯೂ ಬಯಸಿದರೆ, ಯುದ್ಧಕ್ಕೆ ತಯಾರಾಗುವ ಬದಲು ಶಾಂತಿಗಾಗಿ ಶ್ರಮಿಸಬೇಕು ಎಂಬ ಸರಳ ಊಹೆಯ ಮೇಲೆ ಇದು ಆಧಾರಿತವಾಗಿತ್ತು. ಒಬ್ಬರ ಮನಸ್ಸಿನಿಂದ ದ್ವೇಷ, ದುರಹಂಕಾರ, ಲೋಭ ಮತ್ತು ಭಯವನ್ನು ಶುದ್ಧಗೊಳಿಸಬೇಕು ಮತ್ತು ಇತರರಲ್ಲಿ ಈ ಭಾವನೆಗಳು ಕೆರಳದಂತೆ ತಡೆಯಬೇಕು.

ಇಂದು ಭಯೋತ್ಪಾದನೆಯು ಒಂದು ಭಯಂಕರ ಪಿಡುಗಾಗಿದೆ. ಅದನ್ನು ಕೇವಲ ದುರಾಸೆಯಿಂದಾಗಲೀ ಅಥವಾ ಬಾಂಬುಗಳನ್ನು ಹಾಕುವುದರಿಂದಾಗಲಿ ತಡೆಯಲು ಸಾಧ್ಯವಿಲ್ಲ. ಇಂದು ಬಹುತೇಕ ಭಯೋತ್ಪಾದನಾ ಚಟುವಟಿಕೆಗಳು ಧಾರ್ಮಿಕ ಕಟ್ಟುಪಾಡುಗಳಿಂದ ಅಥವಾ ಧರ್ಮದ ಆವರಣದಲ್ಲಿ ರಾಜಕೀಯ ತೀವ್ರತಾವಾದದಿಂದ ಹುಟ್ಟಿಕೊಂಡಿದೆ. ಆದರೂ ಐತಿಹಾಸಿಕ ತಳವೂರಿರುವ ಅನ್ಯಾಯಯುತ ಭೂಮಿ ಹಂಚಿಕೆ, ಜೀವನ ಪರಿಸ್ಥಿತಿಗಳು, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಅಸಮಾನತೆಗಳ ಕಾರಣದಿಂದ ಧರ್ಮವೇ ಭಯೋತ್ಪಾದನೆಯನ್ನು ಸಮರ್ಥಿಸುತ್ತವೆ. ಸೆಪ್ಟೆಂಬರ್ 9 , 2011 ರ ಭಯೋತ್ಪಾದಕ ದಾಳಿಯು ಒಂದು ಮಾದರಿಯ ಯುದ್ಧದ ಸನ್ನಿವೇಶದ ವಿನಾಶಕಾರಿ ಪರಿಣಾಮಗಳನ್ನು ತೋರಿಸಿತು ಮತ್ತು "ಅಸಮ್ಮಿತ ಯುದ್ಧ"ದ ಯುಗವನ್ನು ಆರಂಭಿಸಿತು, ಇಲ್ಲಿ ಶತ್ರು ಅಗೋಚರ, ಸಂಖ್ಯೆಯಲ್ಲಿ ಕಿರಿದಾಗಿದ್ದರೂ ಸಹ ಹೊರಗಿನಿಂದ ನಮ್ಮನ್ನು ಆಕ್ರಮಣ ಮಾಡದೇ ಸಮಾಜದ ಒಳಗಿನಿಂದಲೇ ದಾಳಿ ಮಾಡುತ್ತಾನೆ.


ಹಿಂಸೆ ಮತ್ತು ಭಯೋತ್ಪಾದನೆಯಿಂದ ನಲುಗುತ್ತಿರುವ ಎಲ್ಲ ದೇಶಗಳಿಗೆ ಎದುರಾಗುವ ನಿರ್ಣಾಯಕ ವಿಷಯವೆಂದರೆ, ಶಾಂತಿ ಮತ್ತು ಭದ್ರತೆಯನ್ನು ಸಂಘರ್ಷದ ಸ್ಥಿತಿಯ ಎರಡೂ ಕಡೆಯವರ ಆಕಾಂಕ್ಷೆಗಳು ಮತ್ತು ನ್ಯಾಯಯುತ ಬೇಡಿಕೆಗಳ ಆಧಾರದ ಮೇಲೆ ನ್ಯಾಯ ಮತ್ತು ಮಾತುಕತೆಯ ಮೂಲಕ ಪರಸ್ಪರ ಒಪ್ಪಿಗೆಯ ಒಪ್ಪಂದಗಳ ಮೂಲಕ ಉತ್ತಮವಾಗಿ ಅನುಸರಿಸಬೇಕೇ, ಅಥವಾ ಮುನ್ನೆಚ್ಚರಿಕೆಯಿಂದ ಪ್ರತೀಕಾರದ ಸೇನಾ ಕಾರ್ಯಾಚರಣೆಯ ಮೂಲಕ ಮತ್ತು ಕೊಟ್ಯಾಂತರಡಾಲರ್‌ನ ರಾಷ್ಟ್ರೀಯ ಭದ್ರತಾ ಯೋಜನೆಗಳ ಮೂಲಕ ಅನುಸರಿಸಬೇಕೇ ಎಂಬುದು. ಈಜಿಪ್ಟ್‌ನ ಅಧ್ಯಕ್ಷ ಅನ್ವರ್ ಸಾದತ್‌ರ 1977 ರಲ್ಲಿ ಜೆರುಸಲೇಮ್‌ಗೆ ಮಾಡಿದ ವೀರೋಚಿತ ಭೇಟಿ ಮತ್ತು ನಂತರ ಇಸ್ರೇಲ್‌ನ ಪ್ರಧಾನಮಂತ್ರಿ ಇಜ್ಹಾಕ್ ಶಮೀರ್‌ರೊಂದಿಗಿನ ಕ್ಯಾಂಪ್ ಡೇವಿಡ್‌ನಲ್ಲಿ ನಡೆದ ಯಶಸ್ವಿ ಶಾಂತಿ ಮಾತುಕತೆಗಳ ಫಲಿತಾಂಶವು, ಅಹಿಂಸಾತ್ಮಕ, ಮಾತುಕತೆಯ ಮಾರ್ಗವು ಶಾಂತಿಗೆ ಅತ್ಯಂತ ಕಷ್ಟಕರ ಸಮಯಗಳಲ್ಲಿಯೂ ಸಂಘರ್ಷದ ಎರಡೂ ಕಡೆಯವರಿಗೆ ಅತ್ಯುತ್ತಮ, ಶಾಶ್ವತ ಫಲಿತಾಂಶಗಳನ್ನು ನೀಡಬಲ್ಲವು ಎನ್ನುವುದಕ್ಕೆ ಅಪರಿಮಿತ ಸಾಕ್ಷಿಯಾಗಿದೆ.

**ಉಲ್ಲೇಖಗಳು:**


- ಬುಲ್ಟ್‌ಜೆನ್ಸ್, ರಾಲ್ಫ್ (1984), 'ಫಾರ್‌ವರ್ಡ್'. ಗಾಂಧಿ ಇನ್ ದಿ ಪೋಸ್ಟ್ ಮಾಡರ್ನ್ ಏಜ್: ಇಶ್ಯೂಸ್ ಇನ್ ವಾರ್ ಆಂಡ್ ಪೀಸ್ ಬೈ ಸ್ಟಾನ್‌ಫೋರ್ಡ್ ಕ್ರೊಲಿಕ್ & ಬೆಟ್ಟಿ ಕ್ಯಾನನ್ (ಸಂಪಾದಕರು): ಕೊಲೊರಾಡೋ ಸ್ಕೂಲ್ ಆಫ್ ಮೈನ್ಸ್.
- ಗಾಂಧಿ, ಎಂ. ಕೆ. (1928), 'ದಿ ಕರ್ಸ್ ಆಫ್ ಅಸಾಸಿನೇಷನ್ಸ್', ಯಂಗ್ ಇಂಡಿಯಾ.
- ವೆಹರ್, ಪಾಲ್ (1984), 'ನಾನ್–ವಾಯ್ಲೆನ್ಸ್ ಆಂಡ್ ನ್ಯಾಷನಲ್ ಡಿಫೆನ್ಸ್' ಇನ್ ಗಾಂಧಿ ಇನ್ ಪೋಸ್ಟ್ ಮಾಡರ್ನ್ ಏಜ್.
- ಬೌಲ್ಡಿಂಗ್, ಕೆನೆತ್ (1937), ಪಾತ್ ಆಫ್ ಗ್ಲೋರಿ: ಎ ನ್ಯೂ ವೇ ವಿತ್ ವಾರ್.
- ಆರ್ಮ್‌ಸ್ಟ್ರಾಂಗ್, ಕ್ಯಾರನ್ (1984), ಬ್ಯಾಟಲ್ ಫಾರ್ ಗಾಡ್, ಟೊರೊಂಟೊ: ಆಂಗ್ಲಿ ಕ್ಯಾನ್ ಸೆಂಟರ್.
- ಹಂಟಿಂಗ್‌ಟನ್, ಸ್ಯಾಮುಯೆಲ್ ಪಿ. (1997), ಕ್ಲಾಶ್ ಆಫ್ ಸಿವಿಲೈಜೇಷನ್ಸ್ ಆಂಡ್ ರಿಮೇಕಿಂಗ್ ಆಫ್ ವರ್ಲ್ಡ್ ಆರ್ಡರ್, ಪೆಂಗ್ವಿನ್ ಬುಕ್ಸ್


**(ಕೃತಕ ಬುದ್ದಿಮತ್ತೆ ಸಹಾಯದಿಂದ ಕನ್ನಡ ಅನುವಾದ ಸಮನ್ವಯ : ವಿಜಯ್ ಹನಕೆರೆ )**

■



# ಮಹಾತ್ಮನ ಅಹಿಂಸಾ ತತ್ವದ ಘೋಷಣೆ...!

ಅಸಹಕಾರ ಚಳವಳಿಯು ದೇಶಾದ್ಯಂತ ಅಹಿಂಸಾಯುತವಾಗಿ ನಡೆಯುತ್ತಿದ್ದ ಕಾಲವದು. ಉತ್ತರ ಪ್ರದೇಶದ 'ಚೌರಿ–ಚೌರಾ' ಎಂಬ ಗ್ರಾಮದಲ್ಲಿ ಸಂಭವಿಸಿದ ಒಂದು ಹಿಂಸಾತ್ಮಕ ಘಟನೆಯಿಂದ ಮಹಾತ್ಮ ಗಾಂಧೀಜಿಯವರು ತಮ್ಮ ಸತ್ಯಾಗ್ರಹ ಕಾರ್ಯಕ್ರಮವನ್ನು ಹಠಾತ್ತನೆ ನಿಲ್ಲಿಸಿದರು.

ಆದರೂ, ಗಾಂಧೀಜಿಯವರ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿ, ದೇಶದಲ್ಲಿ ಹಿಂಸೆಯನ್ನು ಪ್ರೇರೇಪಿಸಿದರೆಂಬ ಕಾರಣದಿಂದ ಗಾಂಧೀಜಿಯವರನ್ನು ಬಂಧಿಸಿದರು.

1922 ಮಾರ್ಚ್ 18 ರಂದು ಅಹಮದಾಬಾದ್ ಸೆಷನ್ಸ್ ಕೋರ್ಟ್ ನಲ್ಲಿ ಹಾಜರುಪಡಿಸಿದಾಗ, ಜಡ್ಜ್ ಮುಂದೆ ಗಾಂಧೀಜಿಯವರು ನೀಡಿದ ವಾಂಗ್ಮೂಲ ಐತಿಹಾಸಿಕವಾದುದು.

ಗಾಂಧೀಜಿಯವರು ಆ ವಾಂಗ್ಮೂಲ ನೀಡಿದಾಗ ಟಂಗುಟೂರಿ ಪ್ರಕಾಶಂ ಪಂತುಲು ಆ ಕೋರ್ಟ್ ಹಾಲ್ ನಲ್ಲೇ ಇದ್ದು, ವಿಚಾರಣೆಯ ಪ್ರಕ್ರಿಯೆಯನ್ನೆಲ್ಲ ಸ್ವತಃ ನೋಡಿದರು.

ಆ ಐತಿಹಾಸಿಕ ನ್ಯಾಯ ವಿಚಾರಣೆಯ ಬಗ್ಗೆ ಪ್ರಕಾಶಂ ಅವರು ತಮ್ಮ ಆತ್ಮಕಥೆ 'ನನ್ನ ಜೀವನ ಯಾತ್ರೆ' ಯಲ್ಲಿ ಸವಿವರವಾಗಿ ಬರೆದಿದ್ದಾರೆ.

ಕನ್ನಡಕ್ಕೆ : ಕಂಪ್ಲಪ್ಪ ಚನ್ನಸಾಗರದಹಟ್ಟಿ
ಲೇಖನ ಸಂಗ್ರಹ ಕೃಪೆ : ನಿಖಿಲ್ ನಾಗರಾಜ್

" ಆ ನ್ಯಾಯಾಲಯ ವಿಚಾರಣೆ ಎಂಬುದು ಜಗತ್ತಿನ ಚರಿತ್ರೆಯನ್ನೇ ತಾರುಮಾರು ಮಾಡುವ ರೀತಿಯಲ್ಲಿ ಜರುಗಿತು. ಆ ಕೋರ್ಟ್ ನಲ್ಲಿ ಮಹಾತ್ಮ ನೀಡಿದ ವಾಂಗ್ಮೂಲ ಕೇಳುವವರೆಗೂ ಅವರ ಘನತೆ ಅವರ ಆತ್ಮೀಯರಿಗೂ ಕೂಡ ಅರ್ಥವಾಗಿರಲಿಲ್ಲ.

ಲಿಖಿತ ಪೂರ್ವಕವಾಗಿ ದಾಖಲೆ ಮಾಡಿದ ಆ ವಾಂಗ್ಮೂಲದಲ್ಲಿ ಗಾಂಧೀಜಿಯವರು ತಮ್ಮನ್ನು ಬಂಧಿಸಿದ ರೀತಿ, ಕೇಸು ವಿಚಾರಣೆ ಮಾಡಿದ ರೀತಿ ಎಲ್ಲವನ್ನೂ ಹೇಳುತ್ತ, ತಿರಸ್ಕಾರವಾಗಿ ತಾನು ಹೇಳಬೇಕಾದ ಸಂಗತಿಗಳೆಲ್ಲವನ್ನೂ ಅದರಲ್ಲಿ ಸೇರಿಸಿದರು. ಆ ವಾಂಗ್ಮೂಲವನ್ನು ಗಾಂಧೀಜಿಯವರು ಓದುತ್ತಿದ್ದರೆ, ಅವರ ಬಾಯಿಂದ ಬಂದ ಅಂದಿನ ಮಾತುಗಳು ಇವತ್ತು ಕೂಡ ನನ್ನ ಕಿವಿಯಲ್ಲಿ ಅನುರಣಿಸುತ್ತಿವೆ.

**ಆ ವಾಂಗ್ಮೂಲದ ಸಾರಾಂಶವಿದು :**

' ಭಾರತ ದೇಶದ ನಾಲ್ಕು ಮೂಲೆಗಳಲ್ಲೂ ಈ ನಡುವೆ ಜರುಗಿದ ಜಗಳ,ಸಾವು,ಹತ್ಯೆಗಳಿಗೆ ನಾನು ಸ್ವತಃ ಬಾಧ್ಯತೆ ವಹಿಸುತ್ತಿದ್ದೇನೆ. ಈ ಅಸಹಕಾರ ಚಳವಳಿಯನ್ನು, ಕಾಯಿದೆ ಧಿಕ್ಕಾರದ ಪ್ರಣಾಳಿಕೆಯನ್ನು ನಡೆಸುತ್ತಿರುವುದು ನಾನೇ.

ನನ್ನ ಚಳವಳಿಯ ಕಾರಣದಿಂದ ಜರುಗಿದ,

ಜರುಗುತ್ತಿರುವ ಕರ್ಮಕಾಂಡಕ್ಕೆಲ್ಲ ನಾನೇ ಕರ್ತ. ಅದರಿಂದ ನಾನು ಪೂರ್ತಿಯಾಗಿ ಶಿಕ್ಷಾರ್ಹನು.

ಮರಣ ಶಿಕ್ಷೆ ವಿಧಿಸಿದರೂ ಆನಂದವಾಗಿ ಸ್ವೀಕರಿಸುತ್ತೇನೆ. ನಿಮಗೆ ಯಥೋಚಿತವಾಗಿ ತೋಚಿದ ಶಿಕ್ಷೆಯನ್ನು ನೀವು ವಿಧಿಸಬಹುದು'..

ಈ ಮಾತುಗಳು ಮಹಾತ್ಮನ ಬಾಯಿಂದ ಹೊರ ಬರುತ್ತಿದ್ದರೆ ಕೋರ್ಟ್ ಹಾಲ್ ನಲ್ಲಿ ಕುಳಿತುಕೊಂಡು

ಆ ವಿಚಾರಣೆಯನ್ನು ನೋಡುತ್ತಿದ್ದ ಇಡೀ ಜನರಿಗೆ, ಗಂಡು ಹೆಣ್ಣು ಭೇದವಿಲ್ಲದಂತೆ, ಕಣ್ಣಿನಲ್ಲಿ ನೀರು ಸುರಿದವು. ಅಂದು ಅಲ್ಲಿ ಹಾಗೆ ಕುಳಿತು ಕಣ್ಣೀರು ಸುರಿಸಿದ ಜನರಲ್ಲಿ ಆಂಗ್ಲ ಮಹಿಳೆಯರು, ಪುರುಷರು ಕೂಡ ಇದ್ದರು. ಮಾನವಾತೀತರಾದ ದೈವಾಂಶ ಸಂಭೂತರು ಹೊರತು ಸಾಮಾನ್ಯರು ಯಾರೂ ಅಂತಹ ವಾಂಗ್ಮೂಲ ನೀಡಲಾರರು. ಗಾಂಧೀಜಿಯವರ ವಾಂಗ್ಮೂಲದ ಪ್ರಾಧಾನ್ಯತೆಯ ಮೇಲೆ ಪ್ರಕಾಶಂ ಅವರ ಅಭಿಪ್ರಾಯಗಳು ಮಾತ್ರವೇ ಅಲ್ಲ , ಭಾರತದ ಸ್ವಾತಂತ್ರ್ಯ ಚಳವಳಿಯ ಚರಿತ್ರೆಯನ್ನು ಗಮನಿಸಿದ ಸಂಶೋಧಕರೆಲ್ಲರ ಭಾವನೆಯೂ ಕೂಡ ಅದೇ ಆಗಿದೆ .

ಈ ವಾಂಗ್ಮೂಲವನ್ನು ಕೊಡುವ ಮೊದಲು ಜಡ್ಜ್ ಗೆ ಮಹಾತ್ಮ ಗಾಂಧೀಜಿಯವರು ಹೀಗೆ ಹೇಳಿದರು :

'ಅಡ್ವೊಕೇಟ್ ಜನರಲ್ ಅವರು ನನ್ನ ಮೇಲೆ ಹೊರಿಸಿದ ಆರೋಪಗಳೆಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಬಗ್ಗೆ ಹೇಳಿದುದರಲ್ಲಿ ಯಾವುದೇ ಅಸತ್ಯ ಇಲ್ಲವೆಂದು ನಾನು ಭಾವಿಸುತ್ತೇನೆ.

ಏಕೆಂದರೆ, ನನ್ನ ಬಗ್ಗೆ ಅವರು ಹೇಳಿದವೆಲ್ಲ ಯತಾರ್ಥಗಳೇ . ಈ ಸರ್ಕಾರದ ಮೇಲೆ ನನ್ನ ದೇಶದ ಜನರಲ್ಲಿ ಅಸಂತೃಪ್ತಿಯನ್ನು ಕೆರಳಿಸಬೇಕೆಂಬ ಕೋರಿಕೆ ನನ್ನಲ್ಲಿ ಗಟ್ಟಿಯಾಗಿದೆ.ಈ ವಿಷಯದಲ್ಲಿ ಅಡ್ವಕೇಟ್ ಜನರಲ್ ಗೆ ನನ್ನ ಮೇಲಿರುವ ಅಭಿಪ್ರಾಯ ಸರಿಯಾಗಿದೆ. ಆದರೆ, ಅವರು ಹೇಳಿದಂತೆ –

"ಯಂಗ್ ಇಂಡಿಯಾ" ಪತ್ರಿಕೆಯ ಕಾರಣದಿಂದಲೇ ನನ್ನಲ್ಲಿ ಈ ಧೋರಣೆ ಗಟ್ಟಿಗೊಳ್ಳಲಿಲ್ಲ.

ಅದಕ್ಕಿಂತ ಮೊದಲು ಬಹಳ ದಿನಗಳಿಂದಲೂ ನನ್ನಲ್ಲಿ ಈ ತತ್ವ ಇದೆಯೆಂದು ಹೇಳುವುದಕ್ಕೆ ನಾನೇನು ನೋವುಪಡುತ್ತಿಲ್ಲ'.

ಸತ್ಯದ ಬಗ್ಗೆ ತನಗಿರುವ ಹೆಚ್ಚು ಬದ್ಧತೆಯನ್ನು ಅವರ ಮಾತುಗಳಲ್ಲಿ ಗಾಂಧೀಜಿಯವರು ತಿಳಿಯಪಡಿಸಿದರು.

ಗಾಂಧೀಜಿಯವರು ಪ್ರಧಾನವಾಗಿ ಅಹಿಂಸೆಗಿರುವ ಅಗಣಿತ ಶಕ್ತಿಯನ್ನು ಲೋಕಕ್ಕೆ ಸಾರಬೇಕೆಂದು ಕೊಂಡರು. ಅಷ್ಟೇ ಗಟ್ಟಿಯಾಗಿ ದುಷ್ಟತ್ವಕ್ಕೆ ತಲೆಬಾಗದ ತಮ್ಮ ಶೂರತನವನ್ನು ಸಹ ತಿಳಿಸಬೇಕೆಂದುಕೊಂಡರು. ದೇಶದ ಜನರು, ಕೆಲವು ಪ್ರಮುಖ ನಾಯಕರು ಹಿಂಸಾ ಮಾರ್ಗದಲ್ಲಾದರೂ ಸರಿ, ಸ್ವಾತಂತ್ರ್ಯವನ್ನು ಸಾಧಿಸಬೇಕೆಂಬ ಆಲೋಚನೆ ತನಗೆಷ್ಟು ಮಾತ್ರಕ್ಕೂ ಒಪ್ಪಿತವಲ್ಲವೆಂದು ಕೂಡ ತಿಳಿಸಬೇಕೆಂದುಕೊಂಡರು. ಹಿಂಸಾತ್ಮಕ ಹೋರಾಟದಿಂದಲೇ ಅಮೆರಿಕಾ ಸ್ವಾತಂತ್ರ್ಯ ಪಡೆಯಿತು. ಹೈಟಿ ದೇಶ ಕೂಡ ಹಿಂಸೆ ಮೂಲಕವೇ ಸ್ವಾತಂತ್ರ್ಯ ಗಳಿಸಿತು. ಫ್ರಾನ್ಸ್ ದೇಶ ಕೂಡ ಹಿಂಸೆ ಮೂಲಕವೇ ತನ್ನ ಸರ್ಕಾರವನ್ನು ಪುನರ್ನಿಮಿಸಿಕೊಂಡಿತು. ಆದರೆ ಭಾರತ ದೇಶ ಮಾತ್ರ ಸ್ವಾತಂತ್ರ್ಯವನ್ನು ಅಹಿಂಸೆಯ ಮಾರ್ಗದಲ್ಲೇ ಗಳಿಸಿದ್ದಲ್ಲದೆ, ಸಮರ್ಥವಾದ ಸರ್ಕಾರವನ್ನು ಕೂಡ ಪುನರ್ನಿರ್ಮಿಸಿಕೊಂಡಿತು.ಈ ಅಪೂರ್ವವಾದ ಘನತೆ ಎಂದಿಗೂ ಮಹಾತ್ಮಾಜಿಯವರಿಗೆ ಮಾತ್ರವೇ ದಕ್ಕುತ್ತದೆ.

ಗಾಂಧೀಜಿಯವರು ಆವತ್ತು ತಮ್ಮ ವಾಂಗ್ಮೂಲದಲ್ಲಿ ಇನ್ನೂ ಈ ವಿಧವಾಗಿ ಹೇಳಿದರು.

'ನಿಜಕ್ಕೂ ನಾನು ಅಸಹಕಾರ ಚಳವಳಿಯ ಮೂಲಕ ಭಾರತ ದೇಶಕ್ಕೆ, ಇಂಗ್ಲೆಂಡ್ ಗೆ ಕೂಡ – ಎರಡು ದೇಶಗಳು ಎಷ್ಟು ಅಸಹಜವಾದ ಸ್ಥಿತಿಯಲ್ಲಿ ಬದುಕುತ್ತಿವೆ ಎಂಬುದನ್ನು ತಿಳಿಯಪಡಿಸುವ ಉತ್ತಮ ಸೇವೆ ಮಾಡಿದೆ. ನನ್ನ ಅಭಿಪ್ರಾಯದಲ್ಲಿ ದುಷ್ಟತ್ವಕ್ಕೆ ಸಹಾಯ ನಿರಾಕರಣೆ ಮಾಡುವುದು ಒಳ್ಳೆಯದಕ್ಕೆ ಸಹಾಯ ಮಾಡುವುದಕ್ಕೆ ಸಮಾನವಾದುದು.

ಹಿಂದೆ ದುಷ್ಟತ್ವಕ್ಕೆ ಸಹಾಯ ನಿರಾಕರಣೆಯನ್ನು ಹಿಂಸಾಮಾರ್ಗದಲ್ಲೇ ಮಾಡುತ್ತಿದ್ದರು.

ಆದರೆ, ಹಿಂಸೆ ಮೂಲಕ ಮಾಡುವ ಸಹಾಯ ನಿರಾಕರಣೆ ಹಿಂಸೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ದುಷ್ಟತ್ವವೆಂಬುದು ಹಿಂಸೆ ಮೂಲಕವೇ ಅಸ್ತಿತ್ವ ಮುಂದುವರಿಸುತ್ತದೆಯಾದ್ದರಿಂದ ಸಹಾಯ ನಿರಾಕರಣೆ ಮಾಡುವವರು ಹಿಂಸಾ ಮಾರ್ಗವನ್ನು ಬಿಟ್ಟರೆ, ದುಷ್ಟತ್ವಕ್ಕೆ ಉಳಿವು ಅಸಾಧ್ಯವಾಗುತ್ತದೆಂದು ನನ್ನ ದೇಶದ ಜನರಿಗೆ ತಿಳಿಸಬೇಕೆಂದಿದ್ದೇನೆ. ಅಹಿಂಸೆಯ ಮೂಲಕ ಸಹಾಯ ನಿರಾಕರಣೆ ಎಂದರೆ ದುಷ್ಟತ್ವಕ್ಕೆ ಮತ್ತಷ್ಟು ಬಲವನ್ನು ಕೊಟ್ಟಂತೆಯೇ ಎಂಬುದು ನನಗೆ ಗೊತ್ತು.

ಅಸಹಕಾರ ಚಳವಳಿ ಮಾಡುವವರು ಮತ್ತಷ್ಟು ನೋವು ಅನುಭವಿಸಬೇಕೆಂಬುದು ನನಗೆ ಗೊತ್ತು.

ಅದಕ್ಕೆ ಅಸಹಕಾರ ಚಳವಳಿ ಮಾಡುತ್ತಿರುವ ನನಗೆ ನಿಮ್ಮ ಕಾನೂನುಗಳ ಪ್ರಕಾರ ಮರಣ ಶಿಕ್ಷೆಯಂಥ ಘೋರವಾದ ಶಿಕ್ಷೆ ಕೊಟ್ಟರೂ ಸರಿಯೆ,

ಸಂತೋಷವಾಗಿ ಅನುಭವಿಸುವುದಕ್ಕೆ ಸಿದ್ಧನಾಗಿರುವೆ. ಅದೇ ನನ್ನ ದೇಶದ ಜನರಿಗೆ ನಾನು ಮಾಡಬಹುದಾದ ಉತ್ತಮ ಸೇವೆ, ನೀಡಬೇಕೆಂದುಕೊಂಡಿರುವ ಉತ್ತಮ ಸಂದೇಶ ಎಂದು ನಾನು ಭಾವಿಸುತ್ತೇನೆ.

ನನ್ನ ಭಾವನೆಯಲ್ಲಿ ಸತ್ಯವಿದೆ ಎಂದು, ನೀವು ಜಾರಿ ಮಾಡುತ್ತಿರುವ ಈ ಕಾನೂನುಗಳು ದುಷ್ಟವಾಗಿವೆ ಎಂದು, ನಿಜಕ್ಕೂ ನಾನು ಯಾವ ತಪ್ಪು ಮಾಡಿಲ್ಲವೆಂದು ನೀವು ಭಾವಿಸಿದರೆ, ಜಡ್ಜ್ ಅವರು, ಸಹೋದ್ಯೋಗಿಗಳು ತಮ್ಮ ಉದ್ಯೋಗಗಳಿಗೆ ರಾಜೀನಾಮೆ ನೀಡಿ, ದುಷ್ಟತ್ವದಿಂದ ದೂರವಾಗಬೇಕು ಇಲ್ಲವೇ ನೀವಿರುವ ಈ ವ್ಯವಸ್ಥೆ, ಜಾರಿ ಮಾಡುತ್ತಿರುವ ಈ ಕಾನೂನುಗಳು ನ್ಯಾಯಬದ್ಧವಾಗಿಯೇ ಇವೆ ಎಂದು, ಇವು ಈ ದೇಶದ ಜನರಿಗೆ ಒಳ್ಳೆಯದು

ಮಾಡುತ್ತವೆಂದು, ಆದ್ದರಿಂದ, ನನ್ನ ಕ್ರಮಗಳು ಜನಸಾಮಾನ್ಯರಿಗೆ ಹಾನಿಕರವೆಂದು ನೀವು ಭಾವಿಸಿದರೆ, ನನಗೆ ಅತ್ಯಂತ ಕಠಿಣವಾದ ಶಿಕ್ಷೆಯನ್ನು ನೀಡಿ' ಎಂದು ತನ್ನ ಅಹಿಂಸಾವಾದವನ್ನು , ರಾಜೀಯಾಗದ ಧೋರಣೆಯನ್ನು ಗಾಂಧೀಜಿಯವರು ಲೋಕಕ್ಕೆ ಸಾರಿದರು.

ಈ ರೀತಿಯಲ್ಲಿ ಮಹಾತ್ಮ ಗಾಂಧೀಜಿಯವರು ತಮ್ಮ ಮೇಲೆ ಕೋರ್ಟ್ ನಲ್ಲಿ ಜರುಗುತ್ತಿರುವ ವಿಚಾರಣೆಯಲ್ಲಿ, ತಮಗಿರುವ ಅಸಾಧಾರಣವಾದ ವಾಗ್ಧಾಟಿಯನ್ನು ಈ ವಾಂಗ್ಮೂಲದ ಮೂಲಕ ಪ್ರದರ್ಶಿಸಿ, ಅಲ್ಲಿದ್ದವರನ್ನೆಲ್ಲ ಮಂತ್ರಮುಗ್ಧಗೊಳಿಸಿದರು ! ಈ ವಿಧವಾದ ವಾಗ್ಧಾಟಿಯನ್ನು ಜಗತ್ತಿನಲ್ಲಿ ಪ್ರಸಿದ್ಧಿ ಪಡೆದ ವ್ಯಕ್ತಿಗಳು ಯಾರೂ ಅದಕ್ಕೆ ಮೊದಲಾಗಲಿ, ಆ ನಂತರವಾಗಲೀ, ಅದು ತಮ್ಮ ಅಸ್ತಿತ್ವವೇ ಪ್ರಶ್ನಾರ್ಥಕವಾದ ಕ್ಲಿಷ್ಟ ಸಮಯದಲ್ಲಿ ತೋರಿದ ದಾಖಲೆಗಳು ಜಗತ್ತಿನ ಚರಿತ್ರೆಯಲ್ಲೇ ಇಲ್ಲವೆಂದು ಸಂಶೋಧಕರು ಭಾವಿಸುತ್ತಿದ್ದಾರೆ.

ಗಾಂಧೀಜಿಯವರ ಈ ವಾಂಗ್ಮೂಲಕ್ಕೆ ಕರಗಿ ನೀರಾದ ಜಡ್ಜ್, ಮಹಾತ್ಮ ಅವರಿಗೆ ವಂದನಾ ಸೂಚಕವಾಗಿ ತಲೆಯನ್ನು ಬಾಗಿಸಿದಾಗ, ಗಾಂಧೀಜಿಯವರು ಕೂಡಾ ಪ್ರತಿ ನಮಸ್ಕಾರದ ಸೂಚಕವಾಗಿ ತಮ್ಮ ತಲೆಯನ್ನು ಬಾಗಿಸಿದರು. ಇದು ಗಾಂಧೀಜಿಯವರ ಮಹೋನ್ನತ ವ್ಯಕ್ತಿತ್ವವನ್ನು ಸೂಚಿಸುವ ಒಂದು ಒಳ್ಳೆಯ ಘಟನೆ.

ಅಹಿಂಸಾ ಸೂತ್ರದ ಬಗ್ಗೆ ಗಾಂಧೀಜಿಯವರಿಗಿದ್ದ ಬದ್ಧತೆಯನ್ನು ತಿಳಿಸುವ ಈ ಮಹೋದಾತ್ತ ವಾಂಗ್ಮೂಲಕ್ಕೆ ನೂರು ವರ್ಷಗಳು ತುಂಬಿದ ಸಂದರ್ಭದಲ್ಲಿ ಆ ಐತಿಹಾಸಿಕ ಘಟನೆಯನ್ನು

ಈ ತಲೆಮಾರಿನವರಿಗೆ ನೆನಪು ಮಾಡಿಕೊಡುವ ಅಗತ್ಯವಿದೆ ಎಂದು ಭಾವಿಸುತ್ತೇನೆ.

ಮೂಲ ತೆಲುಗು ಲೇಖನ :

**ಡಾ.ಮಂಡಲಿ ಬುದ್ಧ ಪ್ರಸಾದ್**
ಮಾಜಿ ಉಪಸಭಾಪತಿ, ಆಂಧ್ರಪ್ರದೇಶ

■

# ಮಹಾತ್ಮನೂ, ಅರ್ಧ ಆಣೆಯೂ!

**ಅರ್ಧ ಆಣೆಯ ಕಥೆ.**

ಭಾರತದ ಇತಿಹಾಸದಲ್ಲಿ ಮಹಾತ್ಮ ಗಾಂಧೀಜಿಯವಂತೆ ಭಾರತದ ಉದ್ದಗಲಕ್ಕೆ ಸುತ್ತಾಡಿದ ಯಾವ ನಾಯಕನೂ ಇಲ್ಲ. ರಾಮಾಯಣದ ಕಾಲದಲ್ಲಿ ಇಲ್ಲಿ ರಾಮನಿದ್ದ ಎಂಬ ಐತಿಹ್ಯದಂತೆ ಮಹಾತ್ಮರು ಇಂತಹ ಇಸ್ವಿಯಲ್ಲಿ ಇಲ್ಲಿ ಬಂದು ಭಾಷಣ ಮಾಡಿದ್ದರು ಎಂಬ ಇತಿಹಾಸವನ್ನು ಸಾಧಾರಣ ಎಲ್ಲಾ ರಾಜ್ಯಗಳ ಪ್ರತೀ ಜಿಲ್ಲೆಗಳಲ್ಲಿ ಕನಿಷ್ಠ ಒಂದಾದರೂ ಸ್ಥಳವಿದ್ದೇ ಇರುತ್ತದೆ.


ಹಾಗೆಯೇ ಇಡೀ ದೇಶ ಸುತ್ತುತ್ತಿರುವಾಗ ತಮಿಳುನಾಡಿನ ತಿರುಚ್ಚಿಯ ಲಾಲ್ಗುಡಿಯಲ್ಲಿ ಒಬ್ಬ ಸ್ವತಂತ್ರ ಹೋರಾಟದ ಸಹೋದ್ಯೋಗಿಯ ಮನೆಯಲ್ಲಿ ಉಳಿದಿದ್ದ ಸಂದರ್ಭ. ಮಹಾತ್ಮರು ಎಲ್ಲಿಯೇ ಹೋದರೂ ಅವರು ಕೇಳಿಯೂ ಕೇಳದೆಯೋ ನಿಧಿ ಸಂಗ್ರಹವಾಗುತ್ತಿತ್ತು. ಕೆಲವರು ಹಣವನ್ನು ಕೊಟ್ಟರೆ ಇನ್ನು ಕೆಲವರು ಒಡವೆಯನ್ನು ಸ್ವಯಂ ಪ್ರೇರಿತರಾಗಿ ಹಿಂದೆ ಮುಂದೆ ಯೋಚಿಸದೆ ಕೊಡುತ್ತಿದ್ದರು. ಲಾಲ್ಗುಡಿ ಯಲ್ಲಿ ಉಳಿದು ಮುಂದಿನ ಸ್ಥಳಕ್ಕೆ ಹೊರಡುವಾಗ ಆ ಮನೆಯ ಬಾಗಿಲಿಗೆ ಬಂದೊಡನೆ ಒಬ್ಬ ಬಡ ಹೆಂಗಸು ತನ್ನ ಸೀರೆಯ ಅಂಚಿಂದ ಅರ್ಧ ಆಣೆ ಯನ್ನ ಮಹಾತ್ಮರ ಕೈಗಿಟ್ಟಳು. ಗಾಂಧಿ ಒಮ್ಮೆ ಅವಳ ಕಡೆ ನೋಡಿದಾಗ ಆಕೆಯ ಮೈ ಮೇಲಿನ ಸೀರಿ ಹರಿದಿತ್ತು. ಕೈಯಲ್ಲಿನ ಮಗು ಹಾಲಿನ ಕೊರತೆಯಿಂದ ಬಳಲಿತ್ತು. ಆ ಅರ್ಧ ಆಣೆ ಮನೆಗೆಲಸ ಮಾಡಿ ಆ ಮಗುವಿನ ಹಾಲಿಗಾಗಿ ಸಂಪಾದಿಸಿದ್ದಾಗಿತ್ತು. ಇದನ್ನು ತಿಳಿದ ಆ ನಿಷ್ಠೋರಿ ಮುದುಕನ ಕಣ್ಣಂಚಲ್ಲಿ ಕೂಡ ತನಗೆ ಅರಿಯದೆ ನೀರು ಸಂಗ್ರಹಗೊಂಡಿತ್ತು.

ಅಲ್ಲಿಂದ ಹೊರಟು ತಿರುಚ್ಚಿ ಯಲ್ಲಿನ ಮೈದಾನವೊಂದರಲ್ಲಿ ಭಾಷಣದಲ್ಲಿ ಇದನ್ನು ಹೀಗೆಂದು ಉಲ್ಲೇಖಿಸಿದರು. ' ನಾನು ಸಂಗ್ರಹಿಸಿದ ಎಲ್ಲ ನಿಧಿಯನ್ನು ಸಬರಮತಿಗೆ ಕಳುಹಿಸುತ್ತೇನೆ. ಆದರೆ ಈ ಅರ್ಧ ನಿಮ್ಮಗಳ ಅನುಮತಿಯನ್ನು ಪಡೆದು ಆಣೆಯನ್ನು ಮಾತ್ರ ತಾನೇ ಇಟ್ಟುಕೊಳ್ಳುತ್ತೇನೆ ' ಎಂದರು. ಅಲ್ಲಿನ ಪಾಮರ ಜನ ಈ ಮಹಾ ಮನುಷ್ಯ ನಮ್ಮಗಳ ಅನುಮತಿ ಕೇಳುತ್ತಿರುವರಲ್ಲ ಎಂದು ಕಕ್ಕಾಬಿಕ್ಕಿ ಆದರು! ಮಹಾತ್ಮರು ಮುಂದುವರಿದು ' ಇದನ್ನು ನೋಡುವಾಗಲೆಲ್ಲ ತನ್ನ ಮಗುವಿಗೆ ಹಾಲು ತೆಗೆದುಕೊಡಲು ಸಹ ಆಗದ ಬಡ ಹೆಂಗಸೊಬ್ಬಳು ನನ್ನ ಸಂಪೂರ್ಣವಾಗಿ ನಂಬಿರುವಳು. ಯಾವುದೇ ಕಾರಣಕ್ಕೂ ಈ ದೇಶದ ಜನಕ್ಕೆ ನಾನು ಮೋಸ ಅನ್ಯಾಯ ಮಾಡುವ ಆಲೋಚನೆ ಸಹ ಬರಬಾರದು ' ಎಂದರು.

(ಸಂಗ್ರಹ : ನಿಖಿಲ್ ನಾಗರಾಜ್)

# ಜಗತ್ತನ್ನೇ ಯಾಮಾರಿಸಿದ ಮುದುಕ

– ವಿಜಯ್ ಹನಕೆರೆ



ಇವನು ಯಾರೋ ಹತ್ತು ಜನರನ್ನು
ಯಾಮಾರಿಸಿದ ಮುದುಕನಲ್ಲ
ಇವನಿಗೆ ಯಾಮಾರಿದ ಹತ್ತೂ ಜನರೂ
ದೊಡ್ಡ ಡಾನ್ ಗಳೇ

ಐನಸ್ಟೈನಾ ಗೊತ್ತಲ್ಲವೇ ನಿಮಗೆ,
ಅವನೇ ಎಚ್ಚರಿಸಿದ್ದ ನಂಬಬೇಡಿ ಇವನನ್ನು
ಮೂಳೆ ಮಾಂಸಗಳಿಂದ ತುಂಬಿದ ಇಂತವಾ ಇರಲಾರನೆಂದು

ಚಾರ್ಲಿಯು ಗೊತ್ತಲ್ಲವೇ ನಿಮಗೆ,
ಜಗತ್ತಿನ ಮಹಾ ತುಂಟ,
ಅವನಿಗೇ ಇವನು ಕಥೆ ಕೊಟ್ಟ, ಮಾಡ್ರನ್ ಟೈಮ್ಸ್ ಎಂದು
ಹೆಸರಿಟ್ಟ.

ಟಾಲ್ಸ್ ಸ್ಟಾಯ್ ನೆಪವೊಡ್ಡಿ ಆಶ್ರಮ ಕಟ್ಟಿದ,
ಗೋಖಲೆಯ ನೆಪವೊಡ್ಡಿ ದೇಶವನು ಸುತ್ತಿದ.
ವಿಶ್ವಕವಿಯೇ ಇವನನ್ನು ಮಹಾತ್ಮನೆಂದ ನೇತಾಜಿಯೇ ಅದಕೆ
ತಲೆಯಾಡಿಸಿದ.

ಕ್ರಿಸ್ತನ ಮಕ್ಕಳು ಎಲ್ಲವರು ಬಲ್ಲವರು
ಇವನ ಸಹವಾಸವೇ ಬೇಡೆಂದು ದಬ್ಬಿದರು ರೈಲಿಂದ.
ಮತ್ತೆ ಮೈಕೊಡವಿ ಎದ್ದ, ಬಿದ್ದವನು ಮೋಹನ ಎದ್ದವನು ಮಹಾತ್ಮ.

ಆಗಲೇ ಹೇಳಿದೆನಲ್ಲ ನಿಮಗೆ
ಇವನು ಯಾರೋ ಹತ್ತು ಜನರನ್ನು
ಯಾಮಾರಿಸಿದ ಮುದುಕನಲ್ಲ ಎಂದು


ಮುದುಕನ ಕಥೆ ಬಿಡಿ ಹುಡುಗನಾಗಿದ್ದಾಗಲೇ
ಹೆತ್ತವನನ್ನೇ ಯಾಮಾರಿಸಿದ್ದ. ಕಾಸು ಕದ್ದ ಬೀಡಿ ಸೇದಿ,
ಪತ್ರ ಬರೆದು ಕಣ್ಣೀರ ಗಿಟ್ಟಿಸಿ ಅಪ್ಪನನು ಯಾಮಾರಿಸಿದ.

ಯಾರದೋ ಜೀವನದಿ ನುಗ್ಗಿಬಿಡುವ
ಇನ್ಯಾರದೋ ಕಥೆಯಲ್ಲಿ ಮುಳುಗಿಬಿಡುವ
ಕಥೆ ಕವಿತೆ ಕಾದಂಬರಿ ಪುರಾಣ ಎಲ್ಲೆಂದರಲ್ಲಿ ಬಂದುಬಿಡುವ.

ನಮ್ಮ ಕನ್ನಡ ತೇಜಸ್ವಿ ಗೊತ್ತಿಲ್ಲವೇ ನಿಮಗೆ,
ಅವನೂ ಇವನ ನಂಬಿದವನಂತೆ
ಗಾಂಧೀಜಿ ದೆಸೆಯಿಂದ ಕಥೆ ಬರೆದು
ಏಟು ತಿಂದಾ.

ಮಗನೇನೋ ಚಿಕ್ಕಹುಡುಗ ಬಿಡಿ,
ಕನ್ನಡದ ಅಪ್ಪ ಪುಟ್ಟಪ್ಪನಾ ಮಸಣದ ಕಾವ್ಯದಲೂ ನುಗ್ಗಿ
ಹರಿಹರರನೇ ಯಾಮಾರಿಸಿ ಕಾವ್ಯವನೇ ಕೆಡಿಸುವವನಿದ್ದ.

ಹರಿರಾಮನನು ಯಾಮಾರಿಸುವುದು ಸುಲಭ
ನರನಾಥುರಾಮನ ಯಾಮಾರಿಸುದು? ಅವನೊಬ್ಬನೇ
ಇವನಿಗೆ ಯಾಮಾರದೇ ಹೋದ,
ಗುಂಡು ಹೊಡೆಯುವ ಮೊದಲು ಕೈಯಷ್ಟೇ ಮುಗಿದ.



# ಮಹಾತ್ಮರ ಹಾದಿ

" ಮನುಷ್ಯ ಇತರರ ಒಳ್ಳೆಯದಕ್ಕಾಗಿ ಎಷ್ಟು ದುಡಿಯುತ್ತಾನೋ ಅಷ್ಟು ದೊಡ್ಡವನಾಗುತ್ತಾನೆ........ "

– ಮಹಾತ್ಮ ಗಾಂಧಿ

– ವಿವೇಕಾನಂದ. ಎಚ್ ಕೆ.

**ಸಾ**ಮಾನ್ಯವಾಗಿ ಭಾರತೀಯ ಸಮಾಜದ ಕೌಟುಂಬಿಕ ವ್ಯವಸ್ಥೆಯಲ್ಲಿ ಬಹುತೇಕ ವ್ಯಕ್ತಿಗಳು ದುಡಿಯುವುದು, ಬದುಕುವುದು, ಮಡಿಯುವುದು ತನ್ನ ತಂದೆ ತಾಯಿ ಗಂಡ ಹೆಂಡತಿ ಮಕ್ಕಳಿಗಾಗಿ. ಕೆಲವರಂತು ತನ್ನ ಮುಂದಿನ ಹಲವು ಪೀಳಿಗೆಗೆ ಆಗುವಷ್ಟು ಹಣ ಮಾಡಲು ಪ್ರಯತ್ನಿಸುತ್ತಾರೆ.......

ಆದರೆ ದುರಂತವೆಂದರೆ, ಸಾಮಾನ್ಯವಾಗಿ ತನ್ನವರಿಗಾಗಿ ಅಷ್ಟು ದೊಡ್ಡ ಹಣ ಮಾಡಿದ್ದರೂ ಅವರ ಬಗ್ಗೆ ಹತ್ತಿದವರಿಗೆ ಇನ್ನೂ ಮಾಡಬೇಕಿತ್ತು ಎಂಬ ಅಸಮಾಧಾನ ಅತೃಪ್ತಿ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಅವರ ಆಸ್ತಿ ಸಂಪಾದನೆಯ ಸಾಧನೆಯ ಬಗ್ಗೆ ಹೆಮ್ಮೆ ಇದ್ದರೂ ಒಂದೆರಡು ಪೀಳಿಗೆಯ ನಂತರ ಅವರ ಹೆಸರನ್ನೇ ಮರೆಯಲಾಗುತ್ತದೆ.

ಆದರೆ ಗೌತಮ ಬುದ್ಧ, ಮಹಾವೀರ, ಬಸವಣ್ಣ, ವಿವೇಕಾನಂದ, ಮಹಾತ್ಮ ಗಾಂಧಿ, ಬಾಬಾ ಸಾಹೇಬ್ ಅಂಬೇಡ್ಕರ್ ಮುಂತಾದ ಅನೇಕ ಮಹತ್ವದ ವ್ಯಕ್ತಿಗಳು ತನ್ನ ಮನೆಯವರಿಗಾಗಿ ಹೆಚ್ಚಾಗಿ ಏನನ್ನೂ ಮಾಡಲಿಲ್ಲ. ಆದರೆ ನಾವುಗಳು ಮತ್ತು ಇಡೀ ದೇಶ ಈಗಲೂ ಅವರನ್ನು ನೆನಪಿಸಿಕೊಳ್ಳುತ್ತದೆ ಮತ್ತು ಅವರ ಹುಟ್ಟು ಹಬ್ಬವನ್ನು ಅತ್ಯಂತ ಅಭಿಮಾನದಿಂದ ಆಚರಿಸಲಾಗುತ್ತದೆ..........

ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿಯವರ ಅನುಭವದ ಹೇಳಿಕೆಯನ್ನು ಗಮನಿಸಬೇಕು ಮತ್ತು ಅರ್ಥೈಸಬೇಕು....

" ಪರೋಪಕಾರಂ ಇದಂ ಶರೀರಂ " ಬದುಕಿನ ಸಾರ್ಥಕತೆ ಅಡಗಿರುವುದೇ ಇತರರ ಸೇವೆಯಲ್ಲಿ. ಕನಿಷ್ಠ ನಮಗಾಗಿ ಮತ್ತು ನಮ್ಮವರಿಗಾಗಿ ಜೊತೆಯಲ್ಲಿ ಇತರರಿಗಾಗಿ ಎಂಬುದು ಹೆಚ್ಚು ಅರ್ಥಪೂರ್ಣ ಎನಿಸುತ್ತದೆ.

ಹಿರಿಯರೊಬ್ಬರು ಹೇಳುತ್ತಿದ್ದರು

" ಹಿಂದೆ ನನ್ನದೆಲ್ಲವೂ ನಿನ್ನದೇ " ಎನ್ನುತ್ತಿದ್ದರು. ನಂತರದಲ್ಲಿ

" ನನ್ನದು ನನ್ನದೇ ನಿನ್ನದು ನಿನ್ನದೇ " ಎಂಬಂತಾಯಿತು. ಆದರೆ ಈಗಿನ ಆಧುನಿಕ ಕಾಲದಲ್ಲಿ " ನನ್ನದು ಮತ್ತು ನಿನ್ನದು ಎರಡೂ ನನ್ನದೇ " ಎಂಬ ಮನೋಭಾವ ಸಾಕಷ್ಟು ಜನರಲ್ಲಿ ಬೆಳೆಯುತ್ತಿದೆ.

ದೊಡ್ಡವರಾಗುವುದು ಅಥವಾ ಯಶಸ್ವಿಯಾಗುವುದು ಎಂದರೆ ತನ್ನ ವೈಯಕ್ತಿಕ ಹಣ ಅಂತಸ್ತು ಅಧಿಕಾರ ಜಮೀನುಗಳ ಹೆಚ್ಚಾಗುವಿಕೆ ಮತ್ತು ಅದರ ಪ್ರದರ್ಶನ. ಅದನ್ನು ಗಳಿಸಲು ಯಾವುದೇ ಮಾರ್ಗಗಳನ್ನು ಉಪಯೋಗಿಸಲು ಹಿಂಜರಿಯುವುದಿಲ್ಲ.

ನಾಮಕರಣ, ಗೃಹ ಪ್ರವೇಶ, ಮದುವೆ, ಮುಂಜಿ, ನಿಶ್ಚಿತಾರ್ಥ, ತಿಥಿ, ಹುಟ್ಟಿದ ಹಬ್ಬ ಹೀಗೆ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ತಮ್ಮ ಶ್ರೀಮಂತಿಕೆಯ ಪ್ರದರ್ಶನ ಮತ್ತು ಆ ಸಂಭ್ರಮಕ್ಕಾಗಿ ಉಪಯೋಗಿಸುವ ಶ್ರಮ ಮತ್ತು ಹಣವನ್ನು ಯಾವುದೇ ಸಾಮಾಜಿಕ ಕಾರ್ಯಗಳ ವಿಷಯದಲ್ಲಿ ತೋರುವುದಿಲ್ಲ. ಜನರು ಸಹ ಈ ರೀತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಷ್ಟು ಯಾವುದೇ ಸಮಾಜ ಮುಖಿ ಜನಸೇವೆಗಳಲ್ಲಿ ಸೇರುವುದಿಲ್ಲ.

ತನಗೆ ವೈಯಕ್ತಿಕವಾಗಿ ಯಾವುದೋ ತೊಂದರೆಯಾದಾಗ " ಅಯ್ಯೋ ಯಾರು ನ್ಯಾಯ ಕೇಳುವವರೇ ಇಲ್ಲ. ಅನ್ಯಾಯದ ವಿರುದ್ಧ ಮಾತನಾಡುವವರಿಲ್ಲ. ಸಮಾಜ ಸತ್ತು ಹೋಗಿದೆ " ಎಂದು ಆಕ್ರೋಶದಿಂದ ಮಾತನಾಡುವ ಇದೇ ಜನ ಇತರರು ಸಂಕಷ್ಟದಲ್ಲಿ ಇರುವಾಗ ಧ್ವನಿ ಎತ್ತುವುದಿಲ್ಲ. ಮೌನವಾಗಿ ತಮಗೆ ಸಂಬಂಧವಿಲ್ಲದವರಂತೆ ಸುಮ್ಮನಿರುತ್ತಾರೆ.

ಮಹಾತ್ಮ ಗಾಂಧಿಯವರ ಮಾತಿನ ಅರ್ಥ ಇದೇ ಎನಿಸುತ್ತದೆ. ನೀವು ಹೇಗೆ ಕುಟುಂಬದ ಒಂದು ಭಾಗವೋ ಹಾಗೆಯೇ ಈ ಸಮಾಜದ, ಈ ಪ್ರಕೃತಿಯ ಒಂದು ಭಾಗ. ಅದರ ಹಿತಾಸಕ್ತಿಗೆ ಧಕ್ಕೆಯಾದಾಗ ಪ್ರತಿಭಟಿಸುವುದು ನಮ್ಮ ನಿಮ್ಮ ಕರ್ತವ್ಯ. ಅದನ್ನು ನಿರ್ವಹಿಸಿದಾಗ ಮನುಷ್ಯ ದೊಡ್ಡವನಾಗುತ್ತಾನೆ.

ಇಂದಿನ ವೇಗದ ಮತ್ತು ಸ್ಪರ್ಧಾ ಜಗತ್ತಿನಲ್ಲಿ ನಾವುಗಳು ಕಳೆದುಹೋಗಿ ಇಡೀ ವ್ಯವಸ್ಥೆ ಕುಸಿದು ಬಿದ್ದು ವಿನಾಶದ ಅಂಚಿನಲ್ಲಿರುವಾಗಲೂ ನಮ್ಮ ಪ್ರತಿಕ್ರಿಯೆ ಶೂನ್ಯ. ಅಷ್ಟು ಸ್ವಾರ್ಥಮಯ ಸಮಾಜ ಎಲ್ಲಾ ದೃಷ್ಟಿಯಿಂದ ಅಭಿವೃದ್ಧಿ ಹೊಂದುವುದು ತುಂಬಾ ಕಷ್ಟ.

ಆದ್ದರಿಂದ ದಯವಿಟ್ಟು ಮಹಾತ್ಮ ಗಾಂಧಿಯವರ ಆಶಯದಂತೆ ಪ್ರತಿಯೊಬ್ಬರ ಮನೆಯಲ್ಲಿ ಮನಸ್ಸಿನಲ್ಲಿ ಊರಿನಲ್ಲಿ ಒಬ್ಬೊಬ್ಬ ಬಾಬಾ ಸಾಹೇಬ್ ಬುದ್ದ ಮಹಾವೀರ ವಿವೇಕಾನಂದ ಬಸವಣ್ಣ ಅಕ್ಕಮಹಾದೇವಿ ಮುಂತಾದ ಮಹಾಮಹಿಮರ ಚಿಂತನೆಗಳು ಸದಾ ಜೀವಂತ ಇರುವಂತೆ ನಮ್ಮ ನಡವಳಿಕೆಗಳನ್ನು ರೂಪಿಸಿಕೊಳ್ಳಬೇಕಿದೆ.

ಆಗ ಮಾತ್ರ ಭಾರತೀಯ ಸಮಾಜ ತನ್ನ ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯ. ಇಲ್ಲದಿದ್ದರೆ ಎಲ್ಲರೂ ತನ್ನ ಕುಟುಂಬವೇ ತನ್ನ ಸರ್ವಸ್ವ, ಬದುಕಿನ ಸಾರ್ಥಕತೆ ಅಡಗಿರುವುದು ತನ್ನ ಕುಟುಂಬದ ಏಳಿಗೆಯಲ್ಲಿ ಮಾತ್ರ ಎಂಬ ಸ್ವಾರ್ಥಕ್ಕೆ ತಲುಪಿದರೆ ಇಡೀ ಸಮಾಜ ನಿಧಾನವಾಗಿ ಭೀಕರ ಅನಾಹುತಕ್ಕೆ ಒಳಗಾಗುತ್ತದೆ.

ದಯವಿಟ್ಟು ನಿಮ್ಮ ನಮ್ಮ ಕುಟುಂಬದ ಜೊತೆ ಸಮಾಜದ ಬಗ್ಗೆಯೂ ಸ್ವಲ್ಪ ಯೋಚಿಸಿ ಮತ್ತು ಆಗಾಗ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಹಾಗೂ ಸಮಾಜಕ್ಕಾಗಿ ನಿಮ್ಮ ಬಳಿ ಹೆಚ್ಚುವರಿಯಾಗಿರುವ ಸಂಪನ್ಮೂಲಗಳನ್ನು ಸ್ವಲ್ಪ ಮಟ್ಟಿಗೆ ದಾನ ಮಾಡಿ.....

■

ಗಾಂಧೀವಾದ ಅಥವಾ ತತ್ವ ಎಂಬುದಿಲ್ಲ. ನಾನು ಯಾವ ಹೊಸ ಸಿದ್ಧಾಂತವನ್ನು ಕಂಡುಹಿಡಿದಿಲ್ಲ. ನಾನು ಶಾಶ್ವತವಾದ ಸತ್ಯವನ್ನು ನಮ್ಮ ದೈನಂದಿನ ಜೀವನದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅನುಸರಿಸುತ್ತಿರುವೆ ಅಷ್ಟೇ. ನಾನು ತಾಳಿದ ಅಭಿಪ್ರಾಯಗಳು ಹಾಗೂ ನಿರ್ಣಯಗಳು ಕೊನೆಯವೂ ಹಾಗೂ ಶಾಶ್ವತವಾದವೂ ಅಲ್ಲ, ಅವು ನಾಳೆ ಬದಲಾಗಬಹುದು. ನಾನು ಜಗತ್ತಿಗೆ ಕಲಿಸುವುದೇನಿಲ್ಲ. ಸತ್ಯ, ಅಹಿಂಸೆಗಳು ಗುಡ್ಡ ಬೆಟ್ಟಗಳಷ್ಟೇ ಹಳೆಯವು . ಇವುಗಳ ವಿಚಾರದಲ್ಲಿ ನಾನು ಕೆಲವು ಪ್ರಯೋಗಗಳನ್ನು ಮಾಡಿರುವೆನು. ಇವುಗಳನ್ನು ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ವ್ಯಾಪಕವಾಗಿ ಪ್ರಯೋಗಿಸಲು ಪ್ರಯತ್ನಿಸಿದ್ದೇನೆ. ನಾನು ಕೆಲವು ಸಾರಿ ತಪ್ಪಿದ್ದೇನೆ, ನಾನು ತಪ್ಪಿನಿಂದ ಕಲಿತಿದ್ದೇನೆ. ಇದನ್ನು ಗಾಂಧೀವಾದ ಎಂದು ಕರೆಯಬೇಡಿ".

– ಮಹಾತ್ಮ ಗಾಂಧೀಜಿ




# ಗಾಂಧಿ ಆಂತರ್ಯ

## ಪುಸ್ತಕ ಪರಿಚಯ

ಪ್ರಖರ ಗಾಂಧಿವಾದಿಗಳೂ,ಚಿಂತನಶೀಲ ಬರಹಗಾರರೂ ಆಗಿದ್ದ ದಿವಂಗತ ಜಿ. ವಿ. ನಾರಾಯಣ ಮೂರ್ತಿ ಅವರ ಪುತ್ರ ಪ್ರೊ. ನಾ. ದಯಾನಂದ ತಮ್ಮ ಸಾಹಿತ್ಯ ಕೃಷಿಯಿಂದ ನಾಡಿಗೇ ಪರಿಚಿತರು. ಶ್ರೀಯುತರ ಐವತ್ತನೇ ಕೃತಿ 'ಗಾಂಧೀ ಆಂತರ್ಯ' , ಅಪರೂಪ ವ್ಯಕ್ತಿತ್ವದ ನೀಳ್ಗತೆ.

ಪ್ರೊ. ನಾ. ದಯಾನಂದ ಅವರು ಭಾರತೀಯ ಆಂಗ್ಲ ಸಾಹಿತಿ ಮತ್ತು ತತ್ವ ಶಾಸ್ತ್ರ ಪ್ರಾಧ್ಯಾಪಕ ಎಂ. ಎಸ್. ರಾಜಾರಾಯರ ಕೃತಿ ' ದಿ ಗ್ರೇಟ್ ಇಂಡಿಯನ್ ವೇ ' ಅನ್ನುವ ಗಾಂಧೀ ಕಥನವನ್ನ ಕನ್ನಡದಲ್ಲಿ ನಮಗೆ ನೀಡಿದ್ದಾರೆ. ಇದು ನೇರಾ ನೇರ ಅನುವಾದವಲ್ಲ. ಆದರೆ ಅನುವಾದವೂ ಸೃಜನ ಶೀಲ ಆಗಬಲ್ಲದು ಅನ್ನುವುದನ್ನ ಪ್ರೊ. ದಯಾನಂದ ಇಲ್ಲಿ ತೋರಿಸಿ ಕೊಟ್ಟಿದ್ದಾರೆ.

ಒಂದು ಪುಸ್ತಕದ ಶ್ರೇಷ್ಠತೆ ಅದು ಪ್ರಭಾವಿಸುವ ಗುಣದಲ್ಲಿದೆ – ಅನ್ನುತ್ತಾರೆ. ಗಾಂಧೀಜಿ ಅವರ ಆತ್ಮಕಥೆ " ನನ್ನ ಸತ್ಯಾನ್ವೇಷಣೆ " ಜಗತ್ತಿನ ಗಮನ ಸೆಳೆದದ್ದು ಈ ಒಂದು ಗುಣವಿಶೇಷದಿಂದ. ಗಾಂಧೀಜಿ ಅವರ ನಂತರ ಬಂದ ಎಲ್ಲಾ ಗಾಂಧೀ ಸಾಹಿತ್ಯ ಈ ಗುಂಪಿಗೆ ಸೇರಿದ್ದು.

ಇದಕ್ಕೊಂದು ಹೊಸ ಸೇರ್ಪಡೆ ನಾ ದಯಾನಂದ ಅವರ 'ಗಾಂಧೀ ಆಂತರ್ಯ ' . ಈ ಪುಸ್ತಕದ ಪ್ರಕಾಶಕರು ಶೃಂಗಾರ ಪ್ರಕಾಶನದ ಪ್ರೊ. ಎಂ ವಿ ನಾಗರಾಜ ರಾವ್ ಅವರು ಹೇಳುವಂತೆ 'ಒಬ್ಬ ಲೇಖಕನ ಪ್ರಬುದ್ಧತೆ ಅವನ ಲೇಖನಿ ಹದಗೊಂಡು ರೂಪಿಸುವ ಕೃತಿಯಲ್ಲಿ ಕಾಣಿಸಿಕೊಳ್ಳುತ್ತದೆ ' .

ವಿದ್ವಾನ್ ಕೆ ಆರ್ ವೆಂಕಟಾಚಾರ್ ತಮ್ಮ ಸುದೀರ್ಘ ಮುನ್ನುಡಿಯಲ್ಲಿ 'ಗಾಂಧೀ ಆಂತರ್ಯ' ರಾಜಾರಾಯರ ಒಳನೋಟದ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ಭಾರತೀಯ ಅಂತಃಸ್ಸತ್ವದ ಪರಿಚಯವನ್ನು ಗಾಂಧೀಜಿ ತಮ್ಮ ನಡೆ ನುಡಿಗಳ ಮೂಲಕ ಜಗತ್ತಿಗೆ ಪರಿಚಯಿಸಿದರು ಅನ್ನುತ್ತಾರೆ. ಗಾಂಧೀಜಿಯನ್ನು ಸ್ವಾತಂತ್ರ ಹೋರಾಟಗಾರನಾಗಿ, ಸಮಾಜ ಸುಧಾರಕನಾಗಿ ಮಾತ್ರವೇ ಓದಿದ್ದವರಿಗೆ ಇವೆಲ್ಲ ಇದ್ದೂ, ಗಾಂಧೀಜಿಯವರಿಗೆ ಮೂರನೇ ಆಯಾಮವೊಂದಿತ್ತು ಅನ್ನುವುದನ್ನ ಲೇಖಕರು ಗಾಂಧೀ ಆಂತರ್ಯದಲ್ಲಿ ತಿಳಿಸಿದ್ದಾರೆ.

ರಾಮಾಯಣ,ಮಹಾಭಾರತ ಅಲ್ಲದೆ ಗ್ರೀಕರ ಇಲಿಯಡ್ ಮತ್ತು ಒಡಿಸ್ಸಿ ಜೀವನದ ಅರ್ಥ ಮತ್ತು ಉದ್ದೇಶಗಳನ್ನು, ಬದುಕಿಗೆ ಬೇಕಾದ ಸಿದ್ಧ ಮಾದರಿಗಳನ್ನು, ಮಾರ್ಗದರ್ಶಿ ಸೂತ್ರಗಳನ್ನು ವಿಶ್ವಕ್ಕೆ ನೀಡಿವೆ ಎಂದು ಭಾವಿಸುತ್ತಾರೆ. ಸತ್ಯದ ಕಾಳಜಿ ಇರುವವರು, ನ್ಯಾಯಕ್ಕೋ , ಧರ್ಮಕ್ಕೋ ಅದರ ಪರವಾಗಿಯೇ ನಿಂತು ಪ್ರತಿಭಟಿಸುವರಾಗಿರುತ್ತಾರೆ ಎಂದಿದ್ದಾರೆ.

ಯುವ ಪೀಳಿಗೆ ಗಾಂಧೀ ಬಗ್ಗೆ ಆಸಕ್ತಿ ಕಳೆದು ಕೊಂಡಿರುವುದು ಮಾತ್ರವಲ್ಲದೆ ಅವರನ್ನು ಅಪಾರ್ಥ ಮಾಡಿಕೊಂಡು ಅಪಪ್ರಚಾರಕ್ಕೆ ಇಳಿದಿವೆ. ಒಟ್ಟಿನಲ್ಲಿ ಗಾಂಧೀಜಿಗೆ ವಾರಸುದಾರರೇ ಇಲ್ಲದಂತಾಗಿದೆ. ಹಾಗಾಗಿ ದಯಾನಂದರ ಕೃತಿ ಈ ದಿನಗಳ ಅಗತ್ಯವಾಗಿದೆ .

ಯಾವುದೇ ಗುರುತಿಸುವಿಕೆಯ ಬಿಂದು ಇಲ್ಲದೆ ಒಂದು ವಸ್ತು ಅಥವಾ ವಿಚಾರವನ್ನು ಭಾರತೀಯರ ಬುದ್ಧಿ ಮತ್ತು ಭಾವ ಗ್ರಹಿಸುವುದು ಕಷ್ಟ ಎನ್ನುವುದುಂಟು.

ರಾಮ ಈ ನದಿ ನೀರಿನಲ್ಲಿ ಈಜಾಡಿದ, ಅಲ್ಲಿ ಬಾಣ ಬಿಟ್ಟು ನೀರು ಚಿಮ್ಮಿಸಿದ, ಸೀತೆ ಈ ಬಂಡೆಯ ಮೇಲೆ ತನ್ನ ಬಟ್ಟೆ ಹರವಿಹಾಕಿದ್ದಳು , ಪಾಂಡವರು ವನವಾಸದಲ್ಲಿದ್ದಾಗ ಇಲ್ಲಿಗೆ ಬಂದಿದ್ದರು, ಗಾಂಧೀಜಿ ಈ ಗುಡಿಸಲಲ್ಲಿ ವಿಶ್ರಮಿಸಿದ್ದರು. ಇತ್ಯಾದಿ

' ಗಾಂಧೀ ಆಂತರ್ಯ ' – ಈ ಪರಂಪರೆಯ

ಹಿನ್ನೆಲೆಯಲ್ಲಿ ಹರಿದು ಬಂದಿದೆ. ಆಯಾ ಕಾಲದ ಅವಶ್ಯಕತೆಗೆ ಅನುಗುಣವಾಗಿ ಯಾರೋ ಒಬ್ಬ ಮಹಾಪುರುಷನ ಆಗಮನ ಆಗುತ್ತದೆ ಎನ್ನುವುದು ನಮ್ಮ ನಂಬಿಕೆ.

ಶ್ರೀ ರಾಮ, ಶ್ರೀ ಕೃಷ್ಣ, ಮಹಾವೀರ, ಬುದ್ಧ, ಕ್ರಿಸ್ತ, – ಈ ಪರಂಪರೆಯ ಮುಂದುವರೆದ ಕಾಲಘಟ್ಟದಲ್ಲಿ ಒಂದು ಉದ್ದೇಶ ಸಾಧನೆಗಾಗಿ ಬಂದವರು ಗಾಂಧೀಜಿ ಅನ್ನುವುದು ಇಲ್ಲಿನ ವಿಶೇಷ.

Gandhi was not an accident of birth, it was a legacy continued by a Divine plan ಅನ್ನುವ ಚಿಂತನೆ.

Van Dyan Southworth ಅನ್ನುವ ಅಮೆರಿಕನ್ ಇತಿಹಾಸಕಾರ ಹೀಗೆ ಹೇಳುತ್ತಾನೆ.

" Nothing new ever happens under the Sun. Situations faced by some one, somewhere ,at some point of time are also faced by others at other points of time."

ಇದು History repeats itself ಅನ್ನುವುದಕ್ಕೆ ಒಂದು ಉದಾಹರಣೆ.

ಇನ್ನೊಂದು ಗಮನಿಸಬೇಕಾದ ಸಂಗತಿ ಅಂದರೆ ಇವರೆಲ್ಲ ಕಾಲ, ದೇಶ,ಧರ್ಮವನ್ನು ಮೀರಿ ನಿಂತವರು. ಇಡೀ ಮನುಕುಲದ ಒಳಿತಿಗಾಗಿ ಬಂದವರು.

ಸತ್ಯ ಮತ್ತು ಅಸತ್ಯ, ಹಿಂಸೆ ಮತ್ತು ಅಹಿಂಸೆ,ಧರ್ಮ ಮತ್ತು ಅಧರ್ಮ, ಭೌತಿಕ ಬಲ ಮತ್ತು ನೈತಿಕ ಬಲ – ಇವುಗಳ ನಡುವಿನ ಸಂಘರ್ಷ ಅನಾದಿಕಾಲ ದಿಂದಲೂ ನಡೆದು ಬಂದಿದೆ.ನಾವು ಯಾವುದರ ಪರವಾಗಿ ನಿಲ್ಲುತ್ತೇವೆ ಅನ್ನುವುದು ಮುಖ್ಯವಾಗುತ್ತದೆ.

ಈ ಪುಸ್ತಕವನ್ನು ಪರಿಚಯಿಸುವುದಕ್ಕೆ ಮೊದಲು ಇಲ್ಲಿರುವ ಕೆಲವು ಹೊಳವುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆಫ್ರಿಕಾದ ನೆಟಾಲ್ – ಟ್ರಾನ್ಸ್ವಾಲ್ ಮಹಿಳಾ ಕೂಲಿಗಾರರ ಪಾದಯಾತ್ರೆ ಶ್ರೀರಾಮ ಪಯಣದಂತೆ , ಊರಿನ ಮಾರಿ ಜಾತ್ರೆಯಂತೆ ಲೇಖಕರಿಗೆ ಕಾಣಿಸುತ್ತದೆ.ಯಾದವೀ ಕಲಹದಿಂದ ಬೆಂದು ನೊಂದ ಶ್ರೀ ಕೃಷ್ಣನ ಪಾದಕ್ಕೆ ಹೊಡೆದ ಬಾಣ , ಗಾಂಧೀ ಎದೆಗೆ ಬಿದ್ದ ಗುಂಡು ಇದರಲ್ಲಿ ಸಾಮ್ಯತೆಯನ್ನು ರಾಜಾರಾವ್ ಗುರುತಿಸುತ್ತಾರೆ!

ಶರಶಯ್ಯೆಯ ಮೇಲೆ ಮಲಗಿರುವ ಭೀಷ್ಮ, ಸತ್ಯ ಅಹಿಂಸೆ ಬಾಣಗಳ ಮೇಲೆ ಮಲಗಿದಂತೆ ಗಾಂಧೀಯಂತೆ ಭಾಸವಾಗುತ್ತದೆ

ಜಿನ್ನಾ ಅವರೊಂದಿಗಿನ ಮಾತುಕತೆ ಶ್ರೀ ಕೃಷ್ಣ ಸಂಧಾನದ ನೆನಪು ತರುತ್ತದೆ ಮಹಾಭಾರತ ಯುದ್ಧದಲ್ಲಿ ಗೆದ್ದು ರಾಜ್ಯವಾಳಿದ ಧರ್ಮರಾಜನಿಗೆ ಕಳೆದುಕೊಂಡ ಬಂಧುಗಳ ವ್ಯಥೆಯಾದರೆ, ಸ್ವಾತಂತ್ರ್ಯ ಗಳಿಸಿಯೂ, ದೇಶ ಇಬ್ಭಾಗವಾದ ರಕ್ತಪಾತದ ವ್ಯಥೆ ಗಾಂಧಿಯನ್ನು ದುಃಖಿಯನ್ನಾಗಿಸುತ್ತದೆ.

ಮಾರಿಟ್ಸ್ ಬರ್ಗ್ ನಲ್ಲಿ ರೈಲಿನಿಂದ ಹೊರಬಿದ್ದ ಗಾಂಧೀಯಲ್ಲಿ ಧರ್ಮರಾಯ, ಹರಿಶ್ಚಂದ್ರ, ಭೀಷ್ಮರ ಸತ್ಯ ನಿಷ್ಠುರತೆ ಕಂಡುಬರುತ್ತದೆ . ಸೀತಾಪಹರಣ ರಾಮಾಯಣಕ್ಕೆ ನಾಂದಿಯಾದರೆ ರೈಲಿನಲ್ಲಿಯ ಗಾಂಧೀ ಮಾನಾಪಹರಣ ಮಾನವೀಯತೆಯ ಸ್ವಾತಂತ್ರ್ಯಕ್ಕೆ ಕಾರಣವಾಗುತ್ತೆ.

ಇದೆಲ್ಲ ಈ ಪುಸ್ತಕದಲ್ಲಿ ಬರುವ ಅನನ್ಯ ಕಲ್ಪನೆಗಳು. ಒಟ್ಟು 416 ಪುಟಗಳ ಈ ಪುಸ್ತಕದಲ್ಲಿ 9 ಅಧ್ಯಾಯಗಳಿವೆ.

**ಕಥನ ಭಾರತ**

ಈ ಮೊದಲ ಅಧ್ಯಾಯದಲ್ಲಿ ದೇಶದ ಜನಾಂಗೀಯ ಹಿನ್ನೆಲೆ,ಉಗಮ, ಬೆಳವಣಿಗೆ ವೇದ, ಉಪನಿಷತ್ತು, ರಾಮಾಯಣ,ಮಹಾಭಾರತ, ಭಗವದ್ಗೀತೆ – ಇವುಗಳ ಪ್ರಸ್ತಾಪವಿದೆ. ಧರ್ಮ ನಿಂತ ನೀರಾದಾಗ, ಹುಟ್ಟಿಬಂದ ಮಹಾವೀರ ಗೌತಮಬುದ್ಧ , ಮೌರ್ಯ – ಮಗಧ– ಆಚಾರ್ಯ ತ್ರಯರು – ಕಾಲಾನಂತರದಲ್ಲಿ ಮುಸ್ಲಿಂ ಆಕ್ರಮಣ – ಯುರೋಪಿಯನ್ನರ ಆಗಮನ , ಆಕ್ರಮಣ – ದೇಶಿ ರಾಜರ ಒಳಜಗಳ – ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆ ರಜಪೂತರ ಪರಾಕ್ರಮ – ಇವುಗಳನ್ನೆಲ್ಲಾ ದಾಟಿ ಪೋರ್ ಬಂದರ್ ಗೆ ಬರುತ್ತದೆ. ಅಸ್ಮಾವತಿ ನದಿ ದಂಡೆಯ ಮೇಲಿನ ಈ ಊರಿನ ಗ್ರಾಮದೇವತೆ ಪೊರವ್ . ಇದಕ್ಕೆ ಸುಧಾಮ ಪುರಿ ಅಂತಲೂ ಹೆಸರು. ಸುಧಾಮನ ಬಾಲ್ಯ ಗೆಳೆಯ ಕೃಷ್ಣನ ಊರು ಇಲ್ಲಿಂದ ಉತ್ತರಕ್ಕೆ 100 ಕೀ ಮೀ ದೂರದ ದ್ವಾರಕೆ.ಇಲ್ಲಿಂದ 125 ಕೀ ಮೀ ದಕ್ಷಣಕ್ಕೆ ಹೋದರೆ ಶ್ರೀ ಸೋಮನಾಥ ವೇರಾವಲ್. ಈಗ ಇದು 3 ತಾಲ್ಲೂಕು 6 ಲಕ್ಷ ಜನ ಸಂಖ್ಯೆಯ ಪುಟ್ಟ ಜಿಲ್ಲೆ . ಗಾಂಧೀಜಿ ಜನಿಸಿದ ಮನೆ ಕೀರ್ತಿ ಮಂದಿರ ಇಲ್ಲೇ ಇರುವುದು.

**ಮುಂದಿನ ಪುಟಗಳಲ್ಲಿ**

ಮೋಹನನ ಬಾಲ್ಯ, ಶಿಕ್ಷಣ, ಗೆಳೆಯರು, ವಿವಾಹ , ದಾರಿ ತಪ್ಪಿದ ಘಟನೆಗಳು, ತಂದೆಯೊಡನೆ ತಪ್ಪೊಪ್ಪಿಗೆ ವಿದೇಶ ಪ್ರಯಾಣ, ಜಾತಿ ಬಹಿಷ್ಕಾರ – ಮೊದಲಾದ ಸಂಗತಿಗಳ ಉಲ್ಲೇಖವಿದೆ

**ಇಂಗ್ಲೆಂಡ್ ಫೇಬಿಯನ್ನರು**

ಈ ಎರಡನೇ ಅಧ್ಯಾಯದಲ್ಲಿ ಗಾಂಧೀಜಿಯ ಸಮುದ್ರಯಾನದ ಅನುಭವ, ಶಿಷ್ಟಾಚಾರದ ಪರಿಚಯ ಹಸಿವಾದಾಗ ತಾಯಿಗೆ ಕೊಟ್ಟ ಸಸ್ಯಾಹಾರದ ವಚನ – ಹಡಗು ನಿಂತ ಬಂದರುಗಳಲ್ಲಿನ ಜನರ ಜೀವನ ಶೈಲಿ – ಗಾಂಧೀಜಿ ತಮ್ಮ ಮುಂದಿನ ದಿನಗಳ ಕುರಿತು ಚಿಂತಿಸುವಂತೆ ಮಾಡುತ್ತವೆ. ಲಂಡನ್ ನಲ್ಲಿ ಡಾ. ಮೆಹ್ತಾ ಮತ್ತಷ್ಟು ಶಿಷ್ಟಾಚಾರದ ಪಾಠ ಕಲಿಸುತ್ತಾರೆ. ಭಾರತದಂತೆ ಇಲ್ಲಿ ಜಾತಿ ಇಲ್ಲ, ಆದರೆ ಅದಕ್ಕಿಂತ ಕೆಟ್ಟದಾದ ವರ್ಗ ಪ್ರಜ್ಞೆ ಇದೆ ಅನ್ನುತ್ತಾರೆ . ರಾಜಾರಾವ್ ಇಲ್ಲಿ 19–20 ನೇ ಶತಮಾನದ ಇಂಗ್ಲೆಂಡ್ ದೇಶದ ಸಾಮಾಜಿಕ ಬೌದ್ಧಿಕ ಚಿತ್ರಣ ಕಟ್ಟಿ ಕೊಟ್ಟಿದ್ದಾರೆ. ಕೈಗಾರಿಕಾ ಕ್ರಾಂತಿ, – ಸ್ವಾತಂತ್ರ್ಯ ಪ್ರೀತಿ – ಸ್ವಚ್ಚಂದ ರೀತಿ – ಚಿಂತನ ಶೀಲತೆ – 52 ವಸಾಹತುಗಳನ್ನು ಹಿಂಡಿ ಹಿಪ್ಪೆ ಮಾಡಿ ತಂದು ತುಂಬಿಕೊಂಡ ಸಂಪತ್ತು ಇವುಗಳ ಬಗ್ಗೆ ಹೇಳುತ್ತಾ – ಈ ಎರಡು ವರ್ಷದ ವಾಸ್ತವ್ಯ ಗಾಂಧೀಜಿಗೆ ಒಂದು ತೀರ್ಥಯಾತ್ರೆಯೇ ಆಗಿತ್ತು ಅನ್ನುತ್ತಾರೆ.

**ದಕ್ಷಿಣ ಆಫ್ರಿಕಾದಲ್ಲಿ ಗಾಂಧೀ – ತಾತ್ವಿಕತೆಯ ಮುಂಬೆಳಕು**

ಈ ಮೂರನೇ ಅಧ್ಯಾಯದಲ್ಲಿ ಮುಂಬೈನಲ್ಲಿ ಬ್ರೀಫ್ ಲೆಸ್ ಬ್ಯಾರಿಸ್ಟರ್ ಆದ ಗಾಂಧೀ ದಾದಾ ಅಬ್ದುಲ್ಲಾ ಕಂಪನಿ ಕೇಸ್ ಗಾಗಿ ಆಫ್ರಿಕಾಗೆ ಹೋಗುವ ಸಂದರ್ಭದ ವಿವರ ಇದೆ. ಆಫ್ರಿಕಾ ಮತ್ತು ಭಾರತದ ಅನಾದಿ ಕಾಲದ ಸಂಬಂಧ ಮತ್ತು ಸಾಂಸ್ಕೃತಿಕ ಹರವನ್ನು ರಾಜಾರಾವ್ ಇಲ್ಲಿ ಗುರುತಿಸಿದ್ದಾರೆ. 1893 ರಲ್ಲಿ ಈ ದೇಶದಿಂದ ಇಲ್ಲಿಂದ ಒಬ್ಬ ಸಾಮಾನ್ಯ ವಕೀಲ

ಮತ್ತೆ ಒಬ್ಬ ಸಾಮಾನ್ಯ ಸನ್ಯಾಸಿ ಸಮುದ್ರ ಯಾನ ಮಾಡುತ್ತಾರೆ.ಒಬ್ಬರು ಜೀವನೋಪಾಯಕ್ಕಾಗಿ ಕಗ್ಗತ್ತಲ ಖಂಡಕ್ಕೆ, ಮತ್ತೊಬ್ಬರು ಜೀವನ ಸಂದೇಶ ನೀಡಲಿಕ್ಕೆ ಹೊಸ ಖಂಡಕ್ಕೆ. ಇಬ್ಬರ ದಾರಿ ಬೇರೆ,ಆದರೆ ಗುರಿ ಒಂದೇ . ವಿವೇಕಾನಂದರ ಗುರಿ ಆಧ್ಯಾತ್ಮಿಕ ಸ್ವಾತಂತ್ರ್ಯ . ಗಾಂಧೀ ಅವರದ್ದು ಮಾನವೀಯತೆ ಸ್ವಾತಂತ್ರ್ಯ . ಇಬ್ಬರೂ ವಿಶ್ವ ಗುರುವಾಗಿ ಹೊರ ಹೊಮ್ಮುತ್ತಾರೆ.

ಆಫ್ರಿಕೆಯಲ್ಲಿನ ಗಾಂಧೀ ಅವರ ಸತ್ಯ ಮತ್ತು ಅಹಿಂಸೆ ಪ್ರಯೋಗಗಳು ವಸಾಹತು ಶಾಹಿ ಜಗತ್ತಿನಲ್ಲಿ ಒಂದು ಅಪೇಕ್ಷಣೀಯ ಸಂಚಲನ ಮೂಡಿಸಿ, ಭಾರತ ಸ್ವಾತಂತ್ರ್ಯ ಸಂಗ್ರಾಮದ ಮುಂಗೋಳಿ ಆಫ್ರಿಕಾದಲ್ಲಿ ಕೂಗಿತು ಎಂದಿದ್ದಾರೆ ರಾಜಾರಾಯರು. ಧರ್ಮ ಜಿಜ್ಞಾಸೆಯ ಕೆಲವು ವಿಷಯಗಳ ಪ್ರಸ್ತಾವನೆ ಸಹ ಇಲ್ಲಿದೆ.

ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಶ್ , ಬೋಯರ್ಸ್ ಮತ್ತು ಭಾರತೀಯರು. ಗಾಂಧೀಜಿ ಎರಡನೇ ಸಲ ಆಫ್ರಿಕಾಗೆ ಬರಬೇಕಾಗಿ ಬಂದ ಪ್ರಸಂಗ ,ನಂತರದ ಬೆಳವಣಿಗೆಗಳನ್ನು ಈ ಅಧ್ಯಾಯ ಒಳಗೊಂಡಿದೆ.

ಬೋಯರ್ ಯುದ್ಧದ ಸಂದರ್ಭದಲ್ಲಿ ರಾಜಾರಾವ್, ರಾಜಕಾರಣಿಗಳು ಎಂದೂ ತಮ್ಮ ಕಾಲದಲ್ಲಿ ಉಂಟಾದ ಘಟನೆಗಳಿಂದ ತಿದ್ದಿಕೊಳ್ಳುವುದಿಲ್ಲ. ಅದರ ಬದಲಾಗಿ ತಾವೇ ಚರಿತ್ರೆಯ ನಿರ್ಮಾಪಕರು ಅಂದುಕೊಳ್ಳುತ್ತಾರೆ – ಅನ್ನುವ ಮಾತು ಇಂದಿಗೂ ಪ್ರಸ್ತುತ ಅನ್ನಿಸುತ್ತದೆ. ಬೋಯರ್ ಯುದ್ಧದಲ್ಲಿ ಬ್ರಿಟಿಷ್ ಪರ ನಿಂತ ಗಾಂಧೀ ಕೌರವರ ಪರ ಭೀಷ್ಮ ನಿಂತಂತೇ ಆಗಿತ್ತು ಅನ್ನುತ್ತಾರೆ ರಾಜಾರಾವ್. ಗಾಂಧೀಜಿ ಭಾರತಕ್ಕೆ ಹಿಂದಿರುಗಿ ಕೊಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ನೇತಾಲ್ ಭಾರತೀಯರ ಬಗ್ಗೆ ಮಾತನಾಡಿ ನಿರ್ಣಯ ಪಾಸು ಮಾಡಿಸಿಕೊಳ್ಳುತ್ತಾರೆ . ಗೋಖಲೆ, ಅನಿಬೇಸಂಟ್, ಭೇಟಿ – ಕಾಶಿ ದರ್ಶನ – ನೇತಾಲ್ ಕರೆ ಬಂದು ಮತ್ತೆ ಆಫ್ರಿಕಾ ಪ್ರಯಾಣ –

ಭಾರತೀಯರ ಲಂಚ ಕೊಡುವ ಅಭ್ಯಾಸವನ್ನು ರಾಜಾರಾವ್ ಓರಿಯೆಂಟಲ್ ಟ್ರೈಬರಿ – ಅಂತ ತಮಾಷೆ ಮಾಡುತ್ತಾರೆ. ಈ ದಿನಗಳಲ್ಲಿಯೇ ಜೋಹನ್ಸ್ ಬರ್ಗ್ ನಿಂದ ಡರ್ಬಾನ್ ಪ್ರಯಾಣದಲ್ಲಿ ಪೊಲಾಕ್ ನೀಡಿದ ಟಾಲ್ ಸ್ಟಾಯ್ ಅವರ ' ಅನ್ ಟು ದಿಸ್ ಲಾಸ್ಟ್ ' ಪುಸ್ತಕವನ್ನು ಓದುತ್ತಾರೆ. ಅಲ್ಲಿ ಅವರಿಗೆ ಜೀವನದ ಹೊಸ ಪರ್ವ ತೆರೆದುಕೊಳ್ಳುತ್ತದೆ.

**ಗಾಂಧೀಜಿ : ಭಾರತೀಯ ಜೀವನ ಪಥದ ಹರಿಕಾರ**

ಗಾಂಧೀಜಿ ಕುರಿತ ಪ್ರಚಲಿತ ವಿದ್ಯಮಾನಗಳನ್ನು ಗಮನಿಸುತ್ತಾ ಪ್ರೊ. ದಯಾನಂದ ಅವರು 'ಗಾಂಧೀ ಜೀವನವೇ ಸಹಸ್ರಾರು ವರ್ಷಗಳ ನಮ್ಮ ಪರಂಪರೆಯ ಜೀವನ ತತ್ವ ದರ್ಶನದ ಪ್ರತೀಕವಾಗಿದೆ' ಎಂದು ಭಾವಿಸುತ್ತಾರೆ. ಮಹಾಭಾರತದಲ್ಲಿ ಶರಶಯ್ಯೆ ಮೇಲೆ ಮಲಗಿದ ಭೀಷ್ಮ ನಂತೆ ಸತ್ಯ ಅಹಿಂಸೆ ಮತ್ತು ಸಹಿಷ್ಣುತೆಯ ಅಸ್ತ್ರಗಳ ಮೇಲೆ ಗಾಂಧೀ ಮಲಗಿದಂತೆ ತೋರುತ್ತದೆ ಅನ್ನುವುದು ಒಂದು ಅನನ್ಯ ಕಲ್ಪನೆ. ಯುದ್ಧ ಗೆದ್ದರೂ ಬಂಧು ಬಾಂಧವರನ್ನು ಕಳೆದುಕೊಂಡ ಧರ್ಮರಾಜನ ವ್ಯಥೆಯೇ ಸ್ವಾತಂತ್ರ್ಯ ಹೋರಾಟದಲ್ಲಿ ಗೆದ್ದರೂ ದೇಶವಾಸಿಗಳು ಇಬ್ಭಾಗವಾದದ್ದು ಗಾಂಧೀಜಿ ಗೆ ವ್ಯಥೆಯಾಗಿಯೇ ಉಳಿಯುತ್ತದೆ.

ಯಾದವೀ ಕಲಹದಲ್ಲಿ ನೊಂದು ಬೆಂದ ಶ್ರೀ ಕೃಷ್ಣ ಬೇಡನ ಬಾಣಕ್ಕೆ ಗುರಿಯಾದಂತೇ ಸ್ವಾತಂತ್ರ್ಯ ಸಾಧನೆ ತರುವಾಯ ಗಾಂಧೀಜಿ ನಮ್ಮವನೆ ಆದ ಹಂತಕನಿಗೆ ಬಲಿಯಾದದ್ದು ವಿಸ್ಮಯ ಅನಿಸುತ್ತದೆ.

ಗಾಂಧೀಜಿ ಎರಡನೇ ಬಾರಿ ಆಫ್ರಿಕಾಕ್ಕೆ ಬರಬೇಕಾಗಿ ಬಂದ ಪ್ರಸಂಗ ನಂತರದ ಬೆಳವಣಿಗೆಗಳನ್ನು ಈ ಅಧ್ಯಾಯ ಒಳಗೊಂಡಿದೆ. ಬೋಯರ್ ಯುದ್ಧಾನಂತರದ ಸಂದರ್ಭದಲ್ಲಿ

ರಾಜಾ ರಾವ್ ಅವರು ಹೇಳುವಂತೆ ರಾಜಕಾರಣಿಗಳು ಎಂದೂ ತಮ್ಮ ಕಾಲದಲ್ಲಿ ಉಂಟಾದ ಘಟನೆಗಳಿಂದ ತಿದ್ದಿಕೊಳ್ಳುವುದಿಲ್ಲ. ಅದರ ಬದಲಾಗಿ ತಾವೇ ಚರಿತ್ರೆಯ ನಿರ್ಮಾಪಕರು ಅಂದುಕೊಳ್ಳುತ್ತಾರೆ ಅನ್ನುವ ಮಾತು ಇಂದಿಗೂ ಪ್ರಸ್ತುತ ಅನ್ನಿಸುತ್ತದೆ.

ಗಾಂಧಿಜೀ ಭಾರತಕ್ಕೆ ಹಿಂದಿರುಗಿ ಕೊಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ನೆಟಾಲ್ ಭಾರತೀಯರ ಕುರಿತ ನಿರ್ಣಯ ಪಾಸು ಮಾಡಿಸಿ ಕೊಳ್ಳುತ್ತಾರೆ.

ಕಾಂಗ್ರೆಸ್ ಅಧಿವೇಶನದಲ್ಲಿ ಗೋಖಲೆ ಅವರ ಭೇಟಿಯಾಗಿ ಮಾತುಕತೆ ನಡೆಸುತ್ತಾರೆ.

ಅವರ ಸಲಹೆಯಂತೆ ಭಾರತ ಯಾತ್ರೆ ಕೈಗೊಳ್ಳುತ್ತಾರೆ. ವಾರಣಾಸಿಯಲ್ಲಿ ಅನಿಬೇಸಂಟ್ ಭೇಟಿಯಾಗುತ್ತಾರೆ.

ಬಾಂಬೆ ತಲುಪಿದಾಗ ನೆಟಾಲ್ ನಿಂದ ಬಂದ ಕರೆಯ ಮೇರೆಗೆ ಮತ್ತೆ ಆಫ್ರಿಕಾಕ್ಕೆ ಬರುತ್ತಾರೆ.ಭಾರತೀಯರು ವಾಮಮಾರ್ಗದಲ್ಲಿ ಲಂಚ ಕೊಡುವ ಅಭ್ಯಾಸವನ್ನು ರಾಜಾರಾವ್ ಓರಿಯೆಂಟಲ್ ಟ್ರೈಬರಿ ಎಂದು ತಮಾಷೆ ಮಾಡುತ್ತಾರೆ. ಮಗನ ಅನಾರೋಗ್ಯ, ಬ್ರಹ್ಮಚರ್ಯ ಪಾಲನೆ ,ಪತ್ನಿಯಿಂದ ಶೌಚಾಲಯ ತೊಳೆಸುವ ಹಠಮಾರಿತನ ಇವೆಲ್ಲ ಈ ಅಧ್ಯಾಯದಲ್ಲಿವೆ.

**ಗಾಂಧೀಜಿ ಚಿಂತನಾ ಉತ್ಥಾನ, ರಾಮರಾಜ್ಯ ಕಲ್ಪನೆ**

ಈ ಅಧ್ಯಾಯದಲ್ಲಿ ದಕ್ಷಿಣ ಆಫ್ರಿಕಾದಲ್ಲಿನ ವಲಸೆಗಾರರ ಪರಿಸ್ಥಿತಿ ಕಾನೂನು ಹೋರಾಟ ಸತ್ಯಾಗ್ರಹಗಳು ಬರುತ್ತವೆ.

ಗಾಂಧೀಜಿ ಜೈಲು ಸೇರಿದಾಗ ಕಸ್ತೂರ ಬಾ ಅವರ ಅನಾರೋಗ್ಯದ ಸುದ್ದಿ ಬರುತ್ತದೆ. ಈ ಸಂದರ್ಭದಲ್ಲಿ ತಮಗೆ ಅಲ್ಲಿ ಇರಲಾಗದಿದ್ದುದಕ್ಕೆ ಗಾಂಧಿ ಕಸ್ತೂರ್ ಬಾ ಅವರಿಗೆ ಪತ್ರ ಬರೆದು ಧೈರ್ಯ ತುಂಬುತ್ತಾರೆ.

ರಾಮರಾಜ್ಯದ ಕಲ್ಪನೆಯನ್ನು ಇಲ್ಲಿ ರಾಜಾರಾಯರು ಬುದ್ಧಿ ಮತ್ತು ಭಾವಕ್ಕೆ ತಟ್ಟುವಂತೆ ನಿರೂಪಿಸಿದ್ದಾರೆ. ಸತ್ಯ,ಪ್ರೀತಿ, ಅಹಿಂಸೆ ಬಗ್ಗೆ ಆಳವಾದ ವಿವರಗಳಿವೆ . ಸ್ವಾತಂತ್ರ್ಯ ನಂತರದ ಭಾರತ ಮಾಡಬೇಕಾದ, ಮಾಡಬಹುದಾದ ಮಾರ್ಗದರ್ಶಿ ಸೂತ್ರಗಳನ್ನು ತಮ್ಮ ಹಿಂದ್ ಸ್ವರಾಜ್ ನಲ್ಲಿ ಬರೆಯುತ್ತಾರೆ. ಇದರ ಇಂಗ್ಲಿಷ್ ಅನುವಾದ ನೋಡಿದ ಟಾಲ್ ಸ್ಟಾಯ್ ಇದು ಜಗತ್ತೇ ಅನುಸರಿಸ ಬಹುದಾದ ಮಾರ್ಗ ಎಂದು ಭಾವಿಸುತ್ತಾರೆ.

**ಸತ್ಯಾಗ್ರಹ ಹೋರಾಟ**

ಈ ಅಧ್ಯಾಯ ದಕ್ಷಿಣ ಆಫ್ರಿಕಾದಲ್ಲಿನ ವಲಸೆಗಾರರ ಸ್ಥಿತಿ – ಗತಿಗಳ ಸುಧಾರಣೆ ಅವರ ಅಸ್ಮಿತೆ ಮತ್ತು ಆತ್ಮಗೌರವ ರಕ್ಷಿಸುವ ಮತ್ತಷ್ಟು ಅಹಿಂಸಾತ್ಮಕ ಚಳವಳಿಗಳ ಪ್ರತಿಭಟನೆಯ ವಿವರ ನೀಡುತ್ತದೆ.

ಇದರಲ್ಲಿ ಗೋಖಲೆ ಅವರ ದಕ್ಷಿಣ ಆಫ್ರಿಕಾ ಭೇಟಿ , ಅವರಿಗೆ ದೊರೆತ ಸ್ವಾಗತ,ವಲಸೆಗಾರರ ನಿರೀಕ್ಷೆ , ಅಲ್ಲಿನ

ಆಡಳಿತಗಾರರಿಗೆ ಆತಂಕ, ತಳಮಳ ಉಂಟುಮಾಡುತ್ತದೆ. ಆಫ್ರಿಕಾದಲ್ಲಿನ ವಲಸೆಗಾರರ ಹವ್ಯಾಸ, ಸ್ವಚ್ಛತೆ ,ಆಹಾರ, ಜೀವನ ಶೈಲಿ, ಕುರಿತು ಒಂದಷ್ಟು ವಿವರಗಳಿವೆ.

ಇಲ್ಲಿನ ಹೋರಾಟಗಳು ಮುಗಿಯುವ ಮಟ್ಟ ತಲುಪಿರುವುದರಿಂದ ಗಾಂಧಿಜೀ ಅವರು ಸ್ವದೇಶಕ್ಕೆ ಬರಬೇಕಾದುದರ ಅಗತ್ಯವನ್ನು ಗೋಖಲೆ ಅವರು ಸೂಚಿಸುತ್ತಾರೆ. 'ಗಾಂಧೀಜಿ ಅವರ ತತ್ವ ಚಿಂತನೆಗಳು ದರ್ಶನ ರೂಪದಲ್ಲಿ ಪ್ರಕಟವಾಗದಿದ್ದರೂ, ಯಾವುದೇ ಒಂದು ನೈತಿಕ ಸಮಸ್ಯೆಗೆ ಪರಿಹಾರ ಸೂಚಿಸಬಲ್ಲವಾಗಿದ್ದವು ' ಅನ್ನುತ್ತಾರೆ ರಾಜಾರಾವ್.

**ಆಧುನಿಕ ಋಷಿ ರೂಪಿ ಗಾಂಧಿ**

ಹಿಂದೂ – ಮುಸ್ಲಿಂ – ಪಾರ್ಸಿ –ವಿವಾಹ ಅಮಾನ್ಯಗೊಳಿಸಿದ ಕಾನೂನು ವಿರುದ್ಧ ನಡೆದ ಪಾದಯಾತ್ರೆಯನ್ನು ಲಂಕೆಗೆ ಹೊರಟ ಶ್ರೀರಾಮ ಸೇನೆ ಗೆ, ಗ್ರಾಮದ ಮಾರೀ ಜಾತ್ರೆ ಉತ್ಸವ ಸಂಭ್ರಮಕ್ಕೆ ಹೋಲಿಸುತ್ತಾರೆ ರಾಜಾರಾಯರು.

2027 ಪುರುಷರು 127 ಮಹಿಳೆಯರು,57 ಮಕ್ಕಳು ಗಡಿದಾಟಲು ಸಿದ್ಧರಾಗಿರುತ್ತಾರೆ. ಹಿಂಸಾವಾತಾವರಣ ನಿರ್ಮಾಣವಾಗುತ್ತದೆ. ಗಾಂಧೀ ಬಂಧನವಾಗುತ್ತದೆ. ಮುಂದಿನ ಮತ್ತಷ್ಟು ಅಹಿಂಸಾತ್ಮಕ ಪ್ರತಿಭಟನೆಯ ಫಲವಾಗಿ ಅಮಾನವೀಯ ಕಾನೂನುಗಳು ರದ್ದಾಗುತ್ತವೆ. ಸತ್ಯ ಅಹಿಂಸೆಗೆ ಗೆಲುವಾಗುತ್ತದೆ .

**ಸತ್ಯಶೋಧಕನ ಶಾಶ್ವತ ನಿರ್ಗಮನ**

1940 ರ ಕಾಂಗ್ರೆಸ್ ಅಧಿವೇಶನದ ವಿವರ, ಎರಡನೇ ಜಾಗತಿಕ ಮಹಾಯುದ್ಧ, ಭಾರತ ಬಿಟ್ಟು ತೊಲಗಿ ಚಳುವಳಿ, ಅಂತರ ರಾಷ್ಟ್ರೀಯ ವಿದ್ಯಮಾನಗಳು, ಕಸ್ತೂರ ಬಾ ನಿಧನ, ಕಲ್ಕತ್ತಾ ಮತೀಯ ದಂಗೆ, ದೇಶ ವಿಭಜನೆ, ಸ್ವಾತಂತ್ರ್ಯ ಘೋಷಣೆ, ನೌಖಾಲಿ ನರಮೇಧ, ಗಾಂಧೀ ಹತ್ಯೆ – ಈ ಎಲ್ಲ ವಿವರಗಳೂ ಈ ಕಡೆಯ ಅಧ್ಯಾಯದಲ್ಲಿ ಇವೆ.

ಕಳೆದ ಎಂಟು ಅಧ್ಯಾಯಗಳಲ್ಲಿನ 'ಗಾಂಧೀ ಅಂತರ್ಯ' ಕಥಾನಕವನ್ನು ಪ್ರೊ. ನಾ. ದಯಾನಂದ ಎರಡೇ ವಾಕ್ಯಗಳಲ್ಲಿ ಹೀಗೆ ಹೇಳುತ್ತಾರೆ.

' ನೈತಿಕತೆಯನ್ನು ದೂರವಿಟ್ಟು ಮನುಷ್ಯ ಸಂಬಂಧಗಳನ್ನು ದರ್ಪದಲ್ಲಿ ನಿಯಂತ್ರಿಸುವ ಯಾವುದೇ ನಡವಳಿಕೆಯನ್ನು ಗಾಂಧೀಜಿ ಸತ್ಯ ಅಹಿಂಸೆಯ ಅಸ್ತ್ರದಿಂದ ಖಂಡಿಸಿದ್ದರು. ಅದರ ಪ್ರಯೋಗ ದಕ್ಷಿಣ ಆಫ್ರಿಕಾದಲ್ಲಿ ನಡೆಯಿತು.

ಗಾಂಧೀ ಹೋರಾಟ ಭಾರತೀಯ ಪರಂಪರೆಯ ಒಂದು ಮುಂದುವರೆದ ಭಾಗ ಅನ್ನುವುದನ್ನು ರಾಜಾರಾವ್ ಮತ್ತು ಪ್ರೊ. ನಾ. ದಯಾನಂದ ಭಾರತೀಯರಿಗೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

**– ಡಾ. ಹೆಚ್.ಎಸ್. ಸುರೇಶ್**
ಅಧ್ಯಕ್ಷ, ಕರ್ನಾಟಕ ಸರ್ವೋದಯ ಮಂಡಲ



# ದೇವದಾಸ್ ಗಾಂಧಿ

ದೇವದಾಸ್ ಗಾಂಧಿ ಅವರು ಮಹಾತ್ಮ ಗಾಂಧೀಜಿ ಮತ್ತು ಕಸ್ತೂರಬಾ ಗಾಂಧಿ ಅವರ 4 ಮಕ್ಕಳಲ್ಲಿ ಕೊನೆಯ ಮಗ. ದೇವದಾಸ್ ಗಾಂಧಿ 1900ರ ಮೇ 22ರಂದು ದಕ್ಷಿಣ ಆಫ್ರಿಕದ ಡರ್ಬನ್‌ನಲ್ಲಿ ಜನಿಸಿದರು. ಗಾಂಧಿಯವರ ಇತರ ಮಕ್ಕಳಂತೆ ಇವರಿಗೂ ಸಾಮಾನ್ಯ ರೀತಿಯ ಶಾಲಾ–ಕಾಲೇಜು ಶಿಕ್ಷಣ ದೊರಕಲಿಲ್ಲ. ಇವರು ಗಾಂಧಿಯವರೊಂದಿಗೆ ಇದ್ದುದೇ ದೊಡ್ಡ ಶಿಕ್ಷಣವಾಯಿತು.

ದೇವದಾಸ್ ಗಾಂಧಿ ತಮ್ಮ ತಂದೆಯವರ ಪ್ರೇರಣೆಯಿಂದ ತಾವೂ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. ಅನೇಕ ಬಾರಿ ಜೈಲುವಾಸ ಅನುಭವಿಸಿದರು. ಯಂಗ್ ಇಂಡಿಯ ಪತ್ರಿಕೆಯಲ್ಲಿ ಕೆಲಸ ಮಾಡಿ, ಪತ್ರಿಕೋದ್ಯಮದ ಅನುಭವ ಪಡೆದರು. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾದ ಪ್ರಥಮ ಪ್ರಚಾರಕರಾದರು. ಹಿಂದೀ ಬೋಧನೆ ಮತ್ತು ಚರಕ ನೂಲುವಿಕೆ ಮುಂತಾದ ಕಾರ್ಯಗಳಲ್ಲೂ ಪಾಲ್ಗೊಂಡರು.


ದೇವದಾಸ್ ಗಾಂಧಿ ಅವರು ಸಿ. ರಾಜಗೋಪಾಲಾಚಾರಿ ಅವರ ಮಗಳಾದ ಲಕ್ಷ್ಮೀಯನ್ನು ಪ್ರೀತಿಸುತ್ತಿದ್ದರು. ಆಗ ದೇವದಾಸರ ವಯಸ್ಸು 28. ಲಕ್ಷ್ಮಿಯವರ ವಯಸ್ಸು 15. ಗಾಂಧಿ ಮತ್ತು ರಾಜಾಜಿ ಈ ಬೆಳವಣಿಗೆಯನ್ನು ಒಪ್ಪಿದರೂ, ವೈವಾಹಿಕ ಜೀವನಕ್ಕೆ ಕಾಲಿಡಲು ಸೂಕ್ತವಾದ ವಯಸ್ಸಲ್ಲವೆಂದು ನಿಶ್ಚಯಿಸಿ, 5 ವರ್ಷ ಕಾಯಲು ಹೇಳಿದರು. ಆ ಸಮಯದಲ್ಲಿ ಅವರಿಬ್ಬರೂ ಭೇಟಿಯಾಗಲು ಸಮ್ಮತಿಯಿರಲಿಲ್ಲ. 1933ರಲ್ಲಿ ಹಿರಿಯರ ಅನುಮತಿ ಪಡೆದು ವಿವಾಹವಾದರು. ಈ ದಂಪತಿಗಳಿಗೆ ತಾರಾ ಎಂಬ ಮಗಳು ಮತ್ತು ರಾಜಮೋಹನ ಗಾಂಧಿ, ಗೋಪಾಲಕೃಷ್ಣ ಗಾಂಧಿ, ರಾಮಚಂದ್ರ ಗಾಂಧಿ ಪುತ್ರರು ಜನಿಸಿದರು .

ದೇವದಾಸ್ ಗಾಂಧಿ ಹಿಂದೂಸ್ಥಾನ್ ಟೈಮ್ಸ್ ಇಂಗ್ಲಿಷ್ ದಿನಪತ್ರಿಕೆಗೆ 1940ರಲ್ಲಿ ಕಾರ್ಯನಿರ್ವಾಹಕ ಸಂಪಾದಕರಾಗಿ ನೇಮಕಗೊಂಡರು. ಆಗ ಇವರ ಅನುಭವ ಒಳ್ಳೆಯ ಪ್ರಯೋಜನಕ್ಕೆ ಬಂತು. ಸಹ ಸಂಪಾದಕರಾಗಿದ್ದ ದುರ್ಗಾದಾಸ್ ಅವರ ನೆರವಿನಿಂದ ಪತ್ರಿಕೆಯನ್ನು ಹೆಚ್ಚು ಜನಪ್ರಿಯಗೊಳಿಸಲು ಪ್ರಯತ್ನಿಸಿದರು. ಸ್ವಾತಂತ್ರ್ಯ ಹೋರಾಟ, ಕಾಂಗ್ರೆಸ್ ಧ್ಯೇಯಗಳನ್ನು ಪ್ರತಿಪಾದಿಸುತ್ತಿದ್ದ ಈ ಪತ್ರಿಕೆ, ರಾಷ್ಟ್ರಕ್ಕೆ ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ, ಸರ್ಕಾರದ ನೀತಿ–ಧೋರಣೆಗಳ ವಾಣಿಯಾಯಿತು. ಇದರ ಹಿಂದಿ ಆವೃತ್ತಿಗಳಾದ ಹಿಂದೂಸ್ತಾನ್, ಹಿಂದೂಸ್ತಾನ್ ಸಾಪ್ತಾಹಿಕ ಇವೂ ಜನಪ್ರಿಯತೆ ಗಳಿಸಿದುವು. ಇದರ ಸಾಗರೋತ್ತರ ಆವೃತ್ತಿ ವಿದೇಶಗಳಲ್ಲಿಯ ರಾಷ್ಟ್ರೀಯರ ಪ್ರೀತಿಗೆ ಪಾತ್ರವಾಯಿತು. ದೇವದಾಸ್ ಗಾಂಧಿಯವರು 1947ರಲ್ಲಿ ಅಖಿಲಭಾರತ ಪತ್ರಕರ್ತರ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ದೇವದಾಸ ಗಾಂಧಿಯವರು 1957ರ ಆಗಸ್ಟ್ 3ರಂದು ನಿಧನರಾದರು.



# ಅಪ್ರತಿಮ ಹೋರಾಟಗಾರ
# ಡಾ. ಎಚ್. ಎಸ್. ದೊರೆಸ್ವಾಮಿ



**ಡಾ.** ಎಚ್. ಎಸ್. ದೊರೆಸ್ವಾಮಿ ಕನ್ನಡ ಪ್ರೇಮಿಯಾಗಿ ಮತ್ತು ನಾಡಿನ ಮಹತ್ವದ ಹೋರಾಟಗಾರರಾಗಿ ಹೆಸರಾಗಿದ್ದವರು.

ಬೆಂಗಳೂರು ಸಮೀಪದ ಹಾರೋಹಳ್ಳಿಯಲ್ಲಿ 1918ರ ಏಪ್ರಿಲ್ 10ರಂದು ಜನಿಸಿದ ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ ಅವರದು ಬಹುಮುಖ ವ್ಯಕ್ತಿತ್ವ. ಅವರು ಕೈಗೊಂಡ ಹೋರಾಟದ ಬದುಕು ದೇಶದ ಸ್ವಾತಂತ್ರ್ಯ ಹೋರಾಟದಿಂದ ಹಿಡಿದು ಸರ್ಕಾರದ ಭೂ ಕಬಳಿಕೆಯ ವಿರುದ್ಧದ ಹೋರಾಟದವರೆಗೂ ಸಾಗಿತ್ತು.

ಮಹಾತ್ಮರ "ಮೈ ಅರ್ಲೀ ಲೈಫ್" ಪುಸ್ತಕ, ದೊರೆಸ್ವಾಮಿ ಅವರು ಸ್ವಾತಂತ್ರ್ಯ ಚಳವಳಿಗೆ ಧುಮ್ಮಿಕ್ಕಲು ಪ್ರೇರೇಪಿಸಿತು. ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಅವರು ಸೆರೆಮನೆ ವಾಸವನ್ನು ಅನುಭವಿಸಿದರು. ಅವರ ಹೋರಾಟದಲ್ಲಿ ಅವರ ಹಿರಿಯ ಸಹೋದರ ಶ್ರೀ ಎಚ್.ಎಸ್. ಸೀತಾರಾಮ್, ಸರದಾರ್ ವೆಂಕಟರಾಮಯ್ಯ, ಏ.ಜಿ. ರಾಮಚಂದ್ರರಾವ್ ಮುಂತಾದವರು ಮಾರ್ಗದರ್ಶಕರಾಗಿದ್ದರು. ಪತ್ರಕರ್ತರಾಗಿಯೂ ದೊರೆಸ್ವಾಮಿ ಅವರು ಕಾರ್ಯನಿರ್ವಹಿಸಿ, ಬ್ರಿಟಿಷರ ವಿರುದ್ಧ ತಮ್ಮ ಪತ್ರಿಕೆಯನ್ನು ಒಂದು ಪ್ರಬಲ ಅಸ್ತ್ರವಾಗಿ ಉಪಯೋಗಿಸಿಕೊಂಡರು. ತಮ್ಮ ಬದುಕನ್ನು ಮಹಾತ್ಮ ಗಾಂಧೀಜಿಯವರ ಚಿಂತನೆಗೇ ಪೂರ್ಣವಾಗಿ ಅರ್ಪಿಸಿಕೊಂಡು, ಕೊನೆಯವರೆಗೂ ನಮ್ಮ ಮಧ್ಯೆ ಮಹಾತ್ಮರ ಕೊನೆಯಕೊಂಡಿಯಂತೆ ಜೀವನ ಸಾಗಿಸಿದರು. ಕರ್ನಾಟಕ

ಏಕೀಕರಣಕ್ಕಾಗಿಯೂ ದುಡಿದ ಶತಾಯುಷಿ ದೊರೆಸ್ವಾಮಿ ಅವರ ಸರಳತೆ ಮತ್ತು ಸಜ್ಜನಿಕೆ ಎಲ್ಲರಿಗೂ ಒಂದು ಮಾದರಿಯಾಗಿತ್ತು.

ದೊರೆಸ್ವಾಮಿ ಅವರು ತಮಗೆ ಕನ್ನಡದಲ್ಲಿ ಪ್ರೀತಿ ಹುಟ್ಟುವುದಕ್ಕೆ ಹಾಗೂ ಬದುಕಿನಲ್ಲಿ ಉತ್ತಮವಾಗಿ ಬಾಳಬೇಕೆಂದುದಕ್ಕೆ ಪ್ರೇರೇಪಣೆ ಆದ ಆಚಾರ್ಯ ಬಿ.ಎಂ.ಶ್ರೀ, ವಿ. ಸೀತಾರಾಮಯ್ಯ, ಸಿ. ಕೆ. ವೆಂಕಟರಾಮಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ಎಂ. ಆರ್. ಶ್ರೀನಿವಾಸಮೂರ್ತಿ ಮುಂತಾದ ಮಹನೀಯರನ್ನು ಭಕ್ತಿಭಾವದಿಂದ ಸ್ಮರಿಸುತ್ತಿದ್ದರು. ತಮ್ಮ ಓದಿನ ನಂತರದ ದಿನಗಳಲ್ಲಿ ಕೆಲಕಾಲ ಉಪಾಧ್ಯಾಯ ವೃತ್ತಿ ನಿರ್ವಹಿಸುತ್ತಿದ್ದ ಹಂತದಲ್ಲಿ ಸ್ವಾತಂತ್ರ್ಯ ಚಳುವಳಿಯ ಕಡೆ ಮನಸ್ಸು ಹರಿದು ಸೆರೆವಾಸಕ್ಕೆ ತಳ್ಳಲ್ಪಟ್ಟ ದೊರೆಸ್ವಾಮಿ ಅವರು, ತಮಗೆ ಅಂದಿನ ದಿನಗಳಲ್ಲಿ ಹಿಂಸೆ ಮತ್ತು ಅಹಿಂಸೆಯ ನಡುವೆ ವ್ಯತ್ಯಾಸದ ಅರಿವೇ ಇಲ್ಲದೆ, ಉತ್ಸಾಹದಿಂದ ಟೈಮ್ ಬಾಂಬ್ ಸರಬರಾಜು ಮಾಡುತ್ತಿದ್ದರಂತೆ. "ಈ ಟೈಮ್ ಬಾಂಬಿನಿಂದ ಜೀವಹಾನಿ ಆಗುತ್ತಿರಲಿಲ್ಲ ಎಂಬುದು ಸ್ಪಷ್ಟವಿತ್ತು. ಈ ಟೈಮ್ ಬಾಂಬ್ ಅನ್ನು ಇಲಿಗಳ ಬಾಲಕ್ಕೆ ಕಟ್ಟಿ ದಾಖಲೆಗಳನ್ನು ನಾಶಪಡಿಸುವುದಕ್ಕಾಗಿ ಸರ್ಕಾರಿ ಕಚೇರಿಗಳಲ್ಲಿ ತೂರಿಬಿಡುತ್ತಿದ್ದೆವು. ಆ ಉದ್ದೇಶಕ್ಕಾಗಿ ಬಹಳಷ್ಟು ಕೆಲಸ ಮಾಡಿದೆ. ಹಾಗೆ ಮಾಡುವಾಗ ಒಮ್ಮೆ ಪೋಲೀಸರ ಕೈಗೆ ಸಿಕ್ಕಿ ಭೀಕರ ಏಟಿಗೆ ಸಿಲುಕುವ ಸಂದರ್ಭ ನಿರ್ಮಾಣವಾಗಿತ್ತು. ಅಕಸ್ಮಾತ್ ಪೋಲೀಸರ ಕೆಂಗಣ್ಣಿನ ಭೀಕರ ಹೊಡೆತ ತಪ್ಪಿತಾದರೂ, 14 ತಿಂಗಳುಗಳ ಕಾಲ ಸೆರೆವಾಸವಂತೂ ಆಯಿತು. ಈ ಸೆರೆಮನೆಗಳಲ್ಲಿದ್ದ ದಿನ ಅತ್ಯಂತ ಸಂತಸಭರಿತವಾಗಿಯೂ, ಜೀವನದೃಷ್ಟಿಯಿಂದ ಅತ್ಯುಪಯುಕ್ತವೂ ಆಗಿತ್ತು" ಎಂದು ದೊರೆಸ್ವಾಮಿ ಅವರು ತಮ್ಮ ತಮ್ಮ ಅಂದಿನ ಚಳುವಳಿಯ ದಿನಗಳನ್ನು ನೆನೆಯುತ್ತಿದ್ದರು. ಮುಂದೆ ಮಹಾತ್ಮಾ ಗಾಂಧೀ ಅವರ ಸಂಪರ್ಕದಲ್ಲಿದ್ದ ದಿನಗಳನ್ನು ನೆನೆಯುವ ದೊರೆಸ್ವಾಮಿ ಅವರು "ನಿಜವಾದ ಸಮಾಜವಾದಿ ಅಂದರೆ ಮಹಾತ್ಮರೊಬ್ಬರೇ. ಅವರ ಬಳಿ ಒಂದು ತುಂಡು ಬಟ್ಟೆ ಮತ್ತು ಕನ್ನಡಕದ ಹೊರತಾಗಿ ಮತ್ತೇನೂ ಇರಲಿಲ್ಲ. ಹೀಗಾಗಿ ಅವರೊಬ್ಬರೇ ಪರಿಪೂರ್ಣ ಸಮಾಜವಾದಿ. ಬಹುತೇಕ ಮಂದಿ ಕೇವಲ ಮಾತಿನಲ್ಲಷ್ಟೇ ಸಮಾಜವಾದಿಗಳು" ಎನ್ನುತ್ತಿದ್ದರು.




ಮುಂದೆ ಇಂದಿರಾಗಾಂಧೀ ಯುಗದಲ್ಲಿ ತುರ್ತುಪರಿಸ್ಥಿತಿ ವಿರೋಧಿಸಿ ಜೈಲುವಾಸ ಅನುಭವಿಸಿದ ದೊರೆಸ್ವಾಮಿ ಅವರು, ಕಳೆದ ದಶಕದಲ್ಲಿ ಲಕ್ಷಾಂತರ ಎಕರೆ ಭೂಮಿ, ಭೂಗಳ್ಳರ ಹಗರಣಕ್ಕೆ ಸಿಲುಕಿಹೋಗುವುದನ್ನು ಹೋರಾಡಿ ತಪ್ಪಿಸಿದ್ದಾರೆ. ಹಳ್ಳಿಗಳನ್ನು ಕಸದ ಕೊಂಪೆಗಳನ್ನು ಮಾಡಿ ಕಸದ ಪರ್ವತ ರಾಶಿಗಳಿಂದ ತುಂಬಿ, ಸುತ್ತಮುತ್ತಲಿನ ಜನ ಊಹಿಸಿಕೊಳ್ಳಲಾಗದ ನರಕದ ಬಾಳನ್ನು ಅನುಭವಿಸಬೇಕಾಗಿದ್ದ ಅನಿವಾರ್ಯ ಸಂದರ್ಭದಲ್ಲಿ, ತಾವೇ ಅಲ್ಲಿನ ಜನರ ನೇತೃತ್ವ ವಹಿಸಿ ಬೆಳೆಯುತ್ತಿದ್ದ ಕಸದರಾಶಿಗೆ ತಡೆ ಉಂಟಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಬೆಳಗಾವಿಯಲ್ಲಿ ವಿಧಾನಸಭೆ ಅಧಿವೇಶನ ನಡೆದ ಸಮಯದಲ್ಲಿ ತಮ್ಮ ಸಂಗಡಿಗರೊಂದಿಗೆ ಹೋಗಿ ಹೋರಾಟಮಾಡಿ "ಬಡಜನರಿಗೆ ಭೂಮಿಕೊಟ್ಟು ಅವರ ಬದುಕಿಗೆ ಖಂಡಿತ ಆಸರೆ ಆಗಿಯೇ ಆಗುತ್ತೇವೆ" ಎಂದು ಆಡಳಿತಪಕ್ಷ ಮಾತ್ರವಲ್ಲದೆ, ವಿರೋಧಪಕ್ಷಗಳಿಂದಲೂ ಮಾತು ತೆಗೆದುಕೊಂಡು ಬಂದರು.

ಕರ್ನಾಟಕ ಏಕೀಕರಣದ ಹೋರಾಟದ ನಿಟ್ಟಿನಲ್ಲಿ ಸ್ವಾತಂತ್ರ್ಯ ಬಂದ ದಿನಗಳಲ್ಲಿ ತಾವು ನೆಹರೂ, ಸರ್ದಾರ್ ಪಟೇಲ್ ಮುಂತಾದವರುಗಳೊಡನೆ ಆಡಿದ ಮಾತುಕತೆ, ನಂತರ ಮೈಸೂರು ರಾಜರು ಭಾರತದ ಒಕ್ಕೂಟಕ್ಕೆ ಸೇರಲು ಮಾಡುವತ್ತ ಹೋರಾಟ, ಕೆಂಗಲ್ ಹನುಮಂತಯ್ಯನವರ ವಿಶಾಲ ಮೈಸೂರಿಗೆ ಸೇರಲು ಪ್ರಾಂತ್ಯಗಳ ಪ್ರತಿನಿಧಿಗಳಿಗೆ ಆಹ್ವಾನ, ಆಂಧ್ರದಲ್ಲಿ ಏಕೀಕರಣಕ್ಕೆ ಆದ ಉಪವಾಸ ಸತ್ಯಾಗ್ರಹದ ದುರ್ಘಟನೆ, ನಂತರ ಭಯಭೀತರಾದ ನೆಹರೂ ಅವರಿಂದ ಕರ್ನಾಟಕ ನಿರ್ಮಾಣದ ನಿರ್ಧಾರ ಇತ್ಯಾದಿ ಪ್ರತೀ ವಿವರಗಳೂ ಅವರ ನೆನಪಲ್ಲಿ ಕೊನೆಯವರೆಗೆ ಅಚ್ಚಳಿಯದೆ ಉಳಿದಿದ್ದವು. "ಗಾಂಧೀ ಮತ್ತು ಅಂಬೇಡ್ಕರ್ ಅವರುಗಳಲ್ಲಿ ಭಿನ್ನಾಭಿಪ್ರಾಯ ಇತ್ತೇ ವಿನಃ ವಿರೋಧಿತ್ವ ಇರಲಿಲ್ಲ" ಎನ್ನುತ್ತಿದ್ದ ದೊರೆಸ್ವಾಮಿ ಅವರು ಅಂಬೇಡ್ಕರ್ ಅವರು ಬಂಗಾಳದಲ್ಲಿ ಚುನಾವಣೆಯಲ್ಲಿ ಸೋತರೆಂಬ ಕಾರಣದಿಂದ ನೆಹರೂ ಅವರು, ಅವರನ್ನು ಯಾವುದಕ್ಕೂ ಪರಿಗಣಿಸದಿದ್ದಾಗ, ಗಾಂಧೀ ಅವರು "ಅಂಬೇಡ್ಕರ್ ಇಲ್ಲದೆ ನೀನು ಸಂವಿಧಾನ ರಚನೆಗೆ ಮತ್ಯಾರೂ ಶ್ರೇಷ್ಠರನ್ನು ಅರಸುವುದು ಸಾಧ್ಯವಿಲ್ಲ ಎಂದು ಮನದಟ್ಟು ಮಾಡಿಸಿ ಅಂಬೇಡ್ಕರ್ ಅವರಿಂದ ಮಹತ್ಕಾರ್ಯ ಆಗುವಲ್ಲಿ ಪ್ರಮುಖ ಪಾತ್ರವಹಿಸಿದರು" ಎಂದು ನುಡಿಯುತ್ತಿದ್ದರು.

"ನನಗೆ ನಾನು ಬದುಕಿದ ರೀತಿಯಲ್ಲಿ ಸಂತೃಪ್ತಿಯಿದೆ. ಏನೋ ಒಂದಷ್ಟು ಮಾಡಿದ್ದೇನೆ, ಬದುಕನ್ನು ಯೋಗ್ಯವಾಗಿ ಬಾಳಿದ ಭಾವವಿದೆ" ಎಂದು ದೊರೆಸ್ವಾಮಿ ನುಡಿಯುತ್ತಿದ್ದರು.

ಈ ಹಿರಿಯ ಬಾಳು 2021ರ ಮೇ 26ರಂದು ಅಂತ್ಯಗೊಂಡಿತು.

**(ಲೇಖನ ಕೃಪೆ : ನಮ್ಮ ಕನ್ನಡ ಸಂಪದ, ಫೇಸ್ ಬುಕ್ ಪುಟ)**

■



# ಯುವ ಸಮುದಾಯಕ್ಕೆ ಗಾಂಧಿ ...

**'ಯುವ ಸಮುದಾಯಕ್ಕೆ ಗಾಂಧಿ' ಎಂಬ ವಿಭಿನ್ನ ಪ್ರಯತ್ನ**

ಗಾಂಧೀಜಿಯವರ ತತ್ವಗಳು ಮತ್ತು ಸಿದ್ಧಾಂತವನ್ನು ಪ್ರಚುರ ಪಡಿಸಲು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಅನೇಕ ಗಮನಾರ್ಹ ಕಾರ್ಯಕ್ರಮಗಳನ್ನು ದಶಕಗಳಿಂದ ರೂಪಿಸಿ ಅನುಷ್ಠಾನಗೊಳಿಸುತ್ತಿದೆ . ಆಧುನಿಕ ಯುಗದ ಯುವ ಸಮುದಾಯಕ್ಕೆ ಗಾಂಧಿಯನ್ನು ಪರಿಚಯಿಸಲು ಇದ್ದ ಕೊರತೆಯನ್ನು ನೀಗಿಸಲು " ಯುವ ಸಮುದಾಯಕ್ಕೆ ಗಾಂಧಿ " ಎನ್ನುವ ಹೊಸ ಕಾರ್ಯಕ್ರಮವನ್ನು ಈಗ ಗಾಂಧಿಭವನ ಕಾರ್ಯರೂಪಕ್ಕೆ ತರುತ್ತಿದೆ .

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಾರ್ಯಾಧ್ಯಕ್ಷರಾದ ಎನ್ ಆರ್ ವಿಶುಕುಮಾರ್ ಅವರ ಕಲ್ಪನೆಯಲ್ಲಿ ಆರಂಭಗೊಂಡ ಈ ಕಾರ್ಯಗಾರಕ್ಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪದಾಧಿಕಾರಿಗಳ ವಿಪುಲ ಸಹಕಾರ ಇತ್ತು. ಕಾರ್ಯಗಾರದ ನಿರ್ದೇಶಕರಾಗಿ ವಿಜಯ್ ಹನಕೆರೆ ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಸಿನಿಮಾ ಲೇಖಕ ಅನಂತ್ ಶಾಂದ್ರೇಯಾ ಮತ್ತು ಸಾಮಾಜಿಕ ಕಾರ್ಯಕರ್ತ ಜಗದೀಶ್ ಅವರಿಗೆ ಜವಾಬ್ದಾರಿಯನ್ನು ವಹಿಸಲಾಗಿತ್ತು.

ಅತಿಥಿ ಸಂಪನ್ಮೂಲ ವ್ಯಕ್ತಿಗಳಾಗಿ ರಂಗಕರ್ಮಿ ಶ್ರೀಪಾದ ಭಟ್, ಹಿರಿಯ ಆಕಾಶವಾಣಿ ಉದ್ಘೋಷಕಿ ಬಿ.ಕೆ. ಸುಮತಿ, ಚಿಂತಕರಾದ ಕೆ.ಪುಟ್ಟಸ್ವಾಮಿ ಮತ್ತು ಸರ್ವೆಂಟ್ಸ್ ಆಫ಼ ಇಂಡಿಯಾ ಸಂಸ್ಥೆಯ ಓಂ ಶಿವಪ್ರಕಾಶ್ ಜೊತೆಯಾದರು.

ಏಪ್ರಿಲ್ 25,26,27 ರಂದು ನಡೆದ ಈ ಮೂರು ದಿನಗಳ ಕಾರ್ಯಗಾರವನ್ನು ಗಾಂಧಿ ವಿಚಾರಗಳನ್ನು ಅರಿತುಕೊಳ್ಳುವುದು ಮತ್ತು ಅವುಗಳನ್ನು ಆಧುನಿಕ ಯುಗಕ್ಕೆ ಯುವಕರಿಂದಲೇ ಪ್ರಚಾರ ಮಾಡುವ ಪ್ರಯೋಗಗಳನ್ನು ಮಾಡಲಾಯಿತು. ಬಹುತೇಕ ಕರ್ನಾಟಕದ ಎಲ್ಲಾ ಭಾಗಗಳಿಂದ ಬಂದಿದ್ದ ವಿದ್ಯಾರ್ಥಿಗಳು ಮತ್ತು ಯುವಜನರು ಈ ಕಾರ್ಯಗಾರದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಮೊದಲ ದಿನದ ಕಾರ್ಯಕ್ರಮವು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ವೋಡೆ ಪಿ. ಕೃಷ್ಣ ಅವರ ಚಾಲನೆಯಿಂದ ಆರಂಭವಾಯಿತು. ಅವರು "ಯುವಜನರು ಇಂದು ಈ ಕಾರ್ಯಕ್ರಮಕ್ಕೆ ಮಾತ್ರ ಬಂದಿರುವಿರಿ ಎಂದು ತಿಳಿಯಬಾರದು, ನೀವು ಇನ್ನು ಮುಂದೆ ಗಾಂಧಿ ಭವನದ



ರಂಗಕರ್ಮಿ ಶ್ರೀಪಾದ ಭಟ್ ಅವರಿಂದ ಉಪನ್ಯಾಸ

ಮಕ್ಕಳು, ಅದು ಯಾವಾಗಲೂ ನಿಮಗೆ ತೆರೆದಿರುತ್ತದೆ. ಈ ಮೂರೂ ದಿನಗಳೂ ಪ್ರತಿ ಕ್ಷಣವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಿ, ಗಾಂಧೀಜಿಯವರ ಬಗೆಗೆ ಯಾವುದೇ ತರಹದ ಪ್ರಶ್ನೆಗಳು ಇದ್ದರೂ ಮುಜುಗರವಿಲ್ಲದೇ ಕೇಳಿ ಪರಿಹರಿಸಿಕೊಳ್ಳಿ" ಎಂದು ಕಿವಿ ಮಾತು ಹೇಳಿದರು. ತಾನು ಯುವಕನಾಗಿದ್ದಾಗ ಕಾಲೇಜು ರಜೆಯೊಂದರಲ್ಲಿ ಸುದೀರ್ಘವಾಗಿ ಓದಿದ್ದ ಗಾಂಧೀಜಿಯವರ ಪುಸ್ತಕಗಳೆಲ್ಲವನ್ನೂ ನೆನಪು ಮಾಡಿಕೊಂಡು ಶಿಬಿರಾರ್ಥಿಗಳಲ್ಲಿ ರೋಮಾಂಚನ ಮೂಡಿಸಿದರು.

ಕಾರ್ಯಾಗಾರದ ಮೊದಲ ಪ್ರಯೋಗವಾದ "ದೃಶ್ಯ ಸಂಯೋಜನೆಯ ರಂಗಾತ್ಮಕತೆ" ವಿಷಯದ ಬಗ್ಗೆ ರಂಗಕರ್ಮಿ ಶ್ರೀಪಾದ ಭಟ್ ಅವರು ಕಾರ್ಯಾಗಾರದ ಯುವಕರಿಗೆ ದೇಹ, ಮನಸ್ಸು ಮತ್ತು ಕಿವಿಗಳಿಗೆ ಹೇಗೆ ಜಾಗೃತವಾಗಿ ಇರಬೇಕು ಎನ್ನುವುದನ್ನು ವಿವರಿಸುತ್ತಾ, ಅನೇಕ ಚಟುವಟಿಕೆಗಳನ್ನು ಮಾಡಿಸಿದರು. ಸಾಹಿತ್ಯ ಮತ್ತು ಕಲಾಪ್ರಚಾರದಲ್ಲಿ ಬದುಕುವವರು ತಾವು ಸ್ವಯಂ ಶಿಸ್ತು ಪಾಲನೆ ಮಾಡುವುದರ ಜೊತೆಗೆ ಸುತ್ತಮುತ್ತಲಿನ ಪರಿಸರವನ್ನು ಹೇಗೆ ಸೂಕ್ಷ್ಮವಾಗಿ ಗಮನಿಸಬೇಕು ಎನ್ನುವುದರ ಅರಿವು ಮೂಡಿಸುವ ಬಗ್ಗೆ ಅವರ ಚಟುವಟಿಕೆಗಳು ರೂಪುಗೊಂಡಿದ್ದವು.

ಮೊದಲ ದಿನದ ಎರಡನೇ ಪ್ರಯೋಗವಾಗಿ ಆಕಾಶವಾಣಿಯ ಹಿರಿಯ ಉದ್ಘೋಷಕಿಯವರಾದ ಬಿಕೆ ಸುಮತಿಯವರು "ಆಡಿಯೋ ಮಾಧ್ಯಮದಲ್ಲಿ ಗಾಂಧೀಜಿ ಸಾಹಿತ್ಯದ ಸಾಧ್ಯತೆಗಳು" ಎನ್ನುವ ವಿಷಯದ ಬಗ್ಗೆ ಅನೇಕ ಒಳಹುಗಳನ್ನು ನೀಡಿದರು. ಆಡಿಯೋ ಮಾಧ್ಯಮದ ವಿಶಾಲತೆ ಮತ್ತು ಸೂಕ್ಷ್ಮತೆಗಳನ್ನು ವಿವರಿಸುತ್ತಾ ಹಲವಾರು ಆಡಿಯೋ ತುಣುಕುಗಳನ್ನು ಶಿಬಿರಾರ್ಥಿಗಳಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟರು.



ಬಿ ಕೆ ಸುಮತಿ ಅವರಿಂದ ಉಪನ್ಯಾಸ

ಮೊದಲ ದಿನದ ಮೂರನೇ ಭಾಗದಲ್ಲಿ ಮಕ್ಕಳು ತಾವು ಓದಿರುವ ಸಾಹಿತ್ಯಗಳ ಮೂಲಕ ಗಾಂಧೀಜಿಯನ್ನು ಗ್ರಹಿಸಿರುವ ಬಗೆಯನ್ನು ಹೇಳಿಕೊಂಡರು. ಸಂಪನ್ಮೂಲ ವ್ಯಕ್ತಿಗಳಾದ ಅನಂತ್ ಶಾಂದ್ರೆಯ ಮತ್ತು ಜಗದೀಶ್ ಅವರ ಜೊತೆಯಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ರಾತ್ರಿ ಹತ್ತು ಗಂಟೆಯಾದರೂ ಶಿಬಿರಾರ್ಥಿಗಳು ಗಾಂಧಿ ವಿಚಾರಗಳ ಗುನುಗುನುಗಳಲ್ಲೇ ಮುಳುಗಿ ಹೋಗಿದ್ದು ಗಾಂಧಿ ಭವನದ ಪರಿಸರಕ್ಕೆ ಮೆರುಗು ತಂದಿತ್ತು.

ಎರಡನೇ ದಿನ ಕಾರ್ಯಗಾರದಲ್ಲಿ ರಿಚರ್ಡ್ ಅಟೆನ್ ಬರೋ ನಿರ್ದೇಶನದ ಬೆನ್ ಕಿಂಗ್ ಸ್ಲೇ ಅಭಿನಯದ ವಿಶ್ವವಿಖ್ಯಾತ "ಗಾಂಧಿ" ಚಲನಚಿತ್ರವನ್ನು ಪ್ರದರ್ಶನ ಮಾಡಲಾಯಿತು. ಹಲವಾರು ವಿರಾಮಗಳನ್ನು ನೀಡಿ ಸಿನಿಮಾದ ಚಿತ್ರಕಥೆ ಮತ್ತು ಪಾತ್ರಗಳನ್ನು ಸವಿವರವಾಗಿ ಚರ್ಚಿಸಲಾಯಿತು. ಸಿನಿಮಾ ಚಿಂತಕರಾದ ಕೆ. ಪುಟ್ಟಸ್ವಾಮಿಯವರು "ಗಾಂಧಿ" ಚಲನಚಿತ್ರ ನಿರ್ಮಾಣಗೊಂಡ ಇತಿಹಾಸ ಮತ್ತು ಅದರ ವ್ಯಾಪ್ತಿಯನ್ನು



ಶಿಬಿರದ ಸಂಚಾಲಕರಾದ ವಿಜಯ್ ಹನಕೆರೆ, ಸಹ ಸಂಚಾಲಕರಾದ ಅನಂತ್ ಶಾಂದ್ರೆಯ, ಜಗದೀಶ್ ಅವರಿಂದ ಶಿಬಿರಾರ್ಥಿಗಳೊಡನೆ ಸಂವಾದ



ಸಿನಿಮಾ ಚಿಂತಕ ಕೆ ಪುಟ್ಟಸ್ವಾಮಿಯವರಿಂದ ಉಪನ್ಯಾಸ ಮತ್ತು ಸಂವಾದ



ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ಎಸ್ ಜಿ ಸಿದ್ಧರಾಮಯ್ಯ ಅವರಿಂದ ದಕ್ಷಿಣ ಆಫ್ರಿಕಾ ಪ್ರವಾಸ ಅನುಭವ ಹಂಚಿಕೆ

ಶಿಬಿರಾರ್ಥಿಗಳಿಗೆ ತಿಳಿಸಿಕೊಟ್ಟರು. ಶಿಬಿರಾರ್ಥಿಗಳಿಗೆ ತಾವು ಓದಿನ ಮೂಲಕ ಅರಿತುಕೊಂಡಿದ್ದ ಗಾಂಧಿ ಸಾಹಿತ್ಯದ ಮೂಲಕ "ಗಾಂಧಿ"ಚಲನಚಿತ್ರವನ್ನು ಕಾಣುತ್ತಾ, ವಿಮರ್ಶೆ ಮಾಡುವುದು ವಿಶೇಷ ಅನುಭವವಾಗಿತ್ತು.

ಕಾರ್ಯಾಗಾರಕ್ಕೆ ಆಗಮಿಸಿದ್ದ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ಎಸ್ ಜಿ ಸಿದ್ಧರಾಮಯ್ಯನವರು ಗಾಂಧಿ ಎನ್ನುವ ಸಾಧಾರಣ ಬ್ಯಾರೆಸ್ಟರ್ ಒಬ್ಬ ದಕ್ಷಿಣಆಫ್ರಿಕಾಗೆ ಹೋದದ್ದು ಅಲ್ಲಿಂದ ಮಹಾತ್ಮನಾಗಿ ಭಾರತಕ್ಕೆ ಬಂದ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳಿದರು. ಜೊತೆಗೆ ತಮ್ಮ ದಕ್ಷಿಣ ಆಫ್ರಿಕಾದ ಭೇಟಿಯ ಸಮಯದಲ್ಲಿ ಆಫ್ರಿಕಾದವರಿಗೆ ಗಾಂಧೀಜಿಯ ಬಗ್ಗೆ ಇರುವ ಅಪಾರ ಅಭಿಮಾನವನ್ನು ಕಂಡು ಹೇಗೆ ಬೆರಗಾದರು ಎನ್ನುವುದನ್ನು ವ್ಯಕ್ತಪಡಿಸಿದರು.

"ಅಂತರ್ಜಾಲದಲ್ಲಿ ಗಾಂಧಿ ಮಾಹಿತಿ ಸಂಗ್ರಹಣೆ" ಬಗ್ಗೆ ಸರ್ವೆಂಟ್ಸ್ ಆಫ಼ ಇಂಡಿಯಾದ ಓಂ ಶಿವಪ್ರಕಾಶ್ ಅವರು ವಿವರವಾಗಿ ತಿಳಿಸಿಕೊಟ್ಟರು. ಗಾಂಧಿ ಭವನದಲ್ಲೇ ಕಾರ್ಯನಿರತವಾಗಿರುವ ತಮ್ಮ ತಂಡವು ಹೇಗೆ ಸಾವಿರಾರು ಪುಸ್ತಕಗಳನ್ನು ಸ್ಕ್ಯಾನಿಂಗ್ ಮಾಡುವ ಮೂಲಕ ಡಿಜಿಟಲೀಕರಣ ಮಾಡಲಾಯಿತು ಎಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟರು. ಅಂತರ್ಜಾಲದಲ್ಲಿ ಲಭ್ಯವಿರುವ ಗಾಂಧೀಜಿಯ ಸಾಹಿತ್ಯ, ಚಿತ್ರಗಳು, ವಿಡಿಯೋಗಳು ಮತ್ತು ಅವುಗಳನ್ನು ತಕ್ಷಣಕ್ಕೆ ಹುಡುಕುವ ಬಗೆಯನ್ನು ತಿಳಿಸಿಕೊಟ್ಟರು.

ಎರಡನೇ ದಿನ ವಿಭಿನ್ನವಾದ ■



ಗಾಂಧಿ ಭವನದಲ್ಲಿರುವ ಡಿಜಿಟಲ್ ಸ್ಕ್ಯಾನಿಂಗ್ ಕೇಂದ್ರ



ಓಂ ಶಿವಪ್ರಕಾಶ್ ಅವರಿಂದ ಮಾಹಿತಿ ವಿವರಣೆ



ರಂಗಕರ್ಮಿ ಶ್ರೀಪಾದ ಭಟ್ ಅವರಿಂದ ಪ್ರಾಯೋಗಿಕ ಚಟುವಟಿಕೆ

ಚಟುವಟಿಕೆಯನ್ನು ಮಾಡಲಾಯಿತು. ಅನಿವಾಸಿ ಭಾರತೀಯರಾದ ಅಟ್ಲಾಂಟ ಪ್ರಕಾಶ್ ಮತ್ತು ಜಯಸಿಂಹ ಗೌಡ ಅವರೊಂದಿಗೆ ಕ್ಲಬ್ ಹೌಸ್ ಮೂಲಕ ಚರ್ಚೆ ಮಾಡಿದರು. ಇದು ಶಿಬಿರಾರ್ಥಿಗಳಿಗೆ ಇಂಥಾ ಮೊದಲ ಅನುಭವವಾಗಿತ್ತು. ಹತ್ತಾರು ಪ್ರಶ್ನೆಗಳನ್ನು ಕೇಳಿದ ಮಕ್ಕಳು, ವಿದೇಶದಲ್ಲೂ ಗಾಂಧೀಜಿಯವರ ಬಗೆಗೆ ಇರುವ ಅಪಾರ ಜನಪ್ರಿಯತೆ ಮತ್ತು ಹಲವಾರು ಐತಿಹಾಸಿಕ ಪ್ರಮುಖರೇ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ಕಥೆಗಳನ್ನು ಕೇಳಿ ಪುಳಕಿತರಾದರು.

ಮೂರನೆಯ ದಿನ ಶಿಬಿರಾರ್ಥಿಗಳು ಸಂಗ್ರಹಿಸಿದ್ದ ಹಲವಾರು ಮಾಹಿತಿಗಳನ್ನು ರೀಲ್ಸ್, ಆಡಿಯೋ, ಡಾಕುಮೆಂಟರಿ ಮತ್ತು ಸಂದರ್ಶನಗಳ ರೂಪಕ್ಕೆ ಹೇಗೆ ತರುವುದು ಎನ್ನುವ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಲಾಯಿತು. ಗಾಂಧೀಜಿಯ ಹೇಳಿಕೆಗಳನ್ನು ಪೋಸ್ಟರ್ ಮಾಡುವ ಬಗೆ, ಮೊಬೈಲ್ ಮತ್ತು ಲ್ಯಾಪ್ ಟಾಪ್ ಗಳನ್ನು ಬಳಸುವಾಗ ಅವಶ್ಯವಾಗುವ ಅಪ್ಲಿಕೇಷನ್ ಗಳನ್ನು ಶಿಬಿರಾರ್ಥಿಗಳ ಮೊಬೈಲ್ ನಲ್ಲಿ ಇನ್ ಸ್ಟಾಲ್ ಮಾಡಿಸಿ, ಕಾರ್ಯಗಾರದಲ್ಲಿಯೇ ಅವುಗಳ ಬಳಕೆ ಮಾಡುವ ವಿಧಾನಗಳನ್ನು ಹೇಳಿಕೊಡಲಾಯಿತು.

ಸಂಪನ್ಮೂಲ ವ್ಯಕ್ತಿಗಳಾದ ಅನಂತ್ ಶಾಂದ್ರೆಯ ಮತ್ತು ಜಗದೀಶ್ ಅವರನ್ನು ಗಾಂಧಿ ವಿಚಾರಗಳ ಬಗ್ಗೆ ಶಿಬಿರಾರ್ಥಿಗಳೇ ಸಂದರ್ಶನ ಮಾಡಿ, ಅವುಗಳನ್ನು ಚಿತ್ರಿಕರಿಸಿ ನಂತರ ಎಡಿಟಿಂಗ್ ಮಾಡುವ ಸರಳ ವಿಧಾನಗಳನ್ನು ವಿವರಿಸಲಾಯಿತು.

ಕಾರ್ಯಾಗಾರದ ಕೊನೆಯಲ್ಲಿ ಪ್ರತಿ ಶಿಬಿರಾರ್ಥಿಯೂ ತಮ್ಮ ತಮ್ಮ ಅನುಭವಗಳನ್ನು ಭಾವನಾತ್ಮಕವಾಗಿ ಹೇಳಿಕೊಂಡರು. ಗಾಂಧೀಜಿಯವರ ಬಗೆಗೆ ಅವರಿಗಿದ್ದ ಅನುಮಾನಗಳು, ಅಸ್ಪಷ್ಟ ಕತೆಗಳ ವಿಶ್ಲೇಷಣೆ, ಗಾಂಧೀಜಿಯವರ ಆರ್ಥಿಕತೆ, ಸಮಾನತೆಯ ತತ್ವಗಳು ಹೀಗೆ ಹತ್ತು ಹಲವಾರು ವಿಚಾರಗಳ ಬಗೆಗೆ ಚರ್ಚೆಯಲ್ಲಿ ಮುಳುಗಿಹೋದರು.

ಒಟ್ಟಾರೆ ಮೂರು ದಿನಗಳ ಕಾರ್ಯಗಾರದಲ್ಲಿ ಗಾಂಧಿಭವನದಲ್ಲಿ ಶಿಬಿರಾರ್ಥಿಗಳ ಓಡಾಟಗಳು, ಗಾಂಧೀಜಿ ಸಾಹಿತ್ಯದ ವಿಭಿನ್ನತೆಗಳ ಚರ್ಚೆಗಳು, ಹಿರಿಯ ಸಾಹಿತಿಗಳೊಂದಿಗಿನ ಒಡನಾಟದಲ್ಲಿ ಬೆರೆತು ಹೋಗಿದ್ದುದು, ಮನೆಯಲ್ಲಿ ನಡೆವ ಶುಭ ಸಮಾರಂಭವೊಂದರ ಚಿತ್ರವನ್ನು ಕೊಡುವಂತಿತ್ತು.

ವರದಿ : ವಿಜಯ್ ಹನಕೆರೆ

## ಶಿಬಿರಾರ್ಥಿಗಳ ಅನುಭವ ಪತ್ರಗಳು :

ಯುವ ಸಮುದಾಯಕ್ಕೆ ಗಾಂಧಿ* ಎಂಬ ವಿಷಯದ ಕುರಿತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರಿನ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಮೂರು ದಿನಗಳ ಸನಿವಾಸ ಕಾರ್ಯಾಗಾರದ ಅನುಭವಗಳು ,ಜೀವನ ಪರ್ಯಂತವೂ ಓರ್ವ ಶಿಕ್ಷಕಿಯಾಗಿ ಅನಿವಾರ್ಯವಾಗಿ ರೂಢಿಸಿಕೊಳ್ಳಬೇಕಾದ ಹಲವಾರು ಪರಿವರ್ತನೆಯ ಅಂಶಗಳನ್ನು ನನಗೆ ಕೊಡುಗೆಯಾಗಿ ನೀಡಿವೆ .

ಮೊದಲ ದಿನವೇ ಗಾಂಧೀಭವನವು ನನಗೆ ತವರು ಮನೆಯಾಗಿ ದೊರೆತಂತೆ ಭಾಸವಾಯಿತು . ಕಾರ್ಯಾಗಾರಕ್ಕೆ ಚಾಲನೆ ನೀಡಿದ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ವೊಡೇ. ಪಿ. ಕೃಷ್ಣ ಅವರು " ಒಮ್ಮೆ ನೀವು ಈ ಗಾಂಧೀಭವನಕ್ಕೆ ಮಕ್ಕಳಾಗಿ ಬಂದಿದ್ದೀರಿ ಎಂದರೆ ನೀವು ಸದಾ ಗಾಂಧೀಭವನದ ಮಕ್ಕಳೇ ಆಗಿರುತ್ತೀರಿ, ನಿಮಗೆ ಬರಬೇಕೆನಿಸಿದ ಸಂದರ್ಭ ಬಂದಾಗಲೆಲ್ಲ ನೀವು ಧಾರಾಳವಾಗಿ ಈ ಗಾಂಧಿ ಭವನಕ್ಕೆ ಬರಬಹುದು " ಎಂದು ಹೇಳಿದ ಮಾತು ಅಕ್ಷರಶಃ ನಮಗೆ ಗಾಂಧಿಯವರನ್ನರಿಯಲು ದೊರೆತ ತವರುಮನೆಯಂತೆಯೇ ಭಾಸವಾಯಿತು

ಶಿಬಿರದ ಮೊದಲ ದಿನ ಸಂಜೆ ಶಿಬಿರ ನಿರ್ದೇಶಕರೊಂದಿಗೆ ನಡೆದ ಚರ್ಚೆಯಲ್ಲಿ ಗಾಂಧೀಜಿಗೆ ಸಂಬಂದಿಸಿದ ಅನೇಕ ವಿಷಯಗಳು ಮತ್ತು ಗೊಂದಲಗಳು ಪರಿಹರಿಸಲ್ಪಟ್ಟವು.

ಕಾರ್ಯಾಗಾರದಲ್ಲಿ ಸಂದರ್ಶನ ನಡೆಸುವ ವಿಷಯದ ಕುರಿತು ಪ್ರಾರಂಭದಲ್ಲಿ ಪೂರ್ವ ತಯಾರಿ ಹೇಗಿರಬೇಕು? ಪ್ರಶ್ನೆಗಳನ್ನು ಕೇಳುವವರು ವಹಿಸಬೇಕಾದ ಎಚ್ಚರಿಕೆಗಳು, ಅದನ್ನು ಚಿತ್ರೀಕರಿಸುವವರು ವಹಿಸಬೇಕಾದ ಎಚ್ಚರಿಕೆಗಳು ಹಾಗೂ ಆಡಿಯೋ ನಿರ್ವಾಹಕರು ವಹಿಸುವ ಎಚ್ಚರಿಕೆಯ ಅಂಶಗಳನ್ನು ಶಿಬಿರದ ಸಂಚಾಲಕರಾದ ವಿಜಯ್ ಹನಕೆರೆ , ಶಿಬಿರ ಸಂಪನ್ಮೂಲ ಪರಿಣಿತರಾದ ಅನಂತ್ ಶಾಂದ್ರೆಯ , ಮತ್ತು ಜಗದೀಶ್ ಅವರು ಪ್ರಾಯೋಗಿಕವಾಗಿ ಮನವರಿಕೆ ಮಾಡಿಕೊಟ್ಟರು.

ಆಡಿಯೋ ವಿಡಿಯೋ ತಂತ್ರಜ್ಞಾನದ ಜೊತೆಗೆ ಪೋಸ್ಟರ್ ಕುರಿತ ವಿಶೇಷ ಆಪ್ ಗಳ ಬಗ್ಗೆ ಮತ್ತು ಇವುಗಳ ಕಾರ್ಯ ನಿರ್ವಹಣೆಯ ಮಾಹಿತಿಗಳನ್ನು ಸಹ ತಿಳಿಸಲಾಯಿತು .

ಮೂರು ದಿನಗಳಲ್ಲಿ ಮಾತನಾಡಿದ ವಿಷಯ ಪರಿಣಿತರಾದ ಶ್ರೀಪಾದ ಭಟ್ , ಬಿ ಕೆ ಸುಮತಿ , ಕೆ ಪುಟ್ಟಸ್ವಾಮಿ ,ಎಸ್ ಜಿ ಸಿದ್ಧರಾಮಯ್ಯ ,ಓಂ ಶಿವಪ್ರಕಾಶ್ ತಮ್ಮ ಅನುಭಗಳನ್ನು ಸೊಗಸಾಗಿ ಮನ ಮುಟ್ಟುವಂತೆ ತಿಳಿಸಿದರು .

ಗಾಂಧಿ ಭವನದ ವ್ಯವಸ್ಥಾಪಕರಾದ ತನುಜ್ ಆರಾಧ್ಯ ಅವರಲ್ಲಿನ ತಾಳ್ಮೆ ಮತ್ತು ನಡವಳಿಕೆ ನಮ್ಮೆಲ್ಲರ ಗಮನ ಸೆಳೆಯಿತು . ಗಾಂಧೀಜಿಯವರ ವಿಚಾರ ಪ್ರಭಾವವೇ ಅವರ ಸಹನಶೀಲ ವ್ಯಕ್ತಿತ್ವಕ್ಕೆ ಕಾರಣವಿರಬಹುದು ಎನ್ನುವ ಭಾವನೆ ಮೂಡಿತು .

ಒಟ್ಟಿನಲ್ಲಿ ಗಾಂಧೀಭವನದಲ್ಲಿ ನಡೆದ ಈ ಮೂರು ದಿನಗಳ ಶಿಬಿರದಲ್ಲಿ ನಾ ಕಲಿತ ಅಂಶಗಳು ಜೀವನದುದ್ದಕ್ಕೂ ನಾನು ರೂಢಿಸಿಕೊಳ್ಳಲು ಸಹಾಯಕವಾಗುವ ಅತಿ ಅವಶ್ಯಕ ಅಂಶಗಳು ಎನ್ನುವುದು ನನ್ನ ಪರಿಭಾವ.

ಶಿಬಿರದ ನಿರ್ದೇಶಕರಾದ ವಿಜಯ್ ಹನಕೆರೆ ಇವರಿಗೆ ತುಂಬು ಹೃದಯದ ಧನ್ಯವಾದಗಳು .

**ಮಮತ. ಕೆ, ಶಿಬಿರಾರ್ಥಿ**

### ನನ್ನ ನಿದ್ದೆ ಕದ್ದ ಗಾಂಧಿ

ಅಂದು ಸಮಯ ರಾತ್ರಿ 10ಘಂಟೆ, ರೈಲಿನ ಜಂಕ್ಷನ್‌ಗಳಲ್ಲಿ ಕೇಳಿ ಬರುವ ಮಹಿಳಾ ಧ್ವನಿಯಲ್ಲಿ ಗಾಂಧಿ ಗಾಂಧಿ, ಗಾಂಧಿ ಎಂಬ ಶಬ್ದ ಕಿವಿಗೆ ಬಿತ್ತು. ನನಗೆ ಎಲ್ಲಿಲ್ಲದ ಆಶ್ಚರ್ಯ!! ಯಾಕೆ ಇಂದು ಗಾಂಧಿ ? ಮುಂದೆ ಹೇಳ್ತಿನಿ ಕೇಳಿ.

ಕರಮಚಂದ ಅವರು ತಮ್ಮ ಸುಧೀರ್ಘ 79 ವರ್ಷದಲ್ಲಿ ಸುಮಾರು 60 ಸಾವಿರಕ್ಕೂ ಹೆಚ್ಚು ಪತ್ರಗಳನ್ನು ಬರೆದಿದ್ದಾರೆ. ಅವರು ಪತ್ರ ಬರೆಯುತ್ತಿದ್ದದ್ದು ಸಾಮಾನ್ಯ ನಾಗರಿಕರಿಂದ ಹಿಡಿದು, ರಾಜಕಾರಣಿಗಳು, ಆಧ್ಯಾತ್ಮಿಕ ನಾಯಕರು, ಶತ್ರುಗಳಂತೆ ಕಂಡವರವರೆಗೂ ಬರೆಯುವ ಮೂಲಕ ತಮ್ಮ ವಿಚಾರವನ್ನು ಭಿತ್ತಿ ದೇಶದ ಅಭ್ಯುದಯ ಬಯಸಿದ ಮಹಾತ್ಮ .

"ಅಹಿಂಸಾ ಪರ ಧರ್ಮ", "ಸತ್ಯ ಅನ್ವೇಷಣೆ ", (My Experiments with Truth), "ಸೇವೆ ಮಾಡುವ ಕೈಗಳು ಪ್ರಾರ್ಥಿಸುವ ಮೊಗಕ್ಕಿಂತ ಶ್ರೇಷ್ಠ" ಮತ್ತು "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆಯಲೇಬೇಕು" ಹೀಗೆ ಗಾಂಧೀಜಿ ಅಹಿಂಸೆ, ಸತ್ಯ, ಸ್ವಾವಲಂಬನೆ, ಸರಳ ಬದುಕು ಮತ್ತು ಧಾರ್ಮಿಕ ಸಾಮರಸ್ಯಗಳತ್ತ ತಮ್ಮ ಚಿಂತನಯನ್ನು ಅನೇಕ ಚಳವಳಿಗಳ ಮೂಲಕ ಪ್ರಜೆಗಳಿಗೆ ತಲುಪಿಸಿದವರು . ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿ ವಕೀಲ ವೃತ್ತಿಯಿಂದ ಜನಸಾಮಾನ್ಯರಂತೆ ಬಾಳುತ್ತ , ಚರಕ ಎಂಬ ಆಯುದದಿಂದ ಬ್ರಿಟಿಷರನ್ನು ನಿಬ್ಬೆರಗುಗೊಳಿಸಿದವರು .

ಇಷ್ಟೆಲ್ಲಾ ವಿಷಯಗಳ ಅರಿಕೆಯಾಗಿದ್ದು ಡಿ.ಎಸ್.ನಾಗಭೂಷಣ ಅವರ–ಗಾಂಧಿ ಕಥನ, ಗಾಂಧೀಜಿ ಅವರ–ಆತ್ಮ ಕಥೆ ಅಥವಾ ನನ್ನ ಸತ್ಯಾನ್ವೇಷಣೆ, ಬಂದ್ಯೋಪಾಧ್ಯಾಯ ಅವರ–ಬಹುರೂಪಿ ಗಾಂಧಿಯಂತಹ ಅನೇಕ ಪುಸ್ತಕಗಳನ್ನು ನನಗೆ ಪರಿಚಯ ಮಾಡಿಕೊಟ್ಟದ್ದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ. ಇವರ ಆಯೋಜನೆಯ ಮೂರು ದಿನದ ಶಿಬಿರದಲ್ಲಿ ಗಾಂಧಿಯನ್ನು ರಾಷ್ಟ್ರಪಿತ ಎಂದು ಕರೆಯುವುದರ ಹಿಂದಿನ ಮರ್ಮವನ್ನು ಅರಿತೆನು.

ಇನ್ನು ಶಿಬಿರದ ಪ್ರಾರಂಭದ ದಿನದ ಮುಂಜಾನೆ– ಎಲ್ಲಿದಿರಾ? ಗಾಂಧಿ ಭವನಕ್ಕೆ ತಲುಪುವ ದಾರಿ ಸಿಕ್ಕಿತಾ .ಎಂಬುದರಿಂದ ಹಿಡಿದು ಶಿಬಿರ ಮುಕ್ತಾಯವಾದ ಮೇಲೆ ಮನೆಯನ್ನು ಸುರಕ್ಷಿತವಾಗಿ ತಲುಪಿದಿರಾ ಎಂದು ಕೇಳುವ ಮೂಲಕ ಶಿಬಿರಾರ್ಥಿಗಳ ಕಾಳಜಿ ವಹಿಸಿದ "ಯುವ ಸಮುದಾಯಕ್ಕೆ ಗಾಂಧಿ" ಶಿಬಿರದ ನಿರ್ವಾಹಕರಾದ ವಿಜಯ ಹನಕೆರೆ ಹಾಗೂ ತನುಜ್ ಅವರಿಗೆ ನನ್ನ ವಂದನೆಗಳು.

ಉತ್ತಮ ಆಹಾರ ಉದರಕ್ಕೆ, ಅತ್ಯುತ್ತಮ ಜ್ಞಾನ ಮಸ್ತಕಕ್ಕೆ ತಲುಪಿದ ಮೇಲೆ, ನನ್ನ ರೈಲು ಪ್ರಯಾಣದ ತುಕಡಿಕೆಯ ಮಧ್ಯ ಜಂಕ್ಷನ್‌ಲ್ಲಿ ರೈಲು ಮಾಹಿತಿ ಸೂಚನೆಯನ್ನು ನೀಡುವ ಮಹಿಳಾಧ್ವನಿಯಲ್ಲಿ ಗಾಂಧಿ ಗಾಂಧಿ, ಗಾಂಧಿ ಎಂಬ ಕೂಗು ಬಂದದ್ದು ಸಹಜಾನೆ ಅಲ್ಲವೇ !

ಈ ಮೂರುದಿನದ ಅಮೂಲ್ಯ ಶಿಬಿರವನ್ನು ಆಯೋಜನೆ ಮಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯವರಿಗೆ ನನ್ನ ಕೃತಜ್ಞತೆಗಳು.

**– ಸುಜಾತಾ.ಆರ್.ಮಾಮ್ಲೆಪಟ್ಟಣಶೆಟ್ಟರ, ಶಿಬಿರಾರ್ಥಿ**


# ಚಿ|ತ್ರಾ|ವ|ಳಿ



ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಡಾ . ಸಂಜೋಯ್ ಸಿಂಗ್ ಮತ್ತು ರಾಷ್ಟ್ರೀಯ ಗಾಂಧಿ ಮ್ಯೂಸಿಯಂ ನ ನಿರ್ದೇಶಕ ಎ ಅಣ್ಣಾಮಲೈ ಅವರು ಟಿಬೆಟ್‌ನ ಧರ್ಮಗುರು ದಲೈಲಾಮ ಅವರನ್ನು ಧರ್ಮ ಶಾಲಾದಲ್ಲಿ ಭೇಟಿ ಮಾಡಿ ಆಶೀರ್ವಾದ ಪಡೆದರು .




ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಯ ನೆರವು ಮತ್ತು ಮಾರ್ಗದರ್ಶನದಡಿಯಲ್ಲಿ ಏಪ್ರಿಲ್ ನ ದಿ: 28 ಹಾಗೂ 29 ರಂದು ಪುತ್ತೂರು ಹಾಗೂ ಸುಳ್ಯ ಇಲ್ಲಿ ಗಾಂಧೀ ವಿಚಾರ ವೇದಿಕೆ ಯ ಸಹಯೋಗದೊಂದಿಗೆ ಗಾಂಧೀ ಸಂವಾದ ಶೀರ್ಷಿಕೆ ಯಡಿಯಲ್ಲಿ ಕಾರ್ಯಕ್ರಮ ನೆರವೇರಿತು.





## ಎಲ್ಲರ ಗಾಂಧೀಜಿ: ಮಹಾತ್ಮ ಗಾಂಧೀಜಿಯವರ ಮಾತು, ಬರಹ, ಚಿಂತನೆ.

ಗಾಂಧೀಜಿ ಬರೆದ 124 ವೈವಿಧ್ಯಮಯ ಬರಹಗಳು ಹಾಗೂ 150 ಹೇಳಿಕೆಗಳನ್ನು ಒಳಗೊಂಡ 400 ಪುಟಗಳ ಪುಸ್ತಕ ಇದು. ಗಾಂಧೀ ಚಿಂತನೆಯ ಅಪೂರ್ವ ಮಿಂಚು, ಆಳ, ಗಾಂಭೀರ್ಯಗಳನ್ನು ಬಿಂಬಿಸುವ ಈ ಕನ್ನಡಾನುವಾದಗಳನ್ನು 'ಬಾಪೂ ಚಿಂತನೆ' ಪ್ರತಿ ತಿಂಗಳು ಪ್ರಕಟಿಸುತ್ತದೆ.

# ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರು

– ನಟರಾಜ್ ಹುಳಿಯಾರ್



**ತಾ**ನು ಯಾಕೆ ಮುಸ್ಲಿಮರನ್ನು ನಂಬುತ್ತೇನೆ ಎಂಬುದನ್ನು ತಮ್ಮ ಮಗನ ಉದಾಹರಣೆ ಸಮೇತ ಗಾಂಧೀಜಿ ವಿವರಿಸಿದ ಪ್ರಸಂಗ ಇದು:

'ನನ್ನ ಹಿರಿಮಗ ಹರಿಲಾಲ್ ಆಗಾಗ ಇಲ್ಲಿಗೆ ಬರುತ್ತಾನೆ. ಎಷ್ಟೋ ಬಾರಿ ತಾನು ಕೆಟ್ಟ ಸಂಗ ಮತ್ತು ಕೆಟ್ಟ ಚಟಗಳನ್ನು ಬಿಡುತ್ತೇನೆ ಎಂದು ಮಾತು ಕೊಟ್ಟಿದ್ದಾನೆ; ಆದರೆ ಒಮ್ಮೆ ಕೂಡ ಆತ ತನ್ನ ಮಾತು ಉಳಿಸಿಕೊಂಡಿಲ್ಲ, ಆದರೂ ಆತ ನಾಳೆ ಬಂದು ತನ್ನನ್ನು ತಾನು ಸುಧಾರಿಸಿಕೊಳ್ಳುವೆ ಎಂದು ಮಾತು ಕೊಟ್ಟರೆ ನಾನೇಕೆ ಸಿಟ್ಟಾಗಬೇಕು? ಆತ ತನ್ನ ಮಾತು ಉಳಿಸಿಕೊಳ್ಳುವುದನ್ನು ನಾನು ಪ್ರೋತ್ಸಾಹಿಸಬೇಕು. ಆಗ ಮಾತ್ರ ಆತ ಸುಧಾರಣೆಗೊಳ್ಳುತ್ತಾನೆ ಅನ್ನುವ ನಂಬಿಕೆ ಇರುತ್ತದೆ. ಅದೇ ರೀತಿ ಭಾರತದ ಮುಸ್ಲಿಮರು ಈ ದೇಶಕ್ಕೆ ನಿಷ್ಠೆ ತೋರಿಸುತ್ತೇವೆ ಎಂದಾಗ ನಾವು ಅವರನ್ನು ನಂಬಬೇಕು.'

...ನಾವು ಅಲ್ಪಸಂಖ್ಯಾತರನ್ನು ಪ್ರೀತಿಸಿದರೆ ಅವರೂ ನಮಗೆ ಪ್ರೀತಿಯನ್ನು ವಾಪಸ್ಸು ನೀಡುತ್ತಾರೆ. ನಾವು ಕೋಟಿಗಟ್ಟಲೆ ಅಲ್ಪಸಂಖ್ಯಾತರನ್ನು ಗುಲಾಮರನ್ನಾಗಿ ಮಾಡಿಕೊಳ್ಳಲು ಆಗುವುದೆ? ನಾವು ಏನನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಅಂದರೆ, ಯಾರು ಬೇರೆಯವರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದಕ್ಕೆ ಹೋಗುತ್ತಾನೋ ಸ್ವತಃ ಆತನೇ ಒಬ್ಬ ಗುಲಾಮ ಆಗುತ್ತಾನೆ...

...ಈಗ ಭಾರತ ಒಡೆದಿದ್ದರೂ ಕಾಂಗ್ರೆಸ್ ಒಂದು ದೇಶೀಯ ಸಂಘಟನೆ ಆಗಬೇಕು. ಕಾಂಗ್ರೆಸ್ ಬರೀ ಹಿಂದೂಗಳ ಸಂಘಟನೆ ಆಗಬಾರದು. ಭಾರತದ ಮುಸ್ಲಿಮರು ತಾವು ಯಾವತ್ತೂ ಈ ದೇಶದವರಲ್ಲ ಎಂದು ಎಂದಿಗೂ ಹೇಳಿಲ್ಲ. ಭಾರತದ ಒಕ್ಕೂಟವನ್ನು ಸ್ಥಾಪಿಸುವುದಕ್ಕೆ ಎಲ್ಲ ಧರ್ಮಗಳ ಜನರೂ ಒಗ್ಗೂಡಿದರು. ಹಾಗೆಯೇ ಪಾಕಿಸ್ತಾನದ ಧ್ವಜದ ವಿಷಯಕ್ಕೆ ಬಂದಾಗ, ಆ ಧ್ವಜ ಯಾವುದೇ ಬಣ್ಣ ಮತ್ತು ಶೈಲಿ ಹೊಂದಿರಲಿ, ಅದು ಪಾಕಿಸ್ತಾನದ ಎಲ್ಲ ಜನರನ್ನು

ಪ್ರತಿನಿಧಿಸಿದರೆ, ನಾನು ಅದಕ್ಕೆ ಗೌರವ ಸಲ್ಲಿಸುವೆ. ಹಾಗೆಯೇ ಎಲ್ಲ ಭಾರತೀಯರೂ ಅದಕ್ಕೆ ಗೌರವ ಸಲ್ಲಿಸಬೇಕು. ಭಾರತ ಮತ್ತು ಪಾಕಿಸ್ತಾನ ಯಾವತ್ತೂ ಕೂಡ ಶತ್ರುಗಳಾಗಬಾರದು...

ಇನ್ನು, ಹಿಂದೂ–ಮುಸ್ಲಿಂ ಒಗ್ಗಟ್ಟಿನ ಬಗ್ಗೆ :

ಈಗ ಮುಸ್ಲಿಂ ಲೀಗಿನ ಸದಸ್ಯರು ಕೂಡ ನಾವೆಲ್ಲ ಸಹೋದರರು ಎಂದು ಹೇಳುತ್ತಿದ್ದಾರೆ. ಈ ಎರಡೂ ಸಮುದಾಯಗಳು ಖಾದಿಯನ್ನು ಕೈಬಿಡದಿರಲಿ, ಗ್ರಾಮ ಕೈಗಾರಿಕೆಗಳಿಗೆ ನಷ್ಟ ಮಾಡದೇ ಇರಲಿ ಎಂದು ನಾವೆಲ್ಲ ಆಶಿಸೋಣ. ಹಾಗೆಯೇ ಹಿಂದೂಸ್ತಾನಿ ಭಾಷೆಯನ್ನು ನಾವೆಲ್ಲ ಹೇಗೆ ಬಿಡುವುದು? ಹಿಂದೂಗಳು ಅಸ್ಪೃಶ್ಯತೆ ಮತ್ತು ಜಾತಿ ಭೇದಭಾವ ಬಿಟ್ಟು ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳಬೇಕಾಗಿದೆ; ಮತ್ತು ಹಿಂದೂಗಳ ಬಗೆಗಿನ ದ್ವೇಷವನ್ನು ಬಿಟ್ಟು ಮುಸ್ಲಿಮರು ಕೂಡ ತಮ್ಮನ್ನು ತಾವು ಶುದ್ಧೀಕರಿಸಿಕೊಳ್ಳಬೇಕಾಗಿದೆ...

...ಭಾರತ ಮತ್ತು ಪಾಕಿಸ್ತಾನ ಪ್ರಾಂತ್ಯಗಳು ಸೌಹಾರ್ದತೆಯಿಂದ ಮತ್ತು ಸ್ನೇಹಿತರಾಗಿ ಬಾಳಬೇಕಾದರೆ, ಕೋಮುವಾದದ ಅಬ್ಬರ ಹಾಗೂ ಉದ್ದೇಶ ಎರಡನ್ನೂ ಮಟ್ಟ ಹಾಕಬೇಕು. ಹಾಗೆಯೇ , ಈಗಾಗಲೇ ಕೋಮುವಾದಿ ತಳಹದಿಯ ಮೇಲೆ ದೇಶಗಳನ್ನು ಆಯ್ಕೆ ಮಾಡಿಕೊಂಡವರು ತಮ್ಮ ತೀರ್ಮಾನಗಳನ್ನು ಮರುವಿಮರ್ಶೆ ಮಾಡಿಕೊಳ್ಳಬೇಕು.

...ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ಆಜನ್ಮ ಶತ್ರುಗಳಾಗಿ ಯುದ್ಧ ಮಾಡಿಕೊಂಡರೆ ಆ ಯುದ್ಧ ಎರಡೂ ದೇಶಗಳನ್ನು ಕೆಡಿಸುತ್ತದೆ ಮತ್ತು ನಾವು ಕಷ್ಟಪಟ್ಟು ಗೆದ್ದ ಸ್ವಾತಂತ್ರ್ಯವೂ ಕಳೆದು ಹೋಗುತ್ತದೆ...

ನಾನು ಹಿಂದೂಗಳಿಗೆ ಹೇಗೆ ಸ್ನೇಹಿತನೋ, ಹಾಗೆಯೇ ಮುಸ್ಲಿಮರ ಮತ್ತು ಎಲ್ಲ ಧರ್ಮಗಳ ಜನರ ಸ್ನೇಹಿತ ಕೂಡ. ಈ ದೇಶದ ಪ್ರತಿಯೊಬ್ಬ ಮುಸ್ಲಿಮನೂ ತನ್ನ ಸಹೋದರ–ಸಹೋದರಿಯರೊಡನೆ ಶಾಂತಿ ಮತ್ತು ಭದ್ರತೆಯಿಂದ ಮನೆಯಲ್ಲಿ ವಾಸಿಸುವ ತನಕ ನಾನು ವಿಶ್ರಮಿಸುವುದಿಲ್ಲ. ಮತ್ತೆ ಹಿಂದೂಗಳು, ಸಿಖ್ಖರು ಸಹಜವಾಗಿಯೇ ಬಾಳುವ ಹಾಗೆ ಆಗಬೇಕು; ಎಲ್ಲ ಸಮುದಾಯಗಳೂ ಸಹೋದರರ ಹಾಗೆ ಜೀವಿಸಬೇಕು...

ನಾನು ಹನ್ನೆರಡು ವರ್ಷದ ಬಾಲಕನಾಗಿದ್ದಾಗ ಒಂದು ಕನಸು ಕಂಡಿದ್ದೆ. ಅದರಲ್ಲಿ ನಾನು ಈ ದೇಶವನ್ನು ಒಂದು






ಶಾಂತಿ ತುಂಬಿದ ತೋಟವಾಗಿ, ಮತ್ತು ಆ ತೋಟದಲ್ಲಿ ಮುಸ್ಲಿಮರು, ಹಿಂದೂಗಳು ಹಾಗೂ ಎಲ್ಲರೂ ಒಟ್ಟಾಗಿ ಸಹೋದರರಾಗಿ, ಸ್ನೇಹಿತರಾಗಿ ಬಾಳುವ ಹಾಗೆ ಕಲ್ಪಿಸಿಕೊಂಡಿದ್ದೆ. ಈಗ ನೀವೆಲ್ಲರೂ ನನ್ನ ಕನಸನ್ನು ನನಸು ಮಾಡುವುದಕ್ಕೆ ಪ್ರಯತ್ನಿಸಬೇಕು...

ನಮ್ಮ ಆಡಳಿತಗಾರರ ಮತ್ತು ನಮ್ಮ ಒಳ್ಳೆಯತನ, ಹಾಗೂ ಹಿಂದೂಗಳ ಮತ್ತು ಸಿಖ್ಖರ ಒಳ್ಳೆಯತನ ಯಾವುದರಲ್ಲಿ ಅಡಗಿದೆ ಅಂದರೆ, ಮುಸ್ಲಿಮರನ್ನು 'ದೇಶ ಬಿಟ್ಟು ಹೋಗಬೇಡಿ' ಎಂದು ಕೇಳಿಕೊಳ್ಳುವುದರಲ್ಲಿದೆ. ಮುಸ್ಲಿಮರಿಗೆ ಯಾವ ರೀತಿ ಧೈರ್ಯ ತುಂಬಬೇಕು ಎಂದರೆ ಅವರನ್ನು ಯಾರೂ ಮುಟ್ಟಲಿಕ್ಕೆ ಆಗುವುದಿಲ್ಲ ಎಂದು ಅವರಿಗೆ ದೃಢವಾಗಬೇಕು. ನಾವು ಮುಸ್ಲಿಮರನ್ನು ಭಾರತದಲ್ಲಿ ಪ್ರೀತಿಯಿಂದ ನಡೆಸಿಕೊಂಡಿದ್ದೇ ಆದರೆ, ಗಡಿನಾಡಿನ ಅಫ್ರೀದಿಗಳು ಮತ್ತು ಪಂಜಾಬಿನಲ್ಲಿ ಇರತಕ್ಕಂಥ ಮುಸ್ಲಿಮರು ನಮ್ಮ ಜನರಿಗೆ ಓಡಿಹೋಗದಂತೆ ಹೇಳುವರು. ನಮ್ಮ ಒಳ್ಳೆಯ ನಡತೆಯಿಂದ ಅದು ಜಾರಿಯಾಗುತ್ತದೆ. ನಾನು ಹೇಳುತ್ತಿದ್ದೇನೆ ಅಂತಲೋ, ಭಯ ದಿಂದಲೋ ಈ ಕೆಲಸ ಮಾಡದೆ, ಅದನ್ನು ನಿಮ್ಮ ಹೃದಯದ ಆಳದಿಂದ ಮಾಡಿರಿ. ಹಾಗಾದಾಗ ಯಾವ ಮುಸ್ಲಿಮನೂ ನಮಗೆ ಯಾವುದೇ ಕೇಡು ಮಾಡುವುದಿಲ್ಲ. ಅಕಸ್ಮಾತ್ ಮಾಡಿದರೂ, ಮೇಲೆ ದೇವರಿದ್ದಾನೆ. ದೇವರು ಸರ್ವಶಕ್ತ. ಕೊನೆಯಲ್ಲಿ ಎಲ್ಲ ಮಾನವರೂ ದೇವರಿಗೆ ಉತ್ತರಿಸಲೇಬೇಕು. ದೇವರು ನಮ್ಮನ್ನು ಸಂರಕ್ಷಿಸುತ್ತಾನೆ. ಇದರ ಬಗ್ಗೆ ನನ್ನ ಹೃದಯದಲ್ಲಿ ಯಾವುದೇ ಅನುಮಾನವಿಲ್ಲ.

ಕೆಲಜನರು ಮುಸ್ಲಿಮರನ್ನು ನಾಲಾಯಕ್ಕು ಎಂದು ಪರಿಗಣಿಸಿದರೆ, ಅದು ಮಹಾಪಾಪವಾಗುತ್ತದೆ. ಯಾರನ್ನೂ ಹೊರಗಟ್ಟಬಾರದು ಎಂಬುದು ನಮ್ಮ ಅರಿವಿಗೆ ಬಂದು, ಅದು ನಮ್ಮ ಆದ್ಯ ಕರ್ತವ್ಯ ಆಗಬೇಕು. ಮೂಲಭೂತವಾದಿಗಳೆಲ್ಲ 'ಮುಸ್ಲಿಮರೆಲ್ಲರೂ ಹೊರಗೆ ಹೋಗಬೇಕು, ಇಲ್ಲ ಸಾಯಬೇಕು' ಎಂದು ಹೇಳು ತ್ತಿದ್ದಾರೆ. ನಾನು ಮುಸ್ಲಿಮರ ಕಗ್ಗೊಲೆಗೆ ಸಾಕ್ಷಿ

ಆಗುವೆನೇನೋ ಎಂದು ಕೂಡ ಕೇಳುತ್ತಿದ್ದಾರೆ. ಆದರೆ ನಾನು ಏನು ಮಾಡುವೆ ಎಂದು ಆಗಲೇ ಹೇಳಿರುವೆ. ನಾನು ನನ್ನ ಗುರಿ ಸಾಧಿಸುವೆ, ಇಲ್ಲಾ ಸಾಯುವೆ. ಭಾರತದಲ್ಲಿ ಇನ್ನೂ 350 ಮಿಲಿಯನ್ ಮುಸ್ಲಿಮರು ಇದ್ದಾರೆ ಎನ್ನುವುದು ಬಹಳ ಸಂತಸದ ವಿಚಾರ. ಎಷ್ಟು ಜನ ಹೊರಗೆ ಹೋಗಿದ್ದಾರೋ, ಮತ್ತು ಎಷ್ಟು ಜನ ವಾಪಸ್ಸು ಬರುವರೋ ಎಂಬುದು ಇನ್ನೂ ಗೊತ್ತಿಲ್ಲ. ಆದರೆ ಬರುವವರೆಲ್ಲರನ್ನೂ ನಾವು ಒಳಗೆ ಬಿಟ್ಟು ಕೊಳ್ಳಬೇಕು. ಮುಸ್ಲಿಮರ ಬಗ್ಗೆ ನಾವು ಸಿಟ್ಟುಗೊಳ್ಳಬಾರದು. ಆ ದ್ವೇಷದ ದಿನಗಳು ಹೋಗಿ, ಅವರೆಲ್ಲರನ್ನೂ ಸಹೋದರರ ಹಾಗೆ ಕಾಣುವಂತಾಗಬೇಕು...

ನಮ್ಮ ನಡುವೆ ಯಾರಾದರೂ ಮೋಸಗಾರರಿದ್ದರೆ ಅವರನ್ನು ತಡೆಯುವ ಸಾಮರ್ಥ್ಯ ಸರ್ಕಾರಕ್ಕಿದೆ. ಆದರೆ ಅಮಾಯಕ ಮುಸ್ಲಿಂ ಮಕ್ಕಳು, ಮಹಿಳೆಯರು ಮತ್ತು ಮುದುಕರನ್ನು ನೋಯಿಸಿದ್ದಕ್ಕಾಗಿ ನಮಗೇ ನಾಚಿಕೆಯಾಗಬೇಕು. ಈ ಥರದ ಕೃತ್ಯಗಳು ನಿಲ್ಲಲಿ ಎಂದು ಆಶಿಸೋಣ. 'ಕಿರ್ಪಾಣ್'(ಸಿಖ್ಖರ ಪವಿತ್ರ ಸಣ್ಣ ಕತ್ತಿ) ಪವಿತ್ರವಾದದ್ದು. ಮತ್ತು ಅದನ್ನು ಅಸಹಾಯಕರ ಹಾಗೂ ದುರ್ಬಲರ ರಕ್ಷಣೆಗೋಸ್ಕರ ಬಳಸಬೇಕು. ಸಿಖ್ಖರ ಹತ್ತನೆಯ ಮತ್ತು ಕೊನೆಯ ಗುರು ಗೋವಿಂದ್ ಸಿಂಗ್ ಕತ್ತಿ ಇಟ್ಟುಕೊಂಡಿದ್ದರು. ಆದರೆ ದುರ್ಬಲರನ್ನು ಮಟ್ಟ ಹಾಕುವುದಕ್ಕೆ ಯಾವತ್ತೂ ಅದನ್ನು ಬಳಸಲಿಲ್ಲ. ತಮಗೆ ತಾವೇ ಎಷ್ಟೋ ನಿರ್ಬಂಧಗಳನ್ನು ಅವರು ಹಾಕಿಕೊಂಡಿದ್ದರು. ಗುರು ಗೋವಿಂದ್‌ಸಿಂಗರಿಗೆ ಎಷ್ಟೋ ಮುಸ್ಲಿಂ ಶಿಷ್ಯರಿದ್ದರು. ಹಾಗೆಯೇ ಗುರು ನಾನಕರನ್ನೂ ಒಳಗೊಂಡಂತೆ ಇನ್ನಿತರ ಗುರುಗಳಿಗೂ ಮುಸ್ಲಿಂ ಶಿಷ್ಯಂದಿರಿದ್ದರು. ನಿಮ್ಮ ಧೈರ್ಯ, ತಾಕತ್ತು ಯಾವಾಗ ಪರೀಕ್ಷೆಗೆ ಒಳಪಡುತ್ತದೆ ಅಂದರೆ, ಮುಸ್ಲಿಮರನ್ನೂ ಒಳಗೊಂಡಂತೆ ಎಲ್ಲ ಸಮುದಾಯದವರೂ ನಿಮ್ಮ ನಿಷ್ಠಾವಂತ ಸ್ನೇಹಿತರಾದಾಗ ಮಾತ್ರ.

ನಾವು ಧೈರ್ಯವಂತರಾಗಬೇಕು, ಒಳ್ಳೆಯವರಾಗಬೇಕು. ಮುಸ್ಲಿಮರು ಭಾರತದಲ್ಲಿ ಇರಬಾರದು ಎಂದು ಹೇಡಿ ಮಾತ್ರ ಹೇಳುವನು. ಭಾರತದಲ್ಲಿ ಮುಸ್ಲಿಮರು ಭಯದಿಂದ, ಅತ್ತ ಪಾಕಿಸ್ತಾನದಲ್ಲಿ ಹಿಂದೂಗಳು, ಸಿಖ್ಖರು ಭಯದಿಂದ ಬಾಳುವ ಸ್ಥಿತಿಗೆ ನಮ್ಮನ್ನು ನಾವು ಯಾಕೆ ತಂದುಕೊಂಡಿದ್ದೇವೆ ? ನಾವೆಲ್ಲ ಭಾರತದಲ್ಲಿ ಮತ್ತು ಪಾಕಿಸ್ತಾನದಲ್ಲಿ ಎಲ್ಲರೂ ಶಾಂತಿಯಿಂದ ಬಾಳಬಹುದು ಎಂದು ಸುಮ್ಮನೆ ಬಡಾಯಿ ಕೊಚ್ಚುತ್ತಿದ್ದೇವೆ ಅಷ್ಟೇ. ನಾನು ಸರ್ಕಾರಿ ಅಧಿಕಾರಿಗಳಿಗೆ ಏನು ಹೇಳುತ್ತೇನೆಂದರೆ, ನೀವು ಆಶ್ವಾಸನೆಗಳನ್ನು ನೆರವೇರಿಸಬೇಕು. ಸೈನ್ಯ, ಪೊಲೀಸ್ ಮತ್ತು ಎಲ್ಲ ವಲಯಗಳ ಅಧಿಕಾರಿಗಳು ಒಳ್ಳೆಯವರಾಗಬೇಕು. ನಾವು ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳಬೇಕು. ಆಗಲೇ ಅಭಿವೃದ್ಧಿ ಆಗುವುದು. ಇಲ್ಲವೆಂದರೆ, ನಮ್ಮ ಕೈಗೆ ದಕ್ಕಿರುವ ಅಧಿಕಾರದ ಕೀಲಿಕೈ ನಮ್ಮ ಕೈಯಿಂದ ಜಾರಿ ಹೋಗಬಹುದು.

ಒಂದು ಅಲ್ಪಸಂಖ್ಯಾತ ಸಮುದಾಯ ಎಷ್ಟೇ ಸಣ್ಣದಿರಲಿ, ಅದು ತನ್ನ ನೆಚ್ಚಿನ ವಸ್ತುಗಳನ್ನು ಮತ್ತು ತನ್ನ ಗೌರವವನ್ನು ಇಟ್ಟುಕೊಳ್ಳುವುದಕ್ಕೆ ಭಯ ಪಡಬಾರದು. ಒಬ್ಬ ಮನುಷ್ಯನಿಗೆ ತನ್ನ ಸೃಷ್ಟಿಕರ್ತನ ಅರಿವಿದ್ದರೆ, ಹಾಗೂ ಆ ಸೃಷ್ಟಿಕರ್ತನ ಪ್ರತಿರೂಪ ತಾನು ಎನ್ನುವುದು ಗೊತ್ತಾದರೆ, ಈ ಭೂಮಿಯ ಮೇಲೆ ಇರುವ ಯಾವ ಶಕ್ತಿಯೂ ಆ ವ್ಯಕ್ತಿಯ ಸ್ವಮರ್ಯಾದೆಯನ್ನು ಕಿತ್ತುಕೊಳ್ಳಲು ಆಗುವುದಿಲ್ಲ.

ದಕ್ಷಿಣ ಆಫ್ರಿಕಾದ ಟ್ರಾನ್ಸ್ವಾಲ್‌ನ ಒಂದು ಬಲಿಷ್ಠ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಒಬ್ಬ ಆತ್ಮೀಯ ಇಂಗ್ಲಿಷ್ ಸ್ನೇಹಿತ ಹೇಳಿದ್ದ– 'ನನಗೆ ಅಲ್ಪಸಂಖ್ಯಾತರ ಜೊತೆ ಇರುವುದಕ್ಕೆ ಇಷ್ಟ. ಯಾಕೆಂದರೆ ಒಂದು ಅಲ್ಪಸಂಖ್ಯಾತ ಸಮುದಾಯ ಸಾಮಾನ್ಯವಾಗಿ ತಪ್ಪು ಮಾಡುವುದಿಲ್ಲ. ತಪ್ಪು ಮಾಡಿದರೂ ತಿದ್ದಿಕೊಳ್ಳಬಹುದು. ಆದರೆ, ಬಹು ಸಂಖ್ಯಾತರಿಗೆ ಅಧಿಕಾರದ ಅಮಲು ಏರಿದರೆ ಅವರನ್ನು ತಿದ್ದುವುದು ಭಾಳ ಕಷ್ಟ.' ಅಲ್ಪಸಂಖ್ಯಾತ ಸ್ಥಾನದ ಬೆಲೆಯನ್ನು ಭಾರತದ ಮುಸ್ಲಿಮರು ಅರಿತುಕೊಂಡರೆ ಇಸ್ಲಾಮ್ ಧರ್ಮದ ಅದ್ಭುತಗಳನ್ನು ಮುಸ್ಲಿಮರು ತಮ್ಮದೇ ರೀತಿಯಲ್ಲಿ ತೋರಿಸ ಬಹುದು. ಅವರು ಏನನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಅಂದರೆ, ಇಸ್ಲಾಮಿನ ಅದ್ಭುತ ದಿನಗಳು ಪ್ರವಾದಿ ಮಹಮ್ಮದರ ಸಮುದಾಯ ಮೆಕ್ಕಾದಲ್ಲಿ ಒಂದು ಅಲ್ಪಸಂಖ್ಯಾತ ಸಮುದಾಯ ಆಗಿದ್ದ ಕಾಲದವು ಎಂಬುದನ್ನು...

ಈಗ [ಕ್ರಿಸ್‌ಮಸ್ ಸಂದರ್ಭದಲ್ಲಿ] ನಾವು ದ್ವೇಷದಲ್ಲಿ ತೊಡಗಿ ಮನಸ್ಸನ್ನು ಕೆಡಿಸಿಕೊಳ್ಳಬಾರದು... ಭಾರತದಲ್ಲಿನ ಮತ್ತು ಹೊರದೇಶಗಳಲ್ಲಿನ ಕ್ರಿಶ್ಚಿಯನ್ನರಿಗೆ ಶುಭ ಹಾರೈಸುತ್ತಾ ನಾನು ಹೇಳುವ ಮಾತೇನೆಂದರೆ, ಅವರೆಲ್ಲ ಸ್ವ–ನಿಯಂತ್ರಣ ಸಾಧಿಸಬೇಕು, ಯೇಸುಕ್ರಿಸ್ತನ ಹಾದಿಯನ್ನು ಅನುಕರಿಸಬೇಕು. ಚರ್ಚ್ ನಮ್ಮಿಂದ ಹೊರಗಿಲ್ಲ, ಅದು ನಮ್ಮ ಒಳಗೇ ಇದೆ. ನಮ್ಮ ದೇಹವೇ ಚರ್ಚ್. ಅಲ್ಲೇ ದೇವರು ಇದ್ದಾನೆ. ಕ್ರಿಶ್ಚಿಯನ್ನರು ಚಿಂತಿಸಬೇಕಿಲ್ಲ. ಕ್ರಿಸ್ತನ ತ್ಯಾಗದ ದಾರಿಯಲ್ಲಿ ಅವರೆಲ್ಲ ಸಾಗಿದರೆ, ಅವರ ಧರ್ಮವನ್ನು ಕಿತ್ತುಕೊಳ್ಳುವುದಕ್ಕೆ ಯಾರಿಂದಲೂ ಆಗುವುದಿಲ್ಲ...

**ಮುಸ್ಲಿಮರನ್ನು ಕುರಿತು:**

'ನೀವು [ಹಿಂದೂಗಳು ದಾಳಿ ಮಾಡುತ್ತಿದ್ದಾರೆ ಎಂದು] ಹೇಳುತ್ತಿರುವುದಕ್ಕೆ ಸಾಕ್ಷಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಮೇಲಾಗಿ ಮುಸ್ಲಿಮರು ಕೂಡ ತಮ್ಮ ಹತ್ತಿರ ಆಯುಧಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತಿದ್ದಾರೆ ಎಂಬ ದೂರು ಇದೆ. ಹಾಗಾಗಿ ಮೊದಲು ನೀವು ಮುಸ್ಲಿಂ ಸಹೋದರರಿಗೂ ಕೂಡ ಆಯುಧಗಳನ್ನು ಬಿಡುವಂತೆ ಹೇಳಬೇಕು; ಮತ್ತು ಆಯುಧಗಳನ್ನೆಲ್ಲ ತಂದು ನನ್ನ ಬಳಿ ಇಡಬೇಕು ಎಂದು ಎಲ್ಲರಿಗೂ ಹೇಳಬೇಕು. ಹಾಗೆಯೇ ಸರಕಾರವೇನಾದರೂ ಮುಸ್ಲಿಮರಿಗೆ ರಕ್ಷಣೆ ಕೊಡಲಿಕ್ಕೆ ಆಗದಿದ್ದರೆ ಮುಸ್ಲಿಮರು ಸಾಯುವುದಕ್ಕೆ ಮುಂಚೆ ನಾನೇ ಸಾಯುವೆ.'

**ಸಿಖ್ಖರನ್ನು ಕುರಿತು:**

'ಸಿಖ್ಖರು ಅನಗತ್ಯ ದ್ವೇಷ, ಸಿಟ್ಟನ್ನು ಮಟ್ಟ ಹಾಕುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದೇ ಗುರು ಗೋವಿಂದ್‌ಸಿಂಗ್ ಮಹಾರಾಜರ ನಿಜವಾದ ಬೋಧನೆ. 'ಒಬ್ಬ ಸಿಖ್ ಒಂದೂವರೆ ಲಕ್ಷ ಜನರಿಗೆ ಸಮ' ಎಂದು ಅವರು ಹೇಳುತ್ತಾರೆ. ಸಿಖ್ಖರಿಗೆ ಜಯವಾಗಲಿ.'

**(ಗಾಂಧೀಜಿ ತಮ್ಮ ಬದುಕಿನ ಕೊನೆಯ 200 ದಿನಗಳಲ್ಲಿ ಆಡಿದ ಮಾತುಗಳ ಸಂಗ್ರಹ)**

**(ಕನ್ನಡಕ್ಕೆ: ಎಚ್. ಎಸ್. ಶೋಯಿಂಕಾ)**

**Karnataka Gandhi Smaraka Nidhi**
Gandhi Bhavana, Kumara Park East
Bengaluru -560001

https://gandhibhavan.in

# GANDHI BHAVAN DIGITAL ARCHIVE

#SERVANTSOFKNOWLEDGE
Scanning Is The New Spinning

https://archive.org/details/GandhiBhavan

TO PROPAGATE GANDHIAN IDEOLOGY,
WE TAKE A STEP TOWARDS A DIGITAL APPROACH.



## GANDHI SANCHAYA

https://gandhi.sanchaya.net

KARNATAKA GANDHI SAMARAKA NIDHI PUBLICATION
ALL OUR BOOKS ARE NOW FREELY AVAILABLE

## BAPU PRAPANCHA

GANDHI BHAVAN MAGAZINE
IS NOW AVAILABLE AS AN EBOOK

Google Play Books

iBooks

ಬಾಪು ಪ್ರಪಂಚ (ಕನ್ನಡ-ಇಂಗ್ಲೀಷ್) ಮಾಸ ಪತ್ರಿಕೆ
RNI No. KARBIL/2019/77950 Regd No.KA/BGGPO/2589/2023-25
Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58